ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್ ದಾವಣಗೆರೆ. ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ.

# ಉಪ ನಿರ್ದೇಶಕರ ಕಾರ್ಯಾಲಯ, ದಾವಣಗೆರೆ.

## ಎಸ್.ಎಸ್.ಎಲ್.ಸಿ ಫಲಿತಾಂಶದ ಉನ್ನತೀಕರಣಕ್ಕಾಗಿ - ಪ್ರಶ್ನೆಕೋಠಿ : 2018-19.

## ವಿಷಯ:- ಸಮಾಜ ವಿಜ್ಞಾನ

# ಉನ್ನತಿ

ಸಲಹೆ ಮತ್ತು ಸಹಕಾರ

**ಶ್ರೀ. ಪರಮೇಶ್ವರಪ್ಪ. ಸಿ.ಆರ್**

ಉಪ ನಿರ್ದೇಶಕರು ಸಾ.ಶಿ.ಇಲಾಖೆ ದಾವಣಗೆರೆ.

**ಶ್ರೀ ಲಿಂಗರಾಜು. ಹೆಚ್.ಕೆ.**

ಪ್ರಾಂಶುಪಾಲರು, ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ),
ಡಯಟ್, ದಾವಣಗೆರೆ.

**ಶ್ರೀ. ಎಂ. ನಿರಂಜನ್ ಮೂರ್ತಿ**

ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ ದಾವಣಗೆರೆ.

ಮಾರ್ಗದರ್ಶನ

**ಶ್ರೀಮತಿ ಶಶಿಕಲಾ ಎಂ**

ವಿಷಯ ಪರಿವೀಕ್ಷಕರು. ಸಮಾಜ ವಿಜ್ಞಾನ.

ಕೈಪಿಡಿ ರಚನೆ-

**ಜಿಲ್ಲಾ ಸಂಪನ್ಮೂಲ ಶಿಕ್ಷಕರ ತಂಡ. ದಾವಣಗೆರೆ.**

# ಸಂಪನ್ಮೂಲ ತಂಡದ ಪರಿಚಯ – [ಎಸ್.ಟಿ,ಎಫ್ – ದಾವಣಗೆರೆ]

| ಕ್ರ. ಸಂ | ಸಂಪನ್ಮೂಲ ಶಿಕ್ಷಕರ ಹೆಸರು | ಪರಿಚಯ | ಶಾಲೆಯ ವಿಳಾಸ | ಮೊ; ಸಂಖ್ಯೆ |
|---|---|---|---|---|
| 1 | ಹೆಚ್. ಹುಸೇನ್ ಪೀರ್ | ತಂಡದ ನಾಯಕರು ಮತ್ತು ತಾಂತ್ರಿಕ ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ ತೆಲಿಗಿ ಹರಪನಹಳ್ಳಿ ತಾ. | 9980007689 |
| 2 | ರಾಮಚಂದ್ರಪ್ಪ | ತಾಂತ್ರಿಕ ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ ಗೋಪಗೊಂಡನಹಳ್ಳಿ ಹೊನ್ನಾಳಿ ತಾ. | 9448310913 |
| 3 | ವೀರೇಶ್ | ತಾಂತ್ರಿಕ ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ.ಪ.ಪೂ.ಕಾಲೇಜು [ಮಾಜಿ ಪುರಸಭೆ] ಪ್ರೌಢಶಾಲಾ ವಿಭಾಗ ದಾವಣಗೆರೆ [ಉತ್ತರ] | 9986261446 |
| 4 | ರಮೇಶ್ | ತಾಂತ್ರಿಕ ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ, ಜಿ.ಕೆ ಹಳ್ಳಿ ಚನ್ನಗಿರಿ ತಾ. | 9901867082 |
| 5 | ಪ್ರದೀಪ್ | ತಾಂತ್ರಿಕ ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ ಗೌರಿಪುರ. ಜಗಳೂರು ತಾ. | 9901898967 |
| 6 | ದಿನೇಶ್ | ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ ಹಾಲಿವಾಣ. ಹರಿಹರ ತಾ. | 9980728280 |
| 7 | ಪುರುಷೋತ್ತಮ ರಾಜು | ಸಂಪನ್ಮೂಲ ವ್ಯಕ್ತಿಗಳು | ಸ.ಪ.ಪೂ.ಕಾ [ಬಾಲಕರ] ಪ್ರೌಢಶಾಲಾ ವಿಭಾಗ ದಾವಣಗೆರೆ [ದಕ್ಷಿಣ] | 9448422884 |
| 8 | ಆನಂದ್ ಹಾವನೂರು | ಸಂಪನ್ಮೂಲ ವ್ಯಕ್ತಿಗಳು | ಸರ್ಕಾರಿ ಪ್ರೌಢಶಾಲೆ ಹಿಕ್ಕಿಮಗೆರೆ. ಹರಪನಹಳ್ಳಿ ತಾ. | 8217873565 |

## ವಿಶೇಷ ಸಹಕಾರ ಮತ್ತು ಸಲಹೆ:–

ಸಂತೋಷ್ ಕುಮಾರ ಸಿ.

ಸ.ಶಿ. ಸರ್ಕಾರಿ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ, ಬಳ್ಳಾರಿ.

ಮಹದೇವ ಕುಂದರಗಿ

ಸ.ಶಿ. ಸರ್ಕಾರಿ ಪ್ರೌಢಶಾಲೆ, ಆವತಿ, ಚಿಕ್ಕಮಂಗಳೂರು.

# ಇತಿಹಾಸ

## 1. ಭಾರತಕ್ಕೆ ಯುರೋಪಿಯನ್ನರ ಆಗಮನ

### ಬಹುಆಯ್ಕೆ ಪ್ರಶ್ನೆಗಳು:

**1. ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಭಾರತಕ್ಕೆ ಬಂದವನು.**

ಎ) ಆಲ್ಫೋನ್ಸೊ ಆಲ್ಬುಕರ್ಕ್ ಬಿ) ರಾಬರ್ಟ್ ಕ್ಲೈವ್

ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೆಡ್

**2. ಭಾರತದಲ್ಲಿದ್ದ ಫ್ರೆಂಚರ ರಾಜಧಾನಿ**

ಎ) ಪಾಂಡಿಚೇರಿ ಬಿ)ಗೋವಾ ಸಿ)ಸೂರತ್ ಡಿ)ಕಲ್ಲಿಕೋಟೆ

**3. 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತಂದವನು.**

ಎ) ಆಲ್ಫೋನ್ಸೊ ಆಲ್ಬುಕರ್ಕ್ ಬಿ) ರಾಬರ್ಟ್ ಕ್ಲೈವ್

ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೆಡ್

**4. ಈ ಕೆಳಗಿನ –– ಮತ್ತು –– ಆಗಮನದ ನಂತರ ಪೋರ್ಚುಗೀಸರು ರಾಜಕೀಯವಾಗಿ ಕಳೆಗುಂದಿದರು.**

ಎ) ಫ್ರೆಂಚರು & ಇಂಗ್ಲಿಷರ ಬಿ) ಡಚ್ಚರು & ಇಂಗ್ಲಿಷರ

ಸಿ) ಅರಬ್ಬರು & ಇಂಗ್ಲಿಷರ ಡಿ) ಡಚ್ಚರು & ಫ್ರೆಂಚರ

**5. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ 'ದಿವಾನಿ' ಹಕ್ಕನ್ನು –––––– ನೀಡಿದನು.**

ಎ) ಜಹಾಂಗೀರ್ ಬಿ) ಫಾರೂಕ್ ಶಿಯಾರ್

ಸಿ) 2ನೇ ಷಾ ಆಲಂ ಡಿ) ಮೀರ್ ಖಾಸಿಂ

**6. ಬಂಗಾಳದಲ್ಲಿ 'ದ್ವಿ ಪ್ರಭುತ್ವ'ವನ್ನು ಜಾರಿಗೆ ತಂದವನು**

ಎ) ಆಲ್ಫೋನ್ಸೊ ಆಲ್ಬುಕರ್ಕ್ ಬಿ) ರಾಬರ್ಟ್ ಕ್ಲೈವ್ ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೆಡ್

### ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲ ಉತ್ತರಿಸಿರಿ:

**1. 1453ರಲ್ಲಿ ಆಟೋಮಾನ್ ಟರ್ಕರು ಯಾವ ನಗರವನ್ನು ವಶಪಡಿಸಿಕೊಂಡರು?**

❖ 1453ರಲ್ಲಿ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.

**2. ವೈಜ್ಞಾನಿಕ ಆವಿಷ್ಕಾರಗಳು ಹೊಸ ಸಮುದ್ರ ಮಾರ್ಗಗಳ ಅನ್ವೇಷಣೆಗೆ ಸಹಕಾರಿಯಾದವು. ಹೇಗೆ?**

❖ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದು, ಮೊದಲಾದವುಗಳು ಸಾಗರಯಾನ ಕೈಗೊಳ್ಳುವ ನಾವಿಕರಿಗೆ ಸಹಕಾರಿಯಾದವು.

**3. ಭಾರತ ಹಾಗೂ ಯುರೋಪ್ ನಡುವೆ ಹೊಸ ಜಲ ಮಾರ್ಗವನ್ನು ಕಂಡು ಹಿಡಿದವನು ಯಾರು?**

❖ ವಾಸ್ಕೋಡಿಗಾಮ

**4. ಫ್ರಾನ್ಸಿಸ್ಕೊ ಡಿ ಆಲ್ಮೆಡ ಭಾರತದಲ್ಲಿ 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತರಲು ಕಾರಣವೇನು?**

❖ ಭೂಮಿಯ ಮೇಲಿನ ಅಧಿಪತ್ಯಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವುದು.

**5. ದಿವಾನಿ ಹಕ್ಕು ಎಂದರೇನು?**

❖ ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ದಿವಾನಿ ಹಕ್ಕೆನ್ನುವರು.

### ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. 'ಕಾನ್‌ಸ್ಟಾಂಟಿನೋಪಲ್ ನಗರವು ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು'. ಈ ಹೇಳಿಕೆಯನ್ನು ಸಮರ್ಥಿಸಿ. (ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?)**

❖ ಮಧ್ಯಕಾಲದಲ್ಲಿಯೂ ಯುರೋಪ್, ಭಾರತ ಮತ್ತು ಇತರ ಏಷ್ಯಾದ ದೇಶಗಳ ನಡುವೆ ವ್ಯಾಪಾರ ಮುಂದುವರೆಯಿತು.

❖ ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.

❖ ಅಲ್ಲಿಂದ ಇಟಲಿಯ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು.

❖ ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

**2. ಮೊದಲನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.**

❖ ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಮದ್ರಾಸನ್ನು ವಶಪಡಿಸಿಕೊಂಡನು.

❖ ಬ್ರಿಟಿಷರ ಸಹಾಯಕ್ಕೆ ಬಂದ ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನನ್ನು ಫ್ರೆಂಚರು ಸೋಲಿಸಿದರು.

❖ ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮಾರಿಷಸ್‌ಗೆ ಹೊರಟು ಹೋದನು.

❖ ಅಂತಿಮವಾಗಿ ಈ ಯುದ್ಧವು ಏಕ್ಸ್–ಲಾ– ಚಾಪೆಲ್ ಒಪ್ಪಂದದೊಂದಿಗೆ ಮುಕ್ತಾಯವಾಯಿತು.

❖ ಕೊನೆಗೆ ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಅಂತ್ಯವಾಯಿತು.

**3. ಮೂರನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.**

❖ ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.

❖ ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನು.

❖ ಐರ್‌ಕೂಟನು ಪಾಂಡಿಚೆರಿಗೂ ಮುತ್ತಿಗೆ ಹಾಕಿದಾಗ ಲ್ಯಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು.

**4. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

<u>ಕಾರಣಗಳು</u>

❖ ದಸ್ತಕ್‌ಗಳ ದುರುಪಯೋಗ

❖ ಅನುಮತಿ ಇಲ್ಲದೆ ಕೋಟೆಯ ದುರಸ್ಥಿ

❖ ಕಪ್ಪುಕೋಣೆ ದುರಂತ

<u>ಪರಿಣಾಮಗಳು</u>

❖ ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಲೋಭಿತನವನ್ನು ಪ್ರದರ್ಶಿಸಿತು.

❖ ಮೀರ್ ಜಾಫರ್ ಬಂಗಾಳದ ನವಾಬನಾದನು.

❖ ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರದ ಅನಿರ್ಬಂಧಿತ ಹಕ್ಕನ್ನು ಪಡೆಯಿತು.

❖ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

**5. ಬಕ್ಸಾರ್ ಕದನದ ಪರಿಣಾಮಗಳಾವುವು?**

❖ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.

❖ ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.

❖ ಷುಜ್–ಉದ್–ದೌಲನು ಯುದ್ಧನಷ್ಟ ಪರಿಹಾರವಾಗಿ 50ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡವುದು.

❖ ಮೀರ್ ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿ ವಹಿಸಿಕೊಂಡಿತು.

**6. ದ್ವಿ ಪ್ರಭುತ್ವ ಪದ್ಧತಿ ಎಂದರೇನು?**

❖ ರಾಬರ್ಟ್ ಕ್ಲೈವನು ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿಯನ್ನು ಜಾರಿಗೆ ತಂದನು.

❖ ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು.

❖ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

# 2. ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

## <u>ಬಹುಆಯ್ಕೆ ಪ್ರಶ್ನೆಗಳು:</u>

**1. ಮೊದಲನೇ ಆಂಗ್ಲೋ ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ ----- ಒಪ್ಪಂದ ಆಯಿತು.**

ಎ)ಸಾಲ್ಬಾಯ್ ಬಿ)ಬೆಸ್ಸಿನ್ ಸಿ)ಮದ್ರಾಸ್ ಡಿ)ಲಾಹೋರ್

**2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ವೆಲ್ಲೆಸ್ಲಿ ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

**3. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ**

ಎ) ಹೈದರಾಬಾದ್ ಬಿ) ಗ್ವಾಲಿಯರ್ ಸಿ) ಮೈಸೂರು ಡಿ) ಪಂಜಾಬ್

**4. ಮರಾಠರ ಕೊನೆಯ ಪೇಶ್ವೆ**

ಎ) ರಘೋಬ ಬಿ) ನಾನಾ ಫಡ್ನವೀಸ್ ಸಿ) ಎರಡನೇ ಮಾಧವರಾವ ಡಿ) 2ನೇ ಬಾಜಿರಾಯ

**5. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ವೆಲ್ಲೆಸ್ಲಿ

ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

## <u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>

**1. ಸಹಾಯಕ ಸೈನ್ಯ ಪದ್ಧತಿ ಎಂದರೇನು?**

❖ ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ.

**2. ಎರಡನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣವೇನು?**

❖ ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು.

**3. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು?**

❖ ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದಗಳು

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. 1ನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳೇನು?**

❖ ಮೊಘಲ್ ಚಕ್ರವರ್ತಿಯು ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟಿದ್ದು

❖ ಪೇಶ್ವೆ ಹುದ್ದೆಗಾಗಿ ಮರಾಠರ ಅಂತರಿಕ ಕಚ್ಚಾಟ

❖ ರಘೋಬನು ಬ್ರಿಟಿಷರ ಸಹಾಯ ಕೋರಿದ್ದು

**2. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?**

❖ ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.

❖ ಸೇನೆಯ ವೆಚ್ಚವನ್ನು ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.

❖ ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.

❖ ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.

❖ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

❖ ಕಂಪನಿಯು ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**3. ಎರಡನೇ ಆಂಗ್ಲೋ ಮರಾಠ ಯುದ್ಧವನ್ನು ವಿವರಿಸಿ.**

❖ ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು.

❖ 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು.

❖ ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.

❖ ಪರಿಣಾಮವಾಗಿ ಪೇಶ್ವೆಯ ವಿರುದ್ಧ ಮರಾಠ ಮನೆತನಗಳು ಒಗ್ಗೂಡಿದವು.

❖ 1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು.

**4. ಬ್ರಿಟಿಷರು ಪಂಜಾಬನ್ನು ಹೇಗೆ ವಶಪಡಿಸಿಕೊಂಡರು? / ಆಂಗ್ಲೋ ಸಿಖ್ ಯುದ್ಧದ ಬಗ್ಗೆ ಟಿಪ್ಪಣಿ ಬರೆಯಿರಿ.**

❖ ಬ್ರಿಟಿಷರು 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಮುಂದಾದರು.

❖ 1845ರ ಡಿಸೆಂಬರಿನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು.

❖ ಸೋತ ಸಿಖ್ಖರು ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು.

❖ 1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಪಂಜಾಬಿಗಳು ಪ್ರತಿಭಟಿಸಿದರು.

❖ ಪಂಜಾಬಿಗಳನ್ನು ಸೋಲಿಸಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಸಿದನು.

**5. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?**

❖ ಲಾರ್ಡ್ ಡಾಲ್‌ಹೌಸಿಯು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಜಾರಿಗೆ ತಂದನು.

❖ ಈ ನೀತಿಯ ಪ್ರಕಾರ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.

❖ ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.

❖ ಈ ನೀತಿಗೆ ಒಳಪಟ್ಟ ರಾಜ್ಯಗಳೆಂದರೆ ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದಗಳು.

❖ ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಡಾಲ್ ಹೌಸಿಯು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು.

# 3. ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

## ಬಹುಆಯ್ಕೆ ಪ್ರಶ್ನೆಗಳು:

**1. ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

**2. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

**3. ಸೂಪರಿಡೆಂಟೆಂಟ್ ಆಫ್ ಪೋಲೀಸ್ ಹುದ್ದೆಯನ್ನು ಸೃಷ್ಟಿಸಿದವನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ವಿಲಿಯಂ ಬೆಂಟಿಂಕ್

**4. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವನು**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ಥಾಮಸ್ ಮನ್ರೋ

**5. ಮಹಲ್ ಎಂದರೆ**

ಎ) ಗ್ರಾಮ ಬಿ) ನಗರ ಸಿ) ತಾಲ್ಲೂಕು ಡಿ) ಜಿಲ್ಲೆ

**6. ರೆಗ್ಯುಲೇಟಿಂಗ್ ಕಾಯ್ದೆ -----ರಲ್ಲಿ ಜಾರಿಗೆ ಬಂದಿತು.**

ಎ) 1773 ಬಿ) 1784 ಸಿ) 1858 ಡಿ) 1861

**7. ಭಾರತದಲ್ಲಿದ್ದ ಕಂಪನಿಯ ಅಧೀನದ ಪ್ರದೇಶಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿದ ಕಾಯ್ದೆ**

ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ

ಸಿ) 1858ರ ಭಾರತ ಸರ್ಕಾರದ ಕಾಯ್ದೆ ಡಿ) 1861ರ ಭಾರತೀಯ ಪರಿಷತ್ ಕಾಯ್ದೆ

**8. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಕಾಯ್ದೆ**

ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ

ಸಿ) 1813ರ ಚಾರ್ಟರ್ ಕಾಯ್ದೆ ಡಿ) 1833ರ ಚಾರ್ಟರ್ ಕಾಯ್ದೆ

**9. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು -----ಯು ನಿರ್ದೇಶಿಸಿತು.**

ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ

ಸಿ) 1813ರ ಚಾರ್ಟರ್ ಕಾಯ್ದೆ ಡಿ) 1833ರ ಚಾರ್ಟರ್ ಕಾಯ್ದೆ

**10. ಬ್ರಿಟಿಷ್ ಭಾರತದ ಮೊದಲ ವೈಸ್ ರಾಯ್**

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ ಸಿ) ಲಾರ್ಡ್ ಡಾಲ್ ಹೌಸಿ ಡಿ) ಲಾರ್ಡ್ ಕ್ಯಾನಿಂಗ್

**11. ಈ ಕೆಳಗಿನ ಯಾವ ಕಾಯ್ದೆಯನ್ನು 'ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ' ಎಂತಲೂ ಕರೆಯುವರು.**

ಎ) 1861ರ ಭಾರತೀಯ ಪರಿಷತ್ ಕಾಯ್ದೆ ಬಿ) 1909 ಭಾರತೀಯ ಪರಿಷತ್ ಕಾಯ್ದೆ

ಸಿ) 1919ರ ಭಾರತೀಯ ಪರಿಷತ್ ಕಾಯ್ದೆ ಡಿ) 1935ರ ಭಾರತ ಸರ್ಕಾರದ ಕಾಯ್ದೆ

**12. ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೊಳಿಸಿದ ಕಾಯ್ದೆ**

ಎ) 1861ರ ಭಾರತೀಯ ಪರಿಷತ್ ಕಾಯ್ದೆ ಬಿ) 1909 ಭಾರತೀಯ ಪರಿಷತ್ ಕಾಯ್ದೆ

ಸಿ) 1919ರ ಭಾರತೀಯ ಪರಿಷತ್ ಕಾಯ್ದೆ ಡಿ) 1935ರ ಭಾರತ ಸರ್ಕಾರದ ಕಾಯ್ದೆ

**1. ಮಹಲ್ವಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು?**

❖ ಮಹಲ್ವಾರಿ ಪದ್ಧತಿಯನ್ನು ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು.

**2. 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವನು ಯಾರು?**

❖ ಜೊನಾಥನ್ ಡಂಕನ್ ಎಂಬುವನು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.

**3. ಬ್ರಿಟಿಷರು 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತಂದ ಪ್ರಮುಖ ಉದ್ದೇಶವೇನು?**

❖ ಕಂಪನಿ ಅಧಿಕಾರಿಗಳ ಭ್ರಷ್ಟಾಚಾರ ನಿಯಂತ್ರಿಸುವುದು.

**4. ಭಾರತದಲ್ಲಿ ಸುಪ್ರಿಂಕೋರ್ಟ್ ಸ್ಥಾಪನೆಗೆ ಕಾರಣವಾದ ಕಾಯ್ದೆ ಯಾವುವು?**

❖ 1773ರ ರೆಗ್ಯುಲೇಟಿಂಗ್ ಕಾಯ್ದೆ

**5. ಚಾರ್ಟರ್ ಕಾಯ್ದೆಗಳ ಪ್ರಮುಖ ಉದ್ದೇಶವೇನು?**

❖ ಚಾರ್ಟರ್ ಕಾಯ್ದೆಗಳ ಪ್ರಮುಖ ಉದ್ದೇಶ ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿಯನ್ನು ವಿಸ್ತರಿಸುವುದು.

**6. 1909 ಭಾರತೀಯ ಪರಿಷತ್ ಕಾಯ್ದೆಯು ಭಾರತವನ್ನು ಮತೀಯ ಆಧಾರದ ಮೇಲೆ ವಿಭಜಿಸಿತು ಎಂದು ಹೇಗೆ ಹೇಳುವಿರಿ.**

❖ ಮುಸ್ಲಿಮರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

**7. 1919ರ ಕಾಯ್ದೆಯಂತೆ ಕೇಂದ್ರ ಶಾಸಕಾಂಗದಲ್ಲಿ ರಚನೆಯಾದ ಎರಡು ಸದನಗಳು ಯಾವುವು?**

❖ ಶಾಸಕಾಂಗ ಸಭೆ (ಕೆಳಮನೆ) ಮತ್ತು ರಾಜ್ಯಗಳ ಪರಿಷತ್ತು (ಮೇಲ್ಮನೆ)

**8. 1935ರ ಭಾರತ ಸರ್ಕಾರ ಕಾಯ್ದೆಯನ್ನು ಸ್ವತಂತ್ರ ಭಾರತದ ಸಂವಿಧಾನದ ಬುನಾದಿಯೆಂದು ಪರಿಗಣಿಸಲಾಗಿದೆ. ಏಕೆ?**

❖ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?**

❖ ಲಾರ್ಡ್ ಕಾರ್ನ್‌ವಾಲೀಸನು ಪ್ರಥಮತಃ ವ್ಯವಸ್ಥಿತವಾದ ಪೋಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು.

❖ 'ಸೂಪರಿಡೆಂಟೆಂಟ್ ಆಫ್ ಪೋಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು.

❖ ಪ್ರತಿ ಜಿಲ್ಲೆಯನ್ನು 'ಠಾಣೆ'ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನಕ್ಕೆ ತರಲಾಯಿತು.

❖ ಹಳ್ಳಿಗಳು 'ಚೌಕಿದಾರ'ರ ಅಧೀನಕ್ಕೆ ಬಂದವು

❖ ಮುಂದೆ ಪೋಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೊಳಪಟ್ಟರು.

❖ 1861ರಲ್ಲಿ 'ಪೋಲೀಸ್ ಕಾಯ್ದೆ' ಜಾರಿಗೆ ಬಂದಿತು.

**2. ರೈತವಾರಿ ಪದ್ಧತಿಯ ಪ್ರಮುಖಾಂಶಗಳು ಯಾವುವು?**

❖ ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು.

❖ ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.

❖ ರೈತನೇ ನೇರವಾಗಿ ಕೃಷಿ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.

❖ ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು.

**3. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳ ಪಟ್ಟಿ ಮಾಡಿ.**

❖ ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಮೊದಲಾದ ಪರಿಕಲ್ಪನೆಗಳ ಪರಿಚಯವಾಯಿತು.

❖ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.

❖ ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.

❖ ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.

❖ ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ಉಂಟಾಯಿತು.

❖ ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.

❖ ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

**4. ರೆಗ್ಯುಲೇಟಿಂಗ್ ಕಾಯ್ದೆಯ ನಿಬಂಧನೆಗಳಾವುವು?**

❖ ಬಂಗಾಳದ ಪ್ರೆಸಿಡೆನ್ಸಿಯು ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.

❖ ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.

❖ ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳನ್ನು ನಿಯಂತ್ರಿಸುವ ಅಧಿಕಾರ ನೀಡಿತು.

❖ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯುದ್ಧ ಅಥವಾ ಶಾಂತಿ ಸಂಧಾನವನ್ನು ಮಾಡಿಕೊಳ್ಳಲು ಬಂಗಾಳ ಪ್ರೆಸಿಡೆನ್ಸಿಯ ಪೂರ್ವಾನುಮತಿ ಅಗತ್ಯ.

❖ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪಿಸಲಾಯಿತು.

**5. 1909ರ ಕಾಯ್ದೆಯ ಪ್ರಮುಖಾಂಶಗಳು ಯಾವುವು?**

❖ ಕೇಂದ್ರ ಶಾಸನ ಸಭೆಯ ಸದಸ್ಯರ ಹೆಚ್ಚಳ

❖ ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರ ಸ್ಥಾನಗಳ ಹೆಚ್ಚಳ

❖ ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ

❖ ಮುಸ್ಲಿಂರ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆ ಜಾರಿ

**6. 1919ರ ಕಾಯ್ದೆಯ ಪ್ರಮುಖಾಂಶಗಳು ಯಾವುವು?**

❖ ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ

❖ ಪ್ರಾಂತ್ಯಗಳಲ್ಲಿ "ದ್ವಿಸರಕಾರ" ಪದ್ದತಿಗೆ ಅವಕಾಶ

❖ ಭಾರತಕ್ಕೆ ಒಬ್ಬ ಹೈಕಮಿಷನರ್ ನೇಮಕ

❖ ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ

❖ ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟ್ ಪ್ರತ್ಯೇಕ

❖ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ, ಸಿಖ್ ಮೊದಲಾದವರಿಗೆ ವಿಸ್ತರಣೆ

**7. 1935ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ.**

❖ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ.

❖ ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ.

❖ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ.

❖ ಆದ್ದರಿಂದ ಈ ಕಾಯ್ದೆಯು ಭಾರತ ಸಂವಿಧಾನದ ಬುನಾದಿಯಾಗಿದೆ.

# 4. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

## ಬಹುಆಯ್ಕೆ ಪ್ರಶ್ನೆಗಳು:

**1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧವು ಈ ಒಪ್ಪಂದದೊಂದಿಗೆ ಅಂತ್ಯಗೊಂಡಿತು.**

ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗಪಟ್ಟಣ ಒಪ್ಪಂದ ಸಿ) ಮದ್ರಾಸ್ ಒಪ್ಪಂದ ಡಿ) ಸಾಲ್ಬಾಯ್ ಒಪ್ಪಂದ

**2. ಎರಡನೆಯ ಆಂಗ್ಲೋ ಮೈಸೂರು ಯುದ್ಧವು ಒಪ್ಪಂದದೊಂದಿಗೆ ಕೊನೆಗೊಂಡಿತು.**

ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗಪಟ್ಟಣ ಒಪ್ಪಂದ ಸಿ) ಮದ್ರಾಸ್ ಒಪ್ಪಂದ ಡಿ) ಸಾಲ್ಬಾಯ್ ಒಪ್ಪಂದ

**3. ಮೂರನೇ ಆಂಗ್ಲೋ ಮೈಸೂರು ಯುದ್ಧವು ಒಪ್ಪಂದದೊಂದಿಗೆ ಕೊನೆಗೊಂಡಿತು.**

ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗಪಟ್ಟಣ ಒಪ್ಪಂದ ಸಿ) ಮದ್ರಾಸ್ ಒಪ್ಪಂದ ಡಿ) ಸಾಲ್ಬಾಯ್ ಒಪ್ಪಂದ

**4. ಅಮರ ಸುಳ್ಯ ಬಂಡಾಯವು ಮೂಲತಃ -- ಬಂಡಾಯ**

ಎ) ಕಾರ್ಮಿಕ ಬಂಡಾಯ ಬಿ) ರೈತ ಬಂಡಾಯ ಸಿ) ಸೈನಿಕ ಬಂಡಾಯ ಡಿ) ರಾಜ ಬಂಡಾಯ

**5. ಸುರಪುರವು ಈಗಿನ ------ ಜಿಲ್ಲೆಯಲ್ಲಿದೆ.**

ಎ) ಯಾದಗಿರಿ ಬಿ) ರಾಯಚೂರು ಸಿ) ಚಿತ್ರದುರ್ಗ ಡಿ) ವಿಜಯಪುರ

**6. 1842ರಲ್ಲಿ ಬ್ರಿಟಿಷರು -- ಎಂಬುವನನ್ನು ಸುರಪುರದ ಪೊಲಿಟಿಕಲ್ ಏಜೆಂಟನನ್ನಾಗಿ ನೇಮಿಸಿದರು**

ಎ) ಥ್ಯಾಕರೆ ಬಿ) ಕರ್ನಲ್ ಡೀಕ್ ಸಿ) ಮೆಡೋಸ್ ಟೇಲರ್ ಡಿ) ಕ್ಯಾಂಪ್‌ಬೆಲ್

**7. ಸುರಪುರದ ವೆಂಕಟಪ್ಪನಾಯಕ ----ರಲ್ಲಿ ಅಧಿಕಾರಕ್ಕೆ ಬಂದನು.**

ಎ) 1834 ಬಿ) 1842 ಸಿ) 1853 ಡಿ) 1857

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. 1ನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವೇನು?**

❖ 1767ರಲ್ಲಿ ಹೈದರಾಲಿ ಮತ್ತು ನಿಜಾಮ, ಬ್ರಿಟಿಷರ ಆಶ್ರಿತ ದೇಶೀಯ ರಾಜ್ಯವಾಗಿದ್ದ ಆರ್ಕಾಟಿಗೆ ಮುತ್ತಿಗೆ ಹಾಕಿದರು.

**2. ಸಂಗೊಳ್ಳಿ ರಾಯಣ್ಣನ ಆದ್ಯ ಕರ್ತವ್ಯ ಏನಾಗಿತ್ತು?**

❖ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು.

**3. ಬ್ರಿಟಿಷರು ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಲು ಕಾರಣವೇನು?**

❖ ಬ್ರಿಟಿಷರು ರಾಯಣ್ಣನು ರಾಣಿ ಚೆನ್ನಮ್ಮನ ಕುಮ್ಮಕ್ಕಿನಿಂದ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾನೆ ಎಂದು ಭಾವಿಸಿದ್ದರಿಂದ ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಿದರು.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. 1ನೇ ಆಂಗ್ಲೋ ಮೈಸೂರು ಯುದ್ಧವನ್ನು ವಿವರಿಸಿ.**

❖ 1767ರಲ್ಲಿ ಹೈದರಾಲಿಯು ಆರ್ಕಾಟಿಗೆ ಮುತ್ತಿಗೆ ಹಾಕುವುದರೊಂದಿಗೆ ಯುದ್ಧ ಪ್ರಾರಂಭವಾಯಿತು.

❖ ತಿರುಚನಾಪಳ್ಳಿ, ತಿರುವಣ್ಣಾಮಲೈ, ಅಂಬೂರು ಮೊದಲಾದ ಸ್ಥಳಗಳಲ್ಲಿ ಕದನಗಳು ಸಂಭವಿಸಿದವು.

❖ 1769ರ ವೇಳೆಗೆ ಹೈದರಾಲಿಯ ಸೈನ್ಯ ಮದರಾಸಿನ ಪ್ರಾಂತ್ಯವನ್ನು ತಲುಪಿತು.

❖ ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**2. ಇಂಗ್ಲಿಷರು ಮದ್ರಾಸ್ ಒಪ್ಪಂದಕ್ಕೆ ಸಹಿ ಹಾಕುವುದು ಏಕೆ ಅನಿವಾರ್ಯವಾಯಿತು?**

❖ 1769ರ ವೇಳೆಗೆ ಹೈದರಾಲಿಯ ಸೈನ್ಯ ಮದರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು.

❖ ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**3. 2ನೇ ಆಂಗ್ಲೋ ಮೈಸೂರು ಯುದ್ಧವನ್ನು ವಿವರಿಸಿ.**

- ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು 2ನೇ ಮೈಸೂರು ಯುದ್ಧಕ್ಕೆ ಕಾರಣವಾಯಿತು
- 1781ರಲ್ಲಿ ಪೋರ್ಟೋನೋವ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು.
- ಯುದ್ಧದ ಮಧ್ಯದಲ್ಲಿ ಹೈದರಾಲಿ 1782ರಲ್ಲಿ ಅನಾರೋಗ್ಯದಿಂದ ಮೃತನಾದನು.
- ಟಿಪ್ಪು ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- 1784ರ 'ಮಂಗಳೂರು ಒಪ್ಪಂದ'ದ ಮೂಲಕ 2ನೇ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು.
- ಇವು ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ಮತ್ತಷ್ಟು ದ್ವೇಷ ಭಾವನೆಗಳನ್ನು ಮೂಡಿಸಿದವು.

**4. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳು ಯಾವುವು?**

- ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು.
- ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಪರಿಹಾರವಾಗಿ ಕೊಡುವುದು.
- ಯುದ್ಧನಷ್ಟ ಕೊಡುವವರೆಗೂ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು.
- ಯುದ್ಧ ಖೈದಿಗಳನ್ನು ಬಿಡುಗಡೆಗೊಳಿಸುವುದು.
- ಶ್ರೀರಂಗಪಟ್ಟಣದಿಂದ ಬ್ರಿಟಿಷರ ಸೈನ್ಯ ಹಿಂತೆಗೆಯಿತು.

**5. ದೋಂಡಿಯಾ ವಾಘ್ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.**

- ದೋಂಡಿಯಾ ಚನ್ನಗಿರಿಯ ಮರಾಠ ಕುಟುಂಬದಲ್ಲಿ ಜನಿಸಿದನು.
- 4ನೇ ಮೈಸೂರು ಯುದ್ಧದ ತರುವಾಯ ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು.
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು.
- ಅನೇಕ ಅತೃಪ್ತ ಪಾಳೇಯಗಾರರು ಪ್ರೋತ್ಸಾಹಿಸಿದರು.
- ಲಾರ್ಡ್ ವೆಲ್ಲೆಸ್ಲಿ ದೋಂಡಿಯ ವಾಘನನ್ನು ಹತ್ತಿಕ್ಕಿದನು.
- ಕೋನ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು.

**6. ಕಿತ್ತೂರಿನ ರಾಣಿ ಚೆನ್ನಮ್ಮಳಿಗೆ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವಾಗಿತ್ತು. ಏಕೆ?**

- ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು.
- ಥ್ಯಾಕರೆ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂದು ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.
- ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.
- ಪರಿಣಾಮವಾಗಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವೆಂಬ ನಿರ್ಣಯಕ್ಕೆ ಬಂದಳು.
- ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿತು.

**7. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.**

- ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು.
- ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು.
- ಸೈನಿಕರನ್ನು ಸಂಘಟಿಸುತ್ತಾ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದನು.
- ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ಬ್ರಿಟಿಷರು ಅಮಲ್ದಾರನಾಗಿದ್ದ ಕೃಷ್ಣರಾಯ ಎಂಬುವವನ ಜೊತೆಗೆ ಸಂಚು ರೂಪಿಸಿ ರಾಯಣ್ಣನನ್ನು ಬಂಧಿಸಿದರು.
- ರಾಯಣ್ಣನನ್ನು 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು

**8. ಬ್ರಿಟಿಷರು ಸುರಪುರ ಸಂಸ್ಥಾನದ ಮೇಲೆ ಹೇಗೆ ಹತೋಟಿ ಸಾಧಿಸಿದರು?**

- ಕೃಷ್ಣಪ್ಪನಾಯಕನ ಮರಣದ ನಂತರ ಆತನ ಅಪ್ರಾಪ್ತ ಮಗನಾದ ವೆಂಕಟಪ್ಪ ನಾಯಕ ಪಟ್ಟಕ್ಕೆ ಬಂದನು.
- ಆದರೆ ಕೃಷ್ಣಪ್ಪನಾಯಕನ ಸೋದರನಾಗಿದ್ದ ಪೆದ್ದನಾಯಕ ಎಂಬುವವನು ತಗಾದೆ ತೆಗೆದನು.
- ಪರಿಣಾಮವಾಗಿ ಸುರಪುರದ ಆಂತರಿಕ ರಾಜಕೀಯ ಚಟುವಟಿಕೆಗಳು ಕ್ಷೋಭೆಗೊಂಡವು.
- 1842ರಲ್ಲಿ ಬ್ರಿಟಿಷರು ಮೆಡೋಸ್ ಟೇಲರ್ ಎಂಬುವನನ್ನು ಪೊಲಿಟಿಕಲ್ ಏಜೆಂಟನನ್ನಾಗಿ ನೇಮಿಸಿ ಸಂಸ್ಥಾನದ ಮೇಲೆ ತಮ್ಮ ಪರೋಕ್ಷ ಹತೋಟಿಯನ್ನು ಸ್ಥಾಪಿಸಿದರು.

**9. ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

- 1857ರಲ್ಲಿ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು.

- ಇದರಿಂದಾಗಿ ಬ್ರಿಟಿಷರು ವೆಂಕಟಪ್ಪನಾಯಕನನ್ನು ಸಂಶಯದಿಂದ ಕಾಣುವಂತಾಯಿತು.
- ಬ್ರಿಟಿಷ್ ಸರ್ಕಾರ ನೇಮಿಸಿದ ಕ್ಯಾಂಪ್‌ಬೆಲ್ ಎಂಬ ಅಧಿಕಾರಿ ರಾಜನು ದುರಾಡಳಿತ ನಡೆಸುತ್ತಿದ್ದಾನೆಂದು ಹೈದರಾಬಾದ್‌ನ ರೆಸಿಡೆಂಟ್‌ಗೆ ವರದಿ ಸಲ್ಲಿಸಿದನು.
- 1858ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು.
- ಬ್ರಿಟಿಷರು ವೆಂಕಟಪ್ಪನಾಯಕನನ್ನು ಸಿಕಂದರಾಬಾದ್‌ನ ಸೆರೆಮನೆಯಲ್ಲಿ ಬಂಧಿಸಿಟ್ಟರು.

**10. ಬ್ರಿಟಿಷರ ವಿರುದ್ಧ ಹಲಗಲಿಯ ಬೇಡರು ನಡೆಸಿದ ಸಶಸ್ತ್ರ ಬಂಡಾಯವನ್ನು ವಿವರಿಸಿ.**

- ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ.
- 1857ರಲ್ಲಿ ಬ್ರಿಟಿಷರು ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು.
- ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ದರಿರಲಿಲ್ಲ.
- ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ದ ಸಿಡಿದೆದ್ದರು.
- ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲೀಷರು ಹತ್ತಿಕ್ಕಿದರು.
- ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.

# 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

## ಬಹುಆಯ್ಕೆ ಪ್ರಶ್ನೆಗಳು:

**1. ಯುವಬಂಗಾಳಿ ಚಳವಳಿಯನ್ನು ಪ್ರಾರಂಭಿಸಿದವರು**

ಎ) ಹೆನ್ರಿ ವಿವಿಯನ್ ಡಿರೋಜಿಯೋ ಬಿ) ಅನಿಬೆಸೆಂಟ್ ಸಿ) ಕರ್ನಲ್ ಎಚ್.ಎಸ್. ಅಲ್ಕಾಟ್ ಡಿ) ಮೇಡಂ ಬ್ಲವಾಟ್‌ಸ್ಕೆ

**2. ಪ್ರಾರ್ಥನಾ ಸಮಾಜದ ಸ್ಥಾಪಕರು**

ಎ) ದಯಾನಂದ ಸರಸ್ವತಿ ಬಿ) ಡಾ. ಆತ್ಮಾರಾಮ್ ಪಾಂಡುರಂಗ ಸಿ) ರಾಜಾ ರಾಮಮೋಹನ್ ರಾಯ್ ಡಿ) ಮಹಾತ್ಮ ಜ್ಯೋತಿಭಾ ಫುಲೆ

**3. ಮಹಾತ್ಮ ಜ್ಯೋತಿಭಾ ಫುಲೆಯವರ ಪ್ರಸಿದ್ಧ ಗ್ರಂಥ**

ಎ) ಸಂವಾದ ಕೌಮುದಿ ಬಿ) ನ್ಯೂ ಇಂಡಿಯಾ ಸಿ) ಗುಲಾಮಗಿರಿ ಡಿ) ಸತ್ಯಾರ್ಥ ಪ್ರಕಾಶ

**4. ಮಹಾತ್ಮ ಜ್ಯೋತಿಭಾ ಫುಲೆಯವರ ಆಶಯಗಳಿಂದ ಪ್ರೇರಣೆ ಪಡೆದವರಲ್ಲಿ ಅತ್ಯಂತ ಪ್ರಮುಖರೆಂದರೆ**

ಎ) ಲಾಲಾ ಲಜಪತ್‌ರಾಯ್ ಬಿ) ಮಹದೇವ ಗೋವಿಂದ ರಾನಡೆ ಸಿ) ಬಾಬಾಸಾಹೇಬ ಅಂಬೇಡ್ಕರ್ ಡಿ) ಮಹಾತ್ಮ ಗಾಂಧೀಜಿ

**5. ಆಂಗ್ಲೋ ಓರಿಯಂಟಲ್ ಕಾಲೇಜನ್ನು --- ಎಂಬಲ್ಲಿ ಸ್ಥಾಪಿಸಲಾಗಿದೆ.**

ಎ) ಆಲಿಘರ್ ಬಿ) ಕಲ್ಕತ್ತ ಸಿ) ಮುಂಬಯಿ ಡಿ) ಬನಾರಸ್

**6. 'ಆತ್ಮಗೌರವ ಚಳವಳಿ'ಯು ಈ ಕೆಳಗಿನ ಯಾರ ನೇತೃತ್ವದಲ್ಲಿ ಪ್ರಾರಂಭವಾಯಿತು.**

ಎ) ದಯಾನಂದ ಸರಸ್ವತಿ ಬಿ) ಶ್ರೀ ನಾರಾಯಣಗುರು ಸಿ) ಸ್ವಾಮಿ ವಿವೇಕಾನಂದಡಿ) ಇ.ವಿ. ರಾಮಸ್ವಾಮಿ ನಾಯ್ಕರ್

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ಆತ್ಮೀಯ ಸಭಾದ ಪ್ರಮುಖ ಆಶಯವೇನು?**

- ಆತ್ಮೀಯ ಸಭೆಯ ಪ್ರಮುಖ ಆಶಯಗಳೆಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗೊಳಿಸುವುದು.

**2. ಬ್ರಹ್ಮ ಸಮಾಜದ ಸ್ಥಾಪಕರು ಯಾರು?**

- ರಾಜಾ ರಾಮಮೋಹನ್ ರಾಯ್

**3. ಸತಿಪದ್ಧತಿಯನ್ನು ನಿಷೇಧಿಸಿದ ಬ್ರಿಟಿಷ್ ಗವರ್ನರ್ ಜನರಲ್ ಯಾರು?**

- ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ನಿಷೇಧಿಸಿದನು.

**4. ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಪ್ರಾರಂಭಿಸಲು ಕಾರಣ(ಉದ್ದೇಶ)ವೇನು? / ಶುದ್ಧಿ ಚಳುವಳಿಯನ್ನು ಅರ್ಥೈಸಿರಿ.**

- ಹಿಂದೂಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು.

**5. ಮಹಾತ್ಮ ಜ್ಯೋತಿಭಾ ಫುಲೆಯವರು ಸತ್ಯಶೋಧಕ ಸಮಾಜವನ್ನು ಸ್ಥಾಪಿಸಲು ಕಾರಣ(ಉದ್ದೇಶ)ವೇನು?**

❖ ಶೋಷಿತ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಸಲುವಾಗಿ ಈ ಸಮಾಜವನ್ನು

**ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಏಕೆ ಸ್ಥಾಪಿಸಿದರು?**

❖ ರಾಮಕೃಷ್ಣ ಪರಮಹಂಸರ ಚಿಂತನೆಗಳನ್ನು ಹಾಗೂ ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಶಯಗಳನ್ನು ಜನರಿಗೆ ತಲುಪಿಸಲು ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನನ್ನು ಸ್ಥಾಪಿಸಿದರು.

**6. ಥಿಯೋಸಾಫಿಕಲ್ ಸೊಸೈಟಿಯ ಸ್ಥಾಪಕರು ಯಾರು?**

❖ ಥಿಯೋಸಾಫಿಕಲ್ ಸೊಸೈಟಿಯನ್ನು ಮೇಡಂ ಬ್ಲವಾಟ್‌ಸ್ಕೆ ಮತ್ತು ಅಮೆರಿಕನ್ನರಾದ ಕರ್ನಲ್ ಎಚ್. ಎಸ್. ಅಲ್ಕಾಟ್ ಪ್ರಾರಭಿಸಿದರು.

**7. ಅನಿಬೆಸೆಂಟರನ್ನು 'ಶ್ವೇತ ಸರಸ್ವತಿ' ಎಂದು ಕರೆಯಲು ಕಾರಣವೇನು?**

❖ ಅನಿಬೆಸೆಂಟರು ಭಗವದ್ಗೀತೆಯನ್ನು ಇಂಗ್ಲೀಷಿಗೆ ಅನುವಾದ ಮಾಡಿದ್ದರಿಂದ ಅವರನ್ನು 'ಶ್ವೇತ ಸರಸ್ವತಿ' ಎಂದು ಕರೆಯಲಾಗುತ್ತದೆ.

**8. ಅನಿಬೆಸೆಂಟರು ಪ್ರಾರಂಭಿಸಿದ ಪತ್ರಿಕೆಗಳನ್ನು ಹೆಸರಿಸಿ.**

❖ ಅನಿಬೆಸೆಂಟರು 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.

**9. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಸ್ಥೆಯ ಪ್ರಮುಖ ಉದ್ದೇಶವೇನು?**

❖ ಹಿಂದುಳಿದ & ಶೊಷಣೆಗೊಳಗಾದ ಸಮುದಾಯಗಳ ಸಬಲೀಕರಣ.

## <u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>

**1. ಬ್ರಹ್ಮಸಮಾಜದ ಬೋಧನೆಗಳಾವುವು?**

❖ ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು

❖ ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು

❖ ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು

❖ ಬಾಲ್ಯವಿವಾಹ & ಬಹುಪತ್ನಿತ್ವವನ್ನು ವಿರೋಧಿಸಿತು

❖ ವಿಧವೆಯರ ದುಸ್ಥಿತಿಯನ್ನು ದೂರ ಮಾಡುವುದು

❖ ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸುವುದು

❖ ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿದರು

**2. ಆರ್ಯ ಸಮಾಜದ ಸುಧಾರಣೆಗಳು ಯಾವುವು?**

❖ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು

❖ ಹುಟ್ಟಿನಿಂದ ಜಾತಿ ಆಧಾರವನ್ನು ತಿರಸ್ಕರಿಸಿದರು

❖ ಅಂತರ್ಜಾತೀಯ ವಿವಾಹವನ್ನು ಪ್ರೋತ್ಸಾಹಿಸುವುದು

❖ ಬಹುಪತ್ನಿತ್ವ ಮತ್ತ ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು

❖ ಸ್ತ್ರೀ ಮತ್ತು ಪುರುಷರು ಸಮಾನರು

❖ ವೇದಗಳು ಮಾತ್ರ ಶ್ರೇಷ್ಠ

**3. ಪ್ರಾರ್ಥನಾ ಸಮಾಜದ ಸುಧಾರಣೆ(ಬೋಧನೆ)ಗಳು ಯಾವುವು?**

❖ ಸ್ತ್ರೀಯರಿಗೆ ಶಿಕ್ಷಣ ಒದಗಿಸುವುದು

❖ ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು

❖ ಬಾಲ್ಯವಿವಾಹವನ್ನು ವಿರೋಧಿಸುವುದು

❖ ವಿಧವೆಯರನ್ನು ತಿರಸ್ಕೃತ ಬದುಕಿನಿಂದ ಹೊರತರುವುದು

❖ ವಿಧವಾ ಪುನರ್ವಿವಾಹಗಳನ್ನು ಪ್ರೋತ್ಸಾಹಿಸುವುದು

**4. ಆಲಿಘರ್ ಚಳವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ. / ಸರ್ ಸಯ್ಯದ್ ಅಹಮ್ಮದ್ ಖಾನರ ಸುಧಾರಣೆ / ಬೋಧನೆಗಳನ್ನು ಪಟ್ಟಿಮಾಡಿರಿ.**

❖ ಅಜ್ಞಾನ, ಅವೈಜ್ಞಾನಿಕ ಮನೋಧರ್ಮಕ್ಕೆ ವಿರೋಧ

❖ ಪರದಾ ಪದ್ಧತಿಗೆ ವಿರೋಧ

❖ ಮುಸ್ಲಿಂ ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಪ್ರೋತ್ಸಾಹ

❖ ಬಹುಪತ್ನಿತ್ವ ಪದ್ಧತಿಗೆ ವಿರೋಧ

❖ ಧಾರ್ಮಿಕ ಸಹಿಷ್ಣುತೆಗೆ ಒತ್ತು

❖ ಹಿಂದೂ ಮತ್ತು ಮುಸ್ಲಿಂರ ಐಕ್ಯತೆ

**5. ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ವಿವರಿಸಿ.**

❖ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು.

❖ ಸಮಾಜ ಸುಧಾರಣಾ ಕಾನೂನುಗಳ ಅನುಷ್ಠಾನ.

❖ ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು.

❖ ಯಾರ ಆತ್ಮ ಬಡವರಿಗಾಗಿ ಮಿಡಿಯುವುದೋ ಅವನೇ ಮಹಾತ್ಮ.

❖ ಜಾತೀಯತೆ, ಅಸ್ಪೃಶ್ಯತೆಯನ್ನು ವಿರೋಧಿಸಿದರು.

❖ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ವಿರೋಧಿಸಿರು.

**6. ಆನಿಬೆಸೆಂಟರ ಸುಧಾರಣಾ ಕ್ರಮಗಳಾವುವು?**

❖ ಭಗವದ್ಗೀತೆಯನ್ನು ಇಂಗ್ಲೀಷಿಗೆ ಅನುವಾದಿಸಿದರು.

❖ 1898ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು.

❖ 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.

❖ ಹೋಮ್ ರೂಲ್ ಲೀಗನ್ನು ಪ್ರಾರಂಭಿಸಿದರು.

❖ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷೆ ಕೂಡ ಆಗಿದ್ದರು.

**7. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.**

❖ ಹಿಂದುಳಿದ & ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ.

❖ ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣ ಇದರ ಮುಖ್ಯ ಉದ್ದೇಶ.

❖ ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂದು ಪ್ರತಿಪಾದಿಸಿತು.

❖ ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು

❖ ಕೆಳಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.

❖ 1924ರಲ್ಲಿ ವೈಕಂ ಸತ್ಯಾಗ್ರಹವೆಂಬ ದೇವಾಲಯ ಪ್ರವೇಶ ಚಳವಳಿಯನ್ನು ನಡೆಸಿದರು.

**8. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**

❖ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು.

❖ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟ ಆರಂಭಿಸಿದರು.

❖ ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟೀಸ್ ಪಾರ್ಟಿ'ಯು ಈ ಚಳವಳಿಯನ್ನು ಮುನ್ನಡೆಸಿತು.

❖ ಇ.ವಿ. ರಾಮಸ್ವಾಮಿ ನಾಯ್ಕರ್ ರವರ ನೇತೃತ್ವದಲ್ಲಿ 'ಆತ್ಮಗೌರವ ಚಳವಳಿ' ಆರಂಭವಾಯಿತು.

❖ ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು.

❖ "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಮತ್ತು 'ಜಸ್ಟೀಸ್' ಪತ್ರಿಕೆಯನ್ನು ಹುಟ್ಟುಹಾಕಿದರು.

# 6. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

## <u>ಬಹುಆಯ್ಕೆ ಪ್ರಶ್ನೆಗಳು:</u>

**1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು – ಎಂದು ಕರೆದಿದ್ದಾರೆ.**

ಎ) ಸ್ವತಂತ್ರ ಸಂಗ್ರಾಮ ಬಿ) ರಾಜಕೀಯ ದಂಗೆ ಸಿ) **ಕಾನ್ಪುರದಲ್ಲಿ ದಂಗೆಯ ನಾಯಕತ್ವ ವಹಿಸಿಕೊಂಡವನು**

ಎ) ತಾತ್ಯಾಟೋಪೆ ಬಿ) ನಾನಾ ಸಾಹೇಬ ಸಿ) ಲಕ್ಷ್ಮಿಭಾಯಿ ಡಿ) 2ನೇ ಬಹದ್ದೂರ್ ಷಾ

**2. ಕಾನ್ಪುರ ಬ್ರಿಟಿಷರ ವಶವಾದ ನಂತರ ಝಾನ್ಸಿರಾಣಿಯ ಸಹಾಯಕ್ಕೆ ಬಂದವನು**

ಎ) ತಾತ್ಯಾಟೋಪೆ ಬಿ) ನಾನಾ ಸಾಹೇಬ ಸಿ) ಲಕ್ಷ್ಮಿಭಾಯಿ ಡಿ) 2ನೇ ಬಹದ್ದೂರ್ ಷಾ

**3. ಲಕ್ಷ್ಮಿಭಾಯಿಯು ------ನ್ನು ವಶ ಪಡಿಸಿಕೊಂಡಳು.**

ಎ)ಮೀರತ್ ಬಿ)ಕಾನ್ಪುರ ಸಿ)ಗ್ವಾಲಿಯರ್ ಡಿ)ಲಕ್ನೋ

## <u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>

**1. ಡಾಲ್‌ಹೌಸಿಯು ಯಾರ ರಾಜ ಪದವಿಯನ್ನು ರದ್ದು ಗೊಳಿಸಿದನು?**

❖ ಡಾಲ್‌ಹೌಸಿಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಯನ್ನು ರದ್ದುಪಡಿಸಿದನು.

**2. ಬ್ರಿಟಿಷರು ಪದಚ್ಯುತಿಗೊಳಿಸಿದ ಪ್ರಮುಖ ರಾಜರು ಯಾರು?**

❖ ಬ್ರಿಟಿಷರು ಮೊಘಲ್ ಚಕ್ರವರ್ತಿ, ಔದ್‌ನ ನವಾಬನ್ನು ಅಧಿಕಾರದಿಂದ ಪದಚ್ಯುತಿಗೊಳಿಸಿದರು.

**3. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಭಾರತದ ಕೈಗಾರಿಕೆಗಳ ಮೇಲೆ ಬೀರಿದ ಪರಿಣಾಮವೇನು?**

❖ ಭಾರತದ ಅನೇಕ ಗೃಹ ಮತ್ತು ಸಣ್ಣ ಕೈಗಾರಿಕೆಗಳು ಅವನತಿ ಹೊಂದಿದವು.

**4. ತಾತ್ಯಾಟೋಪೆ ಯಾರ ಸಹಾಯಕನಾಗಿದ್ದನು?**

❖ ನಾನಾ ಸಾಹೇಬನಿಗೆ ಸಹಾಯಕನಾಗಿದ್ದನು.

## <u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>

**1. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.**

❖ **ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ**

❖ **ಭಾರತೀಯ ವಸ್ತುಗಳ ಮೇಲಿನ ಅಧಿಕ ತೆರಿಗೆ**

❖ **ಭಾರತೀಯ ಗೃಹ ಕೈಗಾರಿಕೆಗಳ ಅವನತಿ**

❖ **ಲಕ್ಷಾಂತರ ಕಾರ್ಮಿಕ ನಿರುದ್ಯೋಗ**

❖ **ಕಂದಾಯಕ್ಕಾಗಿ ರೈತರ ಶೋಷಣೆ**

❖ ಇನಾಂ ಭೂಮಿಯನ್ನು ವಾಪಾಸ್ ಪಡೆದಿದ್ದು

**2. 1857ರ ದಂಗೆಗೆ ಕಾರಣವಾದ ಆಡಳಿತಾತ್ಮಕ ಕಾರಣಗಳನ್ನು ತಿಳಿಸಿರಿ.**

❖ **ಬ್ರಿಟಿಷರು ತಂದ ಹೊಸ ಕಾನೂನುಗಳು**

❖ **ಪಕ್ಷಪಾತದಿಂದ ಕೂಡಿದ್ದ ಕಾನೂನುಗಳು**

❖ **ಇಂಗ್ಲೀಷ್ ನ್ಯಾಯಾಲಯದ ಭಾಷೆಯಾದುದು**

❖ **ಇಂಗ್ಲೀಷರ ಪರವಾಗಿರುತ್ತಿದ್ದ ತೀರ್ಪುಗಳು**

❖ **ಕಾನೂನಿನ ಆಶಯ ಜನರಿಗೆ ಅರ್ಥವಾಗಲಿಲ್ಲ**

**3. 1857ರ ದಂಗೆಗೆ ಕಾರಣವಾದ ಸೈನಿಕ ಕಾರಣಗಳನ್ನು ತಿಳಿಸಿರಿ.**

❖ ಸಾಗರೋತ್ತರ ಸೇವೆಗೆ ಸೈನಿಕರ ಒತ್ತಾಯ

❖ ಭಾರತೀಯ ಸೈನಿಕರ ಶೋಚನೀಯ ಸ್ಥಿತಿ

❖ ವೇತನ, ಬಡ್ತಿಯಲ್ಲಿ ಭಾರತೀಯ ಸೈನಿಕರಿಗೆ ತಾರತಮ್ಯ

❖ ಬ್ರಿಟೀಷ್ ವಶವಾದ ರಾಜ್ಯಗಳ ಸೈನಿಕರ ನಿರುದ್ಯೋಗ

**4. 1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ?**

❖ **ದಂಗೆ ಭಾರತದಾದ್ಯಂತ ವ್ಯಾಪಿಸಿರಲಿಲ್ಲ.**

❖ **ಸ್ವಹಿತಾಸಕ್ತಿ & ಹಕ್ಕಿಗಾಗಿ ನೆಡೆದ ಹೋರಾಟ.**

❖ **ಅನಿರೀಕ್ಷಿತ ಕಾರಣಗಳಿಂದ ಪ್ರೇರಿತ ದಂಗೆ.**

❖ **ಸೂಕ್ತ ಯೋಜನೆಯ ಕೊರತೆ.**

❖ **ಸೂಕ್ತ ನಾಯಕತ್ವದ ಕೊರತೆ.**

❖ **ಶಸ್ತ್ರಾಸ್ತ್ರಗಳ ಕೊರತೆ.**

❖ ಸೂಕ್ತ ಮಾರ್ಗದರ್ಶನ ಮತ್ತು ಸಂಘಟನೆಯ ಕೊರತೆ.

❖ ಲೂಟಿಗಳ ಮೂಲಕ ಸಿಪಾಯಿಗಳು ಜನ ಬೆಂಬಲ ಕಳೆದುಕೊಂಡರು.

❖ ಅನೇಕ ದೇಶೀಯ ರಾಜರಿಂದ ಬ್ರಿಟಿಷರಿಗೆ ಬೆಂಬಲ.

**5. 1858ರ ಬ್ರಿಟನ್ ರಾಣಿ ಘೋಷಣೆಯಲ್ಲಿದ್ದ ಅಂಶಗಳೇನು? <u>ಅಥವಾ</u> 1858ರ ಮಹಾರಾಣಿ ಘೋಷಣೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಸಂತೈಸಲು ಪ್ರಯತ್ನಿಸಿದರು ಹೇಗೆ?**

❖ 1858ರಲ್ಲಿ ಬ್ರಿಟನ್ ರಾಣಿಯ ಘೋಷಣೆಯೊಂದನ್ನು ಹೊರಡಿಸಿದಳು.

❖ ಕಂಪನಿಯು ದೇಶಿ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.

❖ ಪ್ರಾದೇಶಿಕ ವಿಸ್ತರಣೆಯ ನೀತಿಯನ್ನು ಕೈಬಿಡಲಾಯಿತು.

❖ ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವ ಭರವಸೆ ನೀಡಲಾಯಿತು.

❖ ಕಾನೂನಿನ ಮುಂದೆ ಸಮಾನತೆಯನ್ನು ಘೋಷಿಸಿದರು

❖ ಭಾರತೀಯರ ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಭರವಸೆ ನೀಡಿದರು.

**6. 1857ರ ದಂಗೆಯ ಪರಿಣಾಮಗಳಾವುವು?**

❖ **ಕಂಪನಿಯ ಆಡಳಿತ ಅಂತ್ಯಗೊಂಡು ರಾಣಿಯ ನೇರ ಆಡಳಿತ ಆರಂಭವಾಯಿತು.**

❖ **ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಭಾರತದ ವ್ಯವಹಾರಗಳ ಜವಬ್ದಾರಿ ನೀಡಲಾಯಿತು.**

❖ **ಉತ್ತಮ ಆಡಳಿತದ ಭರವಸೆ ನೀಡಲಾಯಿತು.**

❖ **ಭಾರತೀಯರ ಬೆಂಬಲವಿಲ್ಲದೆ ಆಡಳಿತ ನೆಡೆಸುವುದು ಕಷ್ಟವೆಂದು ಬ್ರಿಟಿಷರಿಗೆ ತಿಳಿಯಿತು.**

❖ **ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿಯಾಯಿತು.**

❖ **ಸ್ವಾತಂತ್ರ್ಯ ಹೋರಾಟಕ್ಕೆ ಪರ್ಯಾಯ ಮಾರ್ಗದ ಅನ್ವೇಷಣೆಗೆ ನಾಂದಿಯಾಯಿತು.**

# 7. ಸ್ವಾತಂತ್ರ್ಯ ಹೋರಾಟ

## <u>ಬಹುಆಯ್ಕೆ ಪ್ರಶ್ನೆಗಳು:</u>

1. **ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ----- ರಲ್ಲಿ ಸ್ಥಾಪಿಸಲಾಯಿತು.**

ಎ) 1875 ಬಿ) 1885 ಸಿ) 1895 ಡಿ) 1905

2. **ಭಾರತೀಯ ಕಾಂಗ್ರೆಸನ ಸ್ಥಾಪಕರು**

ಎ) ಮಹಾತ್ಮ ಗಾಂಧೀಜಿ ಬಿ) ಬಾಲಗಂಗಾಧರ ತಿಲಕ್ ಸಿ) ಎ.ಓ.ಹ್ಯೂಮ್ ಡಿ) ಗೋಪಾಲಕೃಷ್ಣ ಗೋಖಲೆ

3. **ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು**

ಎ) ದಾದಾಬಾಯಿ ನವರೋಜಿ ಬಿ) ಎಂ.ಜಿ ರಾನಡೆ ಸಿ) ಗೋಪಾಲಕೃಷ್ಣ ಗೋಖಲೆ ಡಿ) ಸುರೇಂದ್ರನಾಥ ಬ್ಯಾನರ್ಜಿ

4. **ಈ ಕೆಳಗಿನವರಲ್ಲಿ ಯಾರು ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು ಸಂಘಟಿಸಿದ್ದರು.**

ಎ) ಮಂದಗಾಮಿಗಳು ಬಿ) ತೀವ್ರಗಾಮಿಗಳು ಸಿ) ಕ್ರಾಂತಿಕಾರಿಗಳು ಡಿ) ಗಾಂಧೀಜಿ

5. **ಈ ಕೆಳಗಿನ ಯಾವ ತೀವ್ರಗಾಮಿ ನಾಯಕ ಮುಂದೆ ಕ್ರಾಂತಿಕಾರಿಯಾಗಿ ಸ್ವಾತಂತ್ರ್ಯ ಹೋರಾಟವನ್ನು ಮುಂದುವರೆಸಿದರು.**

ಎ) ಅರಬಿಂದೋ ಘೋಷ್ ಬಿ) ಬಾಲಗಂಗಾಧರ ತಿಲಕ್ ಸಿ) ಬಿಪಿನ್‌ಚಂದ್ರ ಪಾಲ್ ಡಿ) ಲಾಲ ಲಜಪತ ರಾಯ್

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.**

- ❖ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ.
- ❖ ಮಂದಗಾಮಿಗಳಲ್ಲಿ ಡಬ್ಲ್ಯು. ಸಿ ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಇವರುಗಳನ್ನು ಪ್ರಮುಖವಾಗಿ ಗುರುತಿಸಬಹುದು.
- ❖ ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.
- ❖ ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
- ❖ ಮಂದಗಾಮಿಗಳು ಜನರಲ್ಲಿ ರಾಜಕೀಯ ಎಚ್ಚರವನ್ನು ತರುವ ಪ್ರಯತ್ನ ಮಾಡಿದರು.
- ❖ ಇವರು ಭಾರತೀಯರಿಗೆ ಸಲ್ಲಬೇಕಾದ ನ್ಯಾಯವನ್ನು ಕುರಿತು ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು.
- ❖ ದಾದಾಬಾಯಿ ನವರೋಜಿಯವರು ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದರು.

**2. ಸ್ವಾತಂತ್ರ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.**

- ❖ ತೀವ್ರಗಾಮಿಗಳಲ್ಲಿ ಬಾಲ ಗಂಗಾಧರ ತಿಲಕರು ಅತ್ಯಂತ ಪ್ರಮುಖರು.
- ❖ ಇವರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸುವುದರು.
- ❖ ತಿಲಕರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು.
- ❖ ಗಣೇಶ ಉತ್ಸವ ಮತ್ತು ಶಿವಾಜಿ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.
- ❖ ಕೇಸರಿ ಮತ್ತು ಮರಾಠ ಪತ್ರಿಕೆಗಳನ್ನು ಆರಂಭಿಸಿದರು.
- ❖ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು.
- ❖ ಇವರ ಕ್ರಾಂತಿಕಾರಿ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು.
- ❖ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು.

**3. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರಗಾಮಿಗಳ ಕೊಡುಗೆಯನ್ನು ವಿವರಿಸಿ.**

- ❖ **ಮಂದಗಾಮಿಗಳ ಮೃದುದೋರಣೆಯನ್ನು ಟೀಕಿಸಿ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸಿದವರೇ ತೀವ್ರಗಾಮಿಗಳು.**
- ❖ **ಇವರು ಮಂದಗಾಮಿಗಳನ್ನು "ರಾಜಕೀಯ ಭಿಕ್ಷುಕರು" ಎಂದು ಕರೆದರು.**
- ❖ **ಅರವಿಂದ ಘೋಷ್, ಬಿಪನ್ ಚಂದ್ರ ಪಾಲ್, ಲಾಲ ಲಜಪತ್ ರಾಯ್ ಮತ್ತು ಬಾಲಗಂಗಧರ ತಿಲಕ್ ಈ ಬಣದ ಪ್ರಮುಖ ನಾಯಕರಾಗಿದ್ದರು.**
- ❖ **1905ರ ಬಂಗಾಳದ ವಿಭಜನೆಯನ್ನು ಇವರು ತೀವ್ರವಾಗಿ ವಿರೋಧಿಸಿ, ಸ್ವದೇಶಿ ಚಳುವಳಿಯನ್ನು ಆರಂಭಿಸಿದರು.**
- ❖ **ಸ್ವದೇಶಿ ಚಳುವಳಿಯನ್ನು ತೀವ್ರವಾದಿಗಳು ದೇಶಾದ್ಯಂತ ಕೊಂಡೊಯ್ದರು.**
- ❖ **ತೀವ್ರ ಹೋರಾಟದಿಂದಾಗಿ 1911ರಲ್ಲಿ ಬ್ರಿಟಿಷರು ಬಂಗಾಳದ ವಿಭಜನೆಯನ್ನು ಹಿಂಪಡೆದರು.**
- ❖ **ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು.**

**4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.**

- ❖ ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್
- ❖ ಅಶ್ವಿನಿಕುಮಾರದತ್ತ, ರಾಜನಾರಾಯಣ ಬೋಸ್
- ❖ ರಾಜಗುರು, ಚಾಕ್ಕಿಕರ್ ಸಹೋದರರು, ವಿಷ್ಣುಶಾಸ್ತ್ರಿ
- ❖ ಚಂಪೂಕರ್, ಶ್ಯಾಮಾಜಿ ಕೃಷ್ಣವರ್ಮ
- ❖ ರಾಸ್ ಬಿಹಾರಿ ಘೋಷ್, ಮ್ಯಾಡಮ್ ಕಾಮಾ
- ❖ ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್
- ❖ ಅಶ್ವಖುಲ್ಲಾಖಾನ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್, ಜತಿನ್ ದಾಸ್

**5. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕ್ರಾಂತಿಕಾರಿಗಳ ಕೊಡುಗೆಯನ್ನು ವಿವರಿಸಿ.**

- ❖ ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು.
- ❖ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು.
- ❖ ಇವರುಗಳು ರಹಸ್ಯಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು,

ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು.

❖ ಇಂಗ್ಲೆಂಡಿನ 'ಲೋಟಸ್ ಮತ್ತು ಡಾಗರ್', ಅಮೆರಿಕದ 'ಗದರ್', ಭಾರತದ 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ಪ್ರಮುಖ ರಹಸ್ಯ ಕ್ರಾಂತಿಕಾರಿ ಸಂಘಟನೆಗಳಾಗಿವೆ.

❖ ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.

❖ ಸರ್ಕಾರ ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು.

❖ ಕ್ರಾಂತಿಕಾರಿಗಳು ಬ್ರಿಟಿಷ್ ಆಡಳಿತ ವ್ಯವಸ್ಥೆಗೆ ಧಕ್ಕೆ ತರುವ ಮೂಲಕ ತ್ವರಿತವಾಗಿ ಸ್ವಾತಂತ್ರ್ಯವನ್ನು ತಂದು ಕೊಡುವ ಅವರ ತೀವ್ರವಾದ ಕನಸು ನನಸಾಗಲಿಲ್ಲ.

# 8. ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

**1. ಗಾಂಧೀಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು?**

❖ 1)ಸತ್ಯಾಗ್ರಹ: ಗಾಂಧೀಜಿಯವರ ಹೋರಾಟದ ಬಹು ಮುಖ್ಯವಾದ ವಿಧಾನವೇ ಸತ್ಯಾಗ್ರಹ.

❖ 'ಸತ್ಯಾಗ್ರಹ' ಎನ್ನುವ ಪದದ ಅರ್ಥ, ಸತ್ಯವನ್ನು ಆಗ್ರಹಿಸುವುದು ಅಥವಾ ಒತ್ತಾಯಿಸುವುದೇ ಆಗಿದೆ.

❖ ಸತ್ಯಾಗ್ರಹವು ಅಹಿಂಸೆಯನ್ನು ಆಧರಿಸಿದ್ದು, ತಪ್ಪು, ಹಿಂಸೆ & ಅಸತ್ಯವನ್ನು ನಿರಾಕರಿಸುವ ಕ್ರಮವಾಗಿದೆ.

❖ 2)ಅಹಿಂಸೆ: ಮಹಾತ್ಮ ಗಾಂಧೀಜಿಯ ಹೋರಾಟದ ಮೂಲಭೂತ ಆಶಯ ಅಹಿಂಸೆಯಾಗಿದೆ.

❖ ಸಶಸ್ತ್ರ ಬಲಪ್ರಯೋಗದ ವಿರುದ್ಧ ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಹೋರಾಡಬೇಕೆಂಬುದು ಗಾಂಧೀಜಿಯವರ ನಿಲುವಾಗಿತ್ತು.

❖ 3)ಹಿಂದೂ-ಮುಸ್ಲಿಂ ಏಕತೆ: ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ಏಕತೆಯನ್ನು ಅತ್ಯಂತ ಬಲವಾಗಿ ಪ್ರತಿಪಾದಿಸಿದರು.

❖ ಹಿಂದೂ-ಮುಸ್ಲಿಂರ ನಡುವೆ ಏಕತೆಯಿಲ್ಲದಿದ್ದರೆ ಭಾರತ ಸ್ವಾತಂತ್ರ್ಯ ಸಾಧಿಸುವುದು ಮತ್ತು ಭವಿಷ್ಯದಲ್ಲಿ ರಾಷ್ಟ್ರವಾಗಿ ಬಾಳುವುದು ಕಷ್ಟವೆಂದೇ ಅವರ ನಂಬಿಕೆಯಾಗಿತ್ತು.

❖ ಹಿಂದೂ ಮತ್ತು ಮುಸ್ಲಿಮರು ಭಾರತಮಾತೆಯ ಎರಡು ಕಣ್ಣುಗಳೆಂದೂ ಗಾಂಧೀಜಿ ಹೇಳಿದ್ದರು.

**2. ಅಸಹಕಾರ ಚಳುವಳಿಯನ್ನು ವಿವರಿಸಿ.**

❖ 1920 ಸೆಪ್ಟೆಂಬರ್ 4ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸು ಕಲ್ಕತ್ತಾದ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳವಳಿ ಆರಂಭಿಸಲು ಗೊತ್ತುವಳಿ ಅನುಮೋದಿಸಿತು.

❖ ಗಾಂಧೀಜಿಯವರು ಕರೆಕೊಟ್ಟ ಅಸಹಕಾರ ಚಳುವಳಿಗೆ ವ್ಯಾಪಾಕ ಬೆಂಬಲ ದೊರೆಯಿತು.

❖ ದೇಶಬಂಧು ಚಿತ್ತರಂಜನ್‌ದಾಸ್, ಮೋತಿಲಾಲ್ ನೆಹರೂ, ರಾಜೇಂದ್ರ ಪ್ರಸಾದ್ ಮೊದಲಾದ ಹಿರಿಯ ವಕೀಲರು ತಮ್ಮ ವಕೀಲ ವೃತ್ತಿಯನ್ನು ಬಿಟ್ಟರು.

❖ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ತೊರೆದರು.

❖ 1919ರ ಕಾಯ್ದೆಯ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಲಾಯಿತು.

❖ ದೇಶದ ವಿವಿದೆಡೆ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.

❖ ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮುಂದೆ ಮುಷ್ಕರ ನಡೆಸಲಾಯಿತು ಮತ್ತು ವಿದೇಶಿ ಬಟ್ಟೆಗಳನ್ನು ಸುಡಲಾಯಿತು.

❖ 1921ರಲ್ಲಿ 'ಪ್ರಿನ್ಸ್ ಆಫ್ ವೇಲ್ಸ್' ರಾಜಕುಮಾರ ಬರುವ ಕಾರ್ಯಕ್ರಮವನ್ನು ವಿರೋಧಿಸಲಾಯಿತು.

❖ ಚೌರಿ ಚೌರ ಘಟನೆಯಿಂದ ಮನನೊಂದು ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂಪಡೆದರು.

❖ ಬ್ರಿಟಿಷ್ ಸರ್ಕಾರವು ಗಾಂಧೀಜಿಯವರನ್ನು ಬಂಧಿಸಿ 6 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತು.

**3. ಗಾಂಧೀಜಿಯವರು ಕೈಗೊಂಡ ಕಾನೂನು ಭಂಗ ಚಳುವಳಿಯನ್ನು ವಿವರಿಸಿ.**

❖ 1930 ಫೆಬ್ರವರಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಬರಮತಿಯಲ್ಲಿ ಸಭೆ ಸೇರಿ ಕಾನೂನುಭಂಗ ಚಳವಳಿಯನ್ನು ಹಮ್ಮಿಕೊಳ್ಳಲು ನಿರ್ಣಯಿಸಿತು.

❖ ಗಾಂಧಿ ಮಾರ್ಚ್ 2, 1930 ರಂದು ಹನ್ನೊಂದು ಅಂಶಗಳುಳ್ಳ ಬೇಡಿಕೆಗಳ ಪತ್ರವನ್ನು ವೈಸ್‌ರಾಯ್‌ಗೆ ಬರೆದರು.

- ಒಂದು ವೇಳೆ ಸರ್ಕಾರ ಈ ಬೇಡಿಕೆಗಳನ್ನು ಒಪ್ಪದಿದ್ದಲ್ಲಿ ತೆರಿಗೆ ನಿರಾಕರಣೆಯ ಜತೆ ನಾಗರಿಕ ಕಾನೂನುಭಂಗ ಚಳವಳಿಯನ್ನು ಆರಂಭಿಸುವುದಾಗಿ ಗಾಂಧಿ ಘೋಷಿಸಿದರು.
- ವೈಸ್‌ರಾಯ್ ಈ ಪತ್ರದ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ ಗಾಂಧೀಜಿ ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು.
- ಚರಕ ಈ ಚಳವಳಿಯಲ್ಲಿ ಬಹಳ ಪ್ರಸಿದ್ಧವಾಯಿತು.
- ಸಾವಿರಾರು ಜನರು ಗಾಂಧಿಜಿಯವರ ಕರೆಗೆ ಸ್ಪಂದಿಸಿ, ಚಳವಳಿಯಲ್ಲಿ ಭಾಗವಹಿಸಿದರು.
- ಏಪ್ರಿಲ್ 6 ರಿಂದ 13ರ ವರೆಗೆ ರಾಷ್ಟ್ರೀಯ ಚಳವಳಿ ಸಪ್ತಾಹವನ್ನು ಆಚರಿಸಿದರು.
- ಗಾಂಧೀಜಿ, ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರೂ, ವಲ್ಲಭಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು.
- ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

**4. ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿ**

- 1942ರ ಕ್ರಿಪ್ಸ್ ಆಯೋಗದ ವರದಿಯ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೇ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು.
- 'ಬ್ರಿಟಿಷರೇ ಭಾರತ ಬಿಟ್ಟ ತೊಲಗಿ, ಎನ್ನುವುದು ಕ್ವಿಟ್ ಇಂಡಿಯಾ ಚಳುವಳಿಯ ಆಶಯವಾಗಿತ್ತು.
- ಗಾಂಧೀಜಿಯವರು ದೇಶದ ಜನತೆಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ಕೊಟ್ಟರು.
- ಬ್ರಿಟಿಷರು ಗಾಂಧೀಜಿ, ನೆಹರು, ರಾಜೇಂದ್ರ ಪ್ರಸಾದ್, ಅಬ್ದುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭ ಭಾಯಿ ಪಟೇಲ್ ಮೊದಲಾದವರನ್ನು ಬಂಧಿಸಿದರು.
- ಪರಿಣಾಮವಾಗಿ ಚಳುವಳಿಯ ನೇತೃತ್ವವನ್ನು ಜಯಪ್ರಕಾಶ ನಾರಾಯಣ್‌ರವರು ವಹಿಸಿಕೊಂಡರು.
- ನಾಯಕರ ಬಂಧನದಿಂದಾಗಿ ಈ ಚಳುವಳಿ ವಿಫಲವಾಯಿತು.
- ಬ್ರಿಟಿಷ್ ಸೇವೆಯಲ್ಲಿದ್ದ ನೌಕರರು, ಅಧಿಕಾರಿಗಳು, ಜಮೀನ್ದಾರರು ಮತ್ತು ಹಲವು ಸಂಸ್ಥಾನಗಳ ರಾಜರು ಬ್ರಿಟಿಷರ ಪರವಾಗಿ ಕೆಲಸ ಮಾಡಿದರು.
- ಮುಸ್ಲಿಂಲೀಗ್ ಈ ಚಳುವಳಿಯಿಂದ ದೂರವೇ ಉಳಿಯಿತು.
- ಆಡಳಿತ ಸೂತ್ರ, ಪೋಲಿಸ್ ವ್ಯವಸ್ಥೆ ಮತ್ತು ಸೈನಿಕ ವ್ಯವಸ್ಥೆಯ ಮೂಲಕ ಬ್ರಿಟಿಷರು ಈ ಚಳುವಳಿಯನ್ನು ಹತ್ತಿಕ್ಕಿದರು.

**5. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರವನ್ನು ವಿವರಿಸಿರಿ.**

- 1920 ರಿಂದ 1947 ರ ಅವಧಿಯನ್ನು 'ಗಾಂಧಿ ಯುಗ' ಎಂದು ಕರೆಯುತ್ತಾರೆ.
- ಗಾಂಧೀಜಿಯವರು ತಮ್ಮ ಹೋರಾಟದಲ್ಲಿ ಅಹಿಂಸೆ ಮತ್ತು ಸತ್ಯಾಗ್ರಹವನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡರು.
- ಮುಸ್ಲಿಮರ ಸಹಭಾಗಿತ್ವಕ್ಕಾಗಿ ಖಿಲಾಫತ್ ಚಳುವಳಿ ಬೆಂಬಲಿಸಿದರು.
- 1920ರಲ್ಲಿ ಗಾಂಧೀಜಿಯವರು ಬ್ರಿಟೀಷರ ವಿರುದ್ಧ ಅಸಹಕಾರ ಚಳುವಳಿಗೆ ಕರೆಯಿತ್ತರು.
- ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು.
- 1930 ರಲ್ಲಿ ಬ್ರಿಟೀಷರ ವಿರುದ್ಧ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು
- ತಮ್ಮ ಆಶ್ರಮ ಸಬರಮತಿಯಿಂದ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ನಡೆದು ಹಿಡಿ ಉಪ್ಪು ತಯಾರಿಸಿ ಜನರಿಗೆ ವಿತರಿಸಿದರು.
- ಬ್ರಿಟೀಷರೇ 'ಭಾರತ ಬಿಟ್ಟು ತೊಲಗಿ' ಚಳುವಳಿ ಮೂಲಕ ಭಾರತೀಯರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು.
- 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡುವುದರ ಮೂಲಕ 'ರಾಷ್ಟ್ರಪಿತ' ಎಂದು ಪ್ರಸಿದ್ಧರಾದರು.

**6. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಯನ್ನು ವಿವರಿಸಿ.**

- ಸುಭಾಷ್ ಚಂದ್ರ ಬೋಸ್‌ರವರು ರಾಷ್ಟ್ರೀಯ ಕಾಂಗ್ರೆಸ್ ಸೇರಿ ಗಾಂಧೀಜಿಯವರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.
- ಗಾಂಧೀಜಿಯೊಂದಿಗೆ ತಾತ್ವಿಕ ಭಿನ್ನಾಭಿಪ್ರಾಯವನ್ನು ಹೊಂದಿದ ನೇತಾಜಿ ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿದರು.
- ಫಾರ್ವರ್ಡ್ ಬ್ಲಾಕ್ ಎಂಬ ಪಕ್ಷವನ್ನು ಸ್ಥಾಪಿಸಿ ತಮ್ಮ ಹೋರಾಟವನ್ನು ಮುಂದುವರೆಸಿದರು.
- ಸುಭಾಷರು 2ನೇ ಮಹಾಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ವಿರೋಧಿಸಿ ಗೃಹ ಬಂಧನಕ್ಕೆ ಒಳಗಾದರು.
- ಅಲ್ಲಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿ ಹಿಟ್ಲರನ ಸಹಾಯವನ್ನು ಪಡೆಯಲೆತ್ನಿಸಿದರು.
- ಐ.ಎನ್.ಎ. ಸೈನ್ಯವನ್ನು ಸಂಘಟಿಸಿ ಜಪಾನ್ ಸಹಾಯದಿಂದ ಬ್ರಿಟಿಷರ ವಿರುದ್ಧ ಯುದ್ಧಕ್ಕಿಳಿದರು.

❖ ದೆಹಲಿ ಚಲೋ ಎಂದು ನೇತಾಜಿ ಕರೆ ಕೊಟ್ಟರು.

❖ ಐ.ಎನ್.ಎ. ಸೈನ್ಯವು ಅಂಡಮಾನ್&ನಿಕೋಬಾರಗಳನ್ನು ಗೆದ್ದು ಈಶಾನ್ಯ ರಾಜ್ಯಗಳ ಕಡೆಗೆ ಮುನ್ನಡೆಯಿತು.

❖ ಇದೇ ವೇಳೆ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು.

❖ ಮುಂದೆ ಐ.ಎನ್.ಎ. ಸೈನ್ಯ ಬ್ರಿಟಿಷರಿಗೆ ಸೋತಿತು.

**7. ನೆಹರುರವರು ಪ್ರಧಾನ ಮಂತ್ರಿಯಾಗಿ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.**

❖ ಜವಹರ್ ಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನ ಮಂತ್ರಿಯಾಗಿದ್ದಾರೆ.

❖ ಉತ್ತಮ ಆಡಳಿತದ ಮೂಲಕ ನವ ಭಾರತದ ಶಿಲ್ಪಿ ಎಂದು ಕರೆಯಲ್ಪಟ್ಟಿದ್ದಾರೆ.

❖ ಪಟೇಲ್‌ರವರ ಸಹಾಯದಿಂದ ಸಮಾರು 562 ದೇಶೀಯ ಸಂಸ್ಥಾನಗಳನ್ನು ಒಗ್ಗೂಡಿಸಿದರು.

❖ ಅಖಂಡ ಭಾರತವನ್ನು ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಿಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಅಧಿಕಾರವನ್ನು ಹಂಚಿದರು.

❖ ಭಾರತದಲ್ಲಿ ಮಿಶ್ರ ಆರ್ಥಿಕತೆಗೆ ಭದ್ರ ಬುನಾದಿಯನ್ನು ಹಾಕಿದರು.

❖ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು.

❖ ವಿವಿಧೋದ್ಧೇಶ ನದಿ ಕಣಿವೆ ಯೋಜನೆಗಳನ್ನು ಜಾರಿಗೆ ತಂದರು.

❖ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಶ್ರಮಿಸಿದರು.

❖ ಗ್ರಾಮೀಣಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದರು.

❖ ಭಾರತದ ವಿದೇಶಾಂಗ ನೀತಿಯ ಶಿಲ್ಪಿಯಾದ ನೆಹರುರವರು ಪಂಚಶೀಲ ತತ್ವ ಮತ್ತು ಅಲಿಪ್ತ ನೀತಿಯನ್ನು ಬೆಂಬಲಿಸಿದರು.

**8. ಅಸ್ಪೃಶ್ಯತೆಯ ನಿವಾರಣೆಗೆ ಅಂಬೇಡ್ಕರ್ ನಡೆಸಿದ ಹೋರಾಟವನ್ನು ವಿವರಿಸಿ.**

❖ ಡಾ. ಬಿ.ಆರ್. ಅಂಬೇಡ್ಕರ್ ಭಾರತದ 'ಆಧುನಿಕ ಮನು' ಎಂದು ಪ್ರಸಿದ್ಧರಾಗಿದ್ದಾರೆ.

❖ ಭಾರತದಲ್ಲಿನ ಅಸ್ಪೃಶ್ಯತೆಯ ನಿವಾರಣೆಗಾಗಿ ಮಾಡಿದ ಹೋರಾಟ ಸ್ಮರಣೀಯವಾದುದು.

❖ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಪ್ರತಿಪಾದಿಸಿದರು.

❖ ಅಸ್ಪೃಶ್ಯತೆಯ ನಿವಾರಣೆಗೆ ಮಹರ್ ಮತ್ತು ಕಾಲಾರಾಂ ಚಳುವಳಿಯನ್ನು ರೂಪಿಸಿದರು.

❖ ಗಾಂಧೀಜಿಯವರೊಂದಿಗೆ ಪೂನಾ ಒಪ್ಪಂದವನ್ನು ಮಾಡಿಕೊಂಡು ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಪಡೆದರು.

❖ 'ಬಹಿಷ್ಕೃತ ಭಾರತ' ಎಂಬ ಸಂಘಟನೆ ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ'ವನ್ನು ಸ್ಥಾಪಿಸಿದರು.

❖ 'ಪ್ರಭುದ್ಧ ಭಾರತ' ಮತ್ತು 'ಮೂಕ ನಾಯಕ' ಎಂಬ ಪತ್ರಿಕೆಗಳನ್ನು ಆರಂಭಿಸಿದ್ದರು.

❖ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಶೋಷಿತರಿಗೆ ಮೀಸಲಾತಿಯನ್ನು ಕಲ್ಪಿಸಿದರು.

❖ ಮೊದಲ ಕಾನೂನು ಮಂತ್ರಿಯಾಗಿ ಅಸ್ಪೃಶ್ಯತೆಯ ನಿವಾರಣೆಗೆ ಕಾನೂನುಗಳನ್ನು ಜಾರಿಗೊಳಿಸಿದರು.

❖ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

# 9. ಸ್ವಾತಂತ್ರ್ಯೋತ್ತರ ಭಾರತ

**<u>ಬಹುಆಯ್ಕೆ ಪ್ರಶ್ನೆಗಳು:</u>**

**1. ಬ್ರಿಟಿಷ ಭಾರತದ ಕೊನೆಯ ಗೌರ್ನರ್ ಜನರಲ್**

ಎ) ಲಾರ್ಡ್ ಮೌಂಟ್ ಬ್ಯಾಟನ್ ಬಿ) ಲಾರ್ಡ್ ಕರ್ಜನ್ ಸಿ) ಲಾರ್ಡ್ ರಿಪ್ಪನ್ ಡಿ) ಲಾರ್ಡ್ ಡಾಲ್‌ಹೌಸಿ

**2. ಭಾರತದ ದೇಶೀಯ ಸಂಸ್ಥಾನಗಳ ವಿಲೀನಗೊಳಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದವರು**

ಎ) ಜವಹರ್ ಲಾಲ್ ನೆಹರು ಬಿ) ಸರ್ದಾರ್ ವಲ್ಲಭ ಭಾಯಿ ಪಟೇಲ್

ಸಿ) ಮಹಾತ್ಮ ಗಾಂಧೀಜಿ ಡಿ) ಬಾಲಗಂಗಾಧರ ತಿಲಕ್

**3. ಗೋವಾ ವಿಮೋಚನೆಗೊಂಡ ವರ್ಷ**

ಎ) 1949 ಬಿ) 1954 ಸಿ) 1961 ಡಿ) 1965

**4. ಭಾರತದಲ್ಲಿ ರಚನೆಯಾದ ಮೊದಲ ಭಾಷಾವಾರು ರಾಜ್ಯ**

ಎ) ಆಂಧ್ರ ಪ್ರದೇಶ ಬಿ) ತಮಿಳುನಾಡು ಸಿ) ಕರ್ನಾಟಕ ಡಿ) ಮಹಾರಾಷ್ಟ್ರ

**5. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದ ವರ್ಷ**

ಎ) 1953 ಬಿ) 1954 ಸಿ) 1955 ಡಿ) 1956

**<u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>**

**1. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?**

❖ ಬಾಬು ರಾಜೇಂದ್ರ ಪ್ರಸಾದ್

**2. ಭಾರತದ ಪ್ರಥಮ ಗೃಹಮಂತ್ರಿ ಯಾರು?**

❖ ಸರ್ದಾರ್ ವಲ್ಲಭ ಭಾಯಿ ಪಟೇಲ್

**3. 'ಭಾರತದ ಉಕ್ಕಿನ ಮನುಷ್ಯ' ಎಂದು ಯಾರನ್ನು ಕರೆಯುತ್ತಾರೆ?**

❖ ಸರ್ದಾರ್ ವಲ್ಲಭ ಭಾಯಿ ಪಟೇಲ್

**4. ಹೈದರಾಬಾದ್ ನಿಜಾಮನ ಕ್ರೂರ ಸೈನಿಕ ಪಡೆಯನ್ನು ಏನೆಂದು ಕರೆಯುತ್ತಾರೆ?**

❖ ಹೈದರಾಬಾದ್ ನಿಜಾಮನ ಕ್ರೂರ ಸೈನಿಕ ಪಡೆಯನ್ನು ರಜಾಕರು ಎಂದು ಕರೆಯುತ್ತಾರೆ.

**5. ಭಾರತದ ಪ್ರದೇಶವೊಂದರ ಮೇಲೆ ಸುದೀರ್ಘ ಅವಧಿಯವರೆಗೆ ಆಳ್ವಿಕೆ ನಡೆಸಿದ ಯುರೋಪಿಯನ್ ದೇಶ ಯಾವುದು?**

❖ **ಪೋರ್ಚುಗಲ್**

**6. ಆಂಧ್ರ ಪ್ರದೇಶದ ರಚನೆಗಾಗಿ ಉಪವಾಸ ಸತ್ಯಾಗ್ರಹ ನಡೆಸಿ ಮರಣ ಹೊಂದಿದವರು ಯಾರು?**

❖ ಪೊಟ್ಟಿ ಶ್ರೀರಾಮುಲು

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

❖ ಲಕ್ಷಾಂತರ ನಿರಾಶ್ರಿತರ ಸಮಸ್ಯೆ

❖ ಕೋಮು ಗಲಭೆಗಳು

❖ ಸರ್ಕಾರ ರಚನೆ

❖ ದೇಶೀಯ ಸಂಸ್ಥಾನಗಳ ವಿಲೀನೀಕರಣ

❖ ಹಿಂದುಳಿದ ಆರ್ಥಿಕತೆ

❖ ಸಾಮಾಜಿಕ ಅಸಮಾನತೆ

**2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

❖ ದೇಶ ವಿಭಜನೆಯ ನಂತರ ಪಾಕಿಸ್ತಾನದಿಂದ ಲಕ್ಷಾಂತರ ಜನ ನಿರಾಶ್ರಿತರು ಭಾರತಕ್ಕೆ ಬಂದರು.

❖ ಈ ರೀತಿ ಬಂದವರಿಗೆ ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ಆಶ್ರಯ ಕಲ್ಪಿಸಲಾಯಿತು.

❖ 1971ರ ಬಾಂಗ್ಲಾ ವಿಮೋಚನಾ ಯುದ್ಧದ ಪರಿಣಾಮವಾಗಿ ಭಾರತಕ್ಕೆ ಬಂದ ಸುಮಾರು 10 ಲಕ್ಷ ನಿರಾಶ್ರಿತರಿಗೆ ಭಾರತ ಸರಕಾರ ಮತ್ತು ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯ ಸರಕಾರಗಳು ಆಶ್ರಯ ನೀಡಿದವು.

❖ ಭಾರತಕ್ಕೆ ಬಂದ ಟಿಬೆಟಿಯನ್ ನಿರಾಶ್ರಿತರಿಗಾಗಿ ಕರ್ನಾಟಕದ ಬೈಲುಕುಪ್ಪೆಯಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಯಿತು.

**3. ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸಿ ಯಶಸ್ವಿಯಾದದ್ದು, ಹೇಗೆ? / ಭಾರತ ಒಕ್ಕೂಟದಲ್ಲಿ ಸಂಸ್ಥಾನಗಳನ್ನು ಹೇಗೆ ವಿಲೀನಗೊಳಿಸಲಾಯಿತು?**

❖ 1947ರ ವಿಲೀನ ಕಾಯ್ದೆಯ ಪ್ರಕಾರ ಎಲ್ಲಾ ದೇಶಿಯ ಸಂಸ್ಥಾನಗಳನ್ನು ಭಾರತದ ಒಕ್ಕೂಟ ಸೇರಲು ಆಹ್ವಾನ ನೀಡಲಾಯಿತು.

❖ ಈ ರೀತಿ ವಿಲೀನಗೊಂಡವರಿಗೆ ರಾಜಧನ ಜೊತೆಗೆ ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ಸಹ ಇವರಿಗೆ ನೀಡಲಾಯಿತು.

❖ ಪರಿಣಾಮವಾಗಿ ಜಮ್ಮು-ಕಾಶ್ಮೀರ, ಹೈದರಾಬಾದ್ ಮತ್ತು ಜುನಾಗಢ ಸಂಸ್ಥಾನಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಸಂಸ್ಥಾನಗಳು ಭಾರತದ ಒಕ್ಕೂಟವನ್ನು ಸೇರಿದವು.

**4. ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನಗೊಂಡದ್ದು ಹೇಗೆ?**

❖ ಹೈದರಾಬಾದಿನ ನಿಜಾಮನು ಭಾರತದ ಒಕ್ಕೂಟವನ್ನು ಸೇರದೇ ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದನು.

❖ ತೆಲಂಗಾಣ ರೈತರು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ಸಶಸ್ತ್ರ ಹೋರಾಟವನ್ನು ನಡೆಸುತ್ತಿದ್ದರು.

❖ ನಿಜಾಮನ ಕ್ರೂರ ಪಡೆಯಾದ ರಜಾಕರರ ವಿರುದ್ಧ ಜನತೆಯಲ್ಲಿ ವ್ಯಾಪಕವಾದ ಪ್ರತಿರೋಧವಿತ್ತು.

❖ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದ ಒಕ್ಕೂಟಕ್ಕೆ ಸೇರಿಸಿಕೊಂಡರು.

**5. ಜಮ್ಮು-ಕಾಶ್ಮೀರವು ಭಾರತ ಒಕ್ಕೂಟವನ್ನು ಸೇರಿದ್ದು ಹೇಗೆ ವಿವರಿಸಿ.**

❖ ಜಮ್ಮು-ಕಾಶ್ಮೀರದ ರಾಜ ಹರಿಸಿಂಗನು ಸ್ವತಂತ್ರವಾಗಿ ಇರಲು ನಿರ್ಧರಿಸಿದ್ದನು.

❖ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.

❖ ಆಗ ಭಾರತದ ಸಹಾಯ ಪಡೆದ ಹರಿಸಿಂಗ್ ಹಲವು ಷರತ್ತುಗಳೊಂದಿಗೆ ಜಮ್ಮು-ಕಾಶ್ಮೀರವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದನು.

**6. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಗಿತ್ತು, ಏಕೆ?**

❖ ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ.

❖ ಈ ಹಿನ್ನಲೆಯಲ್ಲಿ ಸ್ವಾತಂತ್ರ್ಯ ನಂತರ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು.

❖ ಪರಿಣಾಮವಾಗಿ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಯಿತು.

**7. ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ. ಅಥವಾ ಫಜಲ್ ಅಲಿ ಆಯೋಗದ ಬಗ್ಗೆ ಬರೆಯಿರಿ.**

❖ ಕೇಂದ್ರ ಸರ್ಕಾರವು ಭಾಷಾವಾರು ರಾಜ್ಯಗಳ ರಚನೆಯ ಬಗ್ಗೆ ವರದಿ ನೀಡಲು 1953ರಲ್ಲಿ ಜಸ್ಟೀಸ್ ಫಜಲ್ ಅಲಿ ಆಯೋಗವನ್ನು ರಚಿಸಿತು.

❖ ಈ ಆಯೋಗದ ಶಿಫಾರಸ್ಸಿನಂತೆ 1953ರಲ್ಲಿ ಆಂಧ್ರಪ್ರದೇಶ ರಾಜ್ಯ ರಚನೆಯಾಯಿತು.

❖ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು.

**8. ಕರ್ನಾಟಕ ಏಕೀಕರಣದ ಬಗ್ಗೆ ಬರೆಯಿರಿ.**

❖ ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು.

❖ 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್' ನೇತೃತ್ವದಲ್ಲಿ ಚಳುವಳಿ ನಡೆಯಿತು.

❖ ಅಂತಿಮವಾಗಿ 1956 ನವಂಬರ್ 1ರಂದು 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದಿತು.

# 10. 20ನೇ ಶತಮಾನದ ರಾಜಕೀಯ ಆಯಾಮಗಳು

## ಬಹುಆಯ್ಕೆ ಪ್ರಶ್ನೆಗಳು:

**1. 1ನೇ ಮಹಾಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದ**

ಎ)ವರ್ಸೈಲ್ಸ್ ಒಪ್ಪಂದ ಬಿ)ಪ್ಯಾರೀಸ್ ಒಪ್ಪಂದ

ಸಿ)ರೋಮ್ ಒಪ್ಪಂದ ಡಿ)ವಿಯನ್ನ ಒಪ್ಪಂದ

**2. ರಷ್ಯಾದ ಕೊನೆಯ ದೊರೆ**

ಎ)ಲೆನಿನ್ ಬಿ)ಸ್ಟಾಲಿನ್

ಸಿ)2ನೇ ನಿಕೋಲಸ್ ಡಿ)ಗೋರ್ಬಚೆವ್

**3. ರಷ್ಯಾ ಕ್ರಾಂತಿ ಜರುಗಿದ್ದು**

ಎ)1915 ಬಿ)1916 ಸಿ)1917 ಡಿ)1918

**4. ಕಾರ್ಲ್‌ಮಾರ್ಕ್ಸ್‌ರ ಸಮಾಜವಾದವನ್ನು ಪ್ರಾಯೋಗಿಕ ವಾಗಿ ಜಾರಿಗೆ ತಂದವನು ಅಥವಾ ಕಮ್ಯುನಿಸ್ಟ್ ಸರ್ಕಾರ ರಚಿಸಿದವನು**

ಎ)ಲೆನಿನ್ ಬಿ)ಸ್ಟಾಲಿನ್

ಸಿ)2ನೇ ನಿಕೋಲಸ್ ಡಿ)ಗೋರ್ಬಚೆವ್

**5. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದವನು**

ಎ)ಲೆನಿನ್ ಬಿ)ಸ್ಟಾಲಿನ್

ಸಿ)2ನೇ ನಿಕೋಲಸ್ ಡಿ)ಗೋರ್ಬಚೆವ್

**6. ನಾಜಿ ಪಕ್ಷದ ಸ್ಥಾಪಕ**

ಎ)ಹಿಟ್ಲರ್ ಬಿ)ಮುಸೊಲಿನಿ

ಸಿ)2ನೇ ನಿಕೋಲಸ್ ಡಿ)ಸ್ಟಾಲಿನ್

**7. ಫ್ಯಾಸಿಸ್ಟ್ ಪಕ್ಷದ ಸ್ಥಾಪಕ**

ಎ)ಹಿಟ್ಲರ್ ಬಿ)ಮುಸೊಲಿನಿ

ಸಿ)2ನೇ ನಿಕೋಲಸ್ ಡಿ)ಸ್ಟಾಲಿನ್

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ಮೊದಲನೇ ಮಹಾಯುದ್ಧದ ವೇಳೆಯಿದ್ದ ಎರಡು ಮೈತ್ರಿಕೂಟಗಳಾವುವು?**

❖ ಕದನ ಬಾಂಧವ್ಯತ್ರಯ ಮತ್ತು ಕದನ ಸೌಹಾರ್ದತ್ರಯ.

**2. ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?**

❖ ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ.

**3. ರಷ್ಯಾವು ಮೊದಲನೇ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣವೇನು?**

❖ 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ರಷ್ಯಾ ಯುದ್ಧದಿಂದ ಹಿಂದೆ ಸರಿಯಿತು.

**4. ರಾಷ್ಟ್ರಸಂಘವನ್ನು ಏಕೆ ಸ್ಥಾಪಿಸಲಾಯಿತು?**

❖ ಸಂಭವನೀಯ ಯುದ್ಧಗಳನ್ನು ತಡೆಯುವ ದೃಷ್ಟಿಯಿಂದ ರಾಷ್ಟ್ರಸಂಘವನ್ನು ಸ್ಥಾಪಿಸಲಾಯಿತು.

**5. 19ನೇ ಶತಮಾನದಲ್ಲಿ ರಷ್ಯಾವನ್ನು ದೊರೆಗಳು ಯಾರು?**

❖ 19ನೇ ಶತಮಾನದಲ್ಲಿ ರಷ್ಯಾವನ್ನು ಝಾರ್ ದೊರೆಗಳು ಆಳುತ್ತಿದ್ದರು.

**6. 1905ರಲ್ಲಿ ರಷ್ಯಾವನ್ನು ಸೋಲಿಸಿದ ಏಷ್ಯಾದ ಪುಟ್ಟ ರಾಷ್ಟ್ರ ಯಾವುದು?**

- 1905ರಲ್ಲಿ ರಷ್ಯಾವನ್ನು ಸೋಲಿಸಿದ ಏಷ್ಯಾದ ಪುಟ್ಟ ರಾಷ್ಟ್ರ ಜಪಾನ್.

**7. ಲೆನಿನ್ ರಷ್ಯಾದ ಜನತೆಗೆ ನೀಡಿದ ಘೋಷಣೆಗಳೇನು?**

- ಲೆನಿನ್ ರಷ್ಯಾದ ಜನತೆಗೆ 'ಶಾಂತಿ, ಆಹಾರ, ಭೂಮಿ' ಘೋಷಣೆಗಳನ್ನು ನೀಡಿದನು.

**8. ಸೋವಿಯತ್ ರಷ್ಯಾ ವಿಘಟನೆ ಕಾರಣವಾದ ಎರಡು ಸುಧಾರಣೆಗಳು ಯಾವುವು?**

- ಗ್ಲಾಸ್‌ನೋಸ್ತ್ ಮತ್ತು ಪೆರೆಸ್ಟ್ರೋಯಿಕ್.

**9. ಗೋಬೆಲ್ಸ್ ಎಂದರೆ ಯಾರು?**

- ಹಿಟ್ಲರ್ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಶೇಷವಾದ ಮಂತ್ರಿಯನ್ನು ನೇಮಕ ಮಾಡಿದ್ದನು.

**10. ಹೊಲೊಕಾಸ್ಟ್ ಎಂದರೇನು?**

- ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎಂದು ಕರೆಯಲಾಗಿದೆ.

**11. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?**

- 2ನೇ ಮಹಾಯುದ್ಧವು 1939 ಸೆಪ್ಟಂಬರ್ 1ರಂದು ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು.

**12. ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಠ ಪ್ರಯೋಗ ಯಾವುದು?**

- ಚೀನಾ ಕಮ್ಯುನಿಸ್ಟರ ದೀರ್ಘ ಪಯಣ

**13. ಚೀನಾ ಕಮ್ಯುನಿಸ್ಟರ ನಾಯಕ ಯಾರು?**

- ಮಾವೋತ್ಸೆ ತುಂಗ್

**14. ಶೀತಲ ಸಮರ ಎಂದರೇನು?**

- ಎರಡು ಶಕ್ತಿ ಬಣಗಳ ನಡುವಿನ ಅಘೋಷಿತ ಸಮರ.

**15. ಜಪಾನ್ ದಾಳಿಗೆ ತುತ್ತಾದ ಅಮೇರಿಕಾದ ನೌಕಾ ನೆಲೆ ಯಾವುದು?**

- ಪರ್ಲ್‌ಹಾರ್ಬರ್

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಪ್ರಥಮ ಮಹಾಯುದ್ಧಕ್ಕೆ ಕಾರಣಗಳೇನು?**

- ಅತಿಯಾದ ಮಿಲಿಟರೀಕರಣ
- ಅತಿಯಾದ ರಾಷ್ಟ್ರೀಯತೆ
- ಮೈತ್ರಿಕೂಟಗಳ ರಚನೆ

**2. ಮೊದಲನೇ ಮಹಾಯುದ್ಧದ ಪರಿಣಾಮಗಳೇನು?**

- ಅಪಾರ ಪ್ರಮಾಣದ ಪ್ರಾಣ ಮತ್ತು ಆಸ್ತಿ ಹಾನಿ.
- ಆಸ್ಟ್ರೋ-ಹಂಗೇರಿ & ಟರ್ಕಿ ಸಾಮ್ರಾಜ್ಯಗಳು ಪತನ.
- ಭವಿಷ್ಯದ ಯುದ್ಧವನ್ನು ತಡೆಯಲು ರಾಷ್ಟ್ರಸಂಘದ ಸ್ಥಾಪನೆ.

**3. ರಷ್ಯಾದಲ್ಲಿ ಝಾರ್ ಶಾಹಿಯನ್ನು 'ರಾಷ್ಟ್ರೀಯತೆಯ ಜೈಲು' ಎಂದು ಕರೆಯಲಾಗುತ್ತಿತ್ತು ಏಕೆ?**

- ಝಾರ್‌ಗಳು ರಷ್ಯಾದ ಜನತೆಯನ್ನು ಶೋಷಿಸುತ್ತಿದ್ದರು.
- ಇದರಿಂದ ರಷ್ಯಾದ ಜನತೆ ಬೇಸತ್ತಿದ್ದರು.
- ಆದ್ದರಿಂದ ರಷ್ಯಾದಲ್ಲಿ ಝಾರ್‌ಶಾಹಿತ್ವವನ್ನು 'ರಾಷ್ಟ್ರೀಯತೆಯ ಜೈಲು' ಎಂದು ಕರೆಯಲಾಗುತ್ತಿತ್ತು.

**4. ರಷ್ಯಾದ ಕ್ರಾಂತಿಯಲ್ಲಿ ಲೆನಿನ್ ಪಾತ್ರವನ್ನು ವಿವರಿಸಿ.**

- ಕಾರ್ಮಿಕರ ಪಕ್ಷದವರಾದ ಬೋಲ್ಶವಿಕ್‌ರ ನೇತೃತ್ವದಲ್ಲಿ 1917ರ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು.
- ಲೆನಿನ್ ರಷ್ಯಾದ ಜನತೆಗೆ 'ಶಾಂತಿ, ಆಹಾರ, ಭೂಮಿ' ಘೋಷಣೆಗಳನ್ನು ನೀಡಿದನು
- ಲೆನಿನ್ ಕ್ರಾಂತಿಯ ಪಡೆಯನ್ನು ಸೇರಿ ನವಂಬರ್ 7ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಿಸಿದರು.
- ಇದನ್ನೇ 'ಅಕ್ಟೋಬರ್ ಕ್ರಾಂತಿ' ಎನ್ನುತ್ತಾರೆ. ಲೆನಿನ್ ರಷ್ಯನ್ ಸರ್ಕಾರದ ಅಧ್ಯಕ್ಷರಾದರು.

**5. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು?**

- ಸ್ಟಾಲಿನ್ ರಷ್ಯಾವನ್ನು ಅಮೇರಿಕಾಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡಿದನು.
- ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದನು.
- ವಿಶ್ವದ ಮೊದಲ ಮಾನವಸಹಿತ ಉಪಗ್ರಹವನ್ನು ಉಡಾವಣೆ ಮಾಡಿದನು.

**6. 1930ರ ಮಹಾಆರ್ಥಿಕ ಕುಸಿತದ ಪರಿಣಾಮಗಳೇನು?**

- ಯುರೋಪ್ ಮತ್ತು ಅಮೇರಿಕಾದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣವಾದವು.
- ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು.
- ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತವಾಗಿ ನಿರುದ್ಯೋಗ ವಿಪರಿತವಾಯಿತು.

**7. "ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು" ಹೇಗೆ ವಿವರಿಸಿ.**

- ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠವಾದುದು.

❖ ಜಗತ್ತನ್ನು ಆಳಲು ಜರ್ಮನ್ನರು ಮಾತ್ರ ಅರ್ಹರು.

❖ ಯಹೂದಿಗಳು, ಕ್ಯಾಥೋಲಿಕ್ & ಸೋಷಿಯಲಿಸ್ಟರನ್ನು ಕೊಲ್ಲಲಾಯಿತು.

❖ ಉಗ್ರರಾಷ್ಟ್ರೀಯತೆಯನ್ನು ಪ್ರತಿಪಾದಿಸಿತು.

**8. ಫ್ಯಾಸಿಸ್ಟ್ ವಾದದ ಲಕ್ಷಣಗಳನ್ನು ವಿವರಿಸಿ.**

❖ **ಉಗ್ರ ರಾಷ್ಟ್ರೀಯತೆ**

❖ **ಪರಕೀಯ ಶಕ್ತಿಗಳ ನಾಶ**

❖ **ಜನಾಂಗೀಯ ಶ್ರೇಷ್ಠತೆ**

❖ **ಸಾಮ್ರಾಜ್ಯವಾದದ ವಿಸ್ತರಣೆ**

**9. ಎರಡನೇ ಮಹಾಯುದ್ಧಕ್ಕೆ ಕಾರಣಗಳಾವುವು?**

❖ ರೋಮ್–ಬರ್ಲಿನ್–ಟೋಕಿಯೋ ಒಪ್ಪಂದ

❖ ಆಕ್ರಮಣಗಳನ್ನು ತಡೆಯುವಲ್ಲಿ ರಾಷ್ಟ್ರಸಂಘದ ವಿಫಲತೆ

❖ ಸರ್ವಾಧಿಕಾರಿಗಳ ವಿಸ್ತರಣಾ ನೀತಿ ಬಗ್ಗೆ ಯುರೋಪಿನ ರಾಷ್ಟ್ರಗಳು ಉದಾಸೀನತೆ

**10. 2ನೇ ಮಹಾಯುದ್ಧದ ಪರಿಣಾಮಗಳಾವುವು?**

❖ ಅಪಾರ ಸಾವು–ನೋವು ಉಂಟಾಯಿತು.

❖ ವಿಶ್ವ ಶಾಂತಿ & ಭದ್ರತೆಗಾಗಿ ವಿಶ್ವಸಂಸ್ಥೆಯ ಸ್ಥಾಪನೆ.

❖ ಅಮೇರಿಕಾ ಮತ್ತು ರಷ್ಯಾ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳು ಉಗಮವಾದವು.

❖ ಬ್ರಿಟನ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ತಮ್ಮ ವಸಹತುಗಳನ್ನು ಕಳೆದುಕೊಂಡರು.

**11. ಚೀನಾ ಕ್ರಾಂತಿಯ ಪರಿಣಾಮಗಳಾವುವು?**

❖ ಚೀನಾದಲ್ಲಿ ರಾಷ್ಟ್ರೀಯ ಐಕ್ಯತೆ ಉಂಟಾಯಿತು.

❖ ಪ್ರಬಲ ಕಮ್ಯುನಿಸ್ಟ್ ದೇಶವಾಗಿ ಬೆಳೆಯಿತು.

❖ ಕೈಗಾರಿಕೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿತು.

❖ ಸಾಮೂಹಿಕ ಕೃಷಿ ಪದ್ಧತಿ, ಉಚಿತ ಶಿಕ್ಷಣ, ಆರೋಗ್ಯ ಮುಂತಾದವುಗಳಿಂದ ಜನಜೀವನಮಟ್ಟ ಸುಧಾರಿಸಿತು.

**12. ಮಹಾ ಆರ್ಥಿಕ ಕುಸಿತದಿಂದ ಅಮೇರಿಕಾದ ಮೇಲಾದ ಪರಿಣಾಮಗಳೇನು?**

❖ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿತು.

❖ ಕೈಗಾರಿಕೆ & ಕೃಷಿ ಕ್ಷೇತ್ರಗಳಲ್ಲಿ ಉತ್ಪಾದನೆ ಕುಸಿಯಿತು.

❖ ಗಣಿಗಾರಿಕೆ, ಹಡಗು ಕಟ್ಟುವಿಕೆ, ಆಟೋಮೊಬೈಲ್ ಉತ್ಪಾದನೆಗೆ ಹಿನ್ನಡೆ ಉಂಟಾಯಿತು.

❖ ಅಮೇರಿಕಾದಲ್ಲಿ ರಾಜಕೀಯ ಬದಲಾವಣೆಯಾಯಿತು.

# ರಾಜ್ಯಶಾಸ್ತ್ರ

## 1. ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳ

### ಬಹುಆಯ್ಕೆ ಪ್ರಶ್ನೆಗಳು:

**1. ಸಂವಿಧಾನದ 371ನೇ ವಿಧಿಯು ಈ ಕೆಳಗಿನ ಯಾವ ಸಮಸ್ಯೆಯ ನಿವಾರಣೆಯಲ್ಲಿ ಮಹತ್ತರ ಪಾತ್ರವಹಿಸಿದೆ.**

**ಎ) ಲಿಂಗ ತಾರತಮ್ಯ ಬಿ) ಜಾತಿ ತಾರತಮ್ಯ ಸಿ) ಪ್ರಾದೇಶಿಕ ಅಸಮಾನತೆ ಡಿ) ಭಯೋತ್ಪಾದನೆ**

**2. ಭಾರತದಲ್ಲಿನ ಭಯೋತ್ಪಾದಕತೆಗೆ ಬೆಂಬಲ ನೀಡುತ್ತಿರುವ ನೆರೆಯ ರಾಷ್ಟ್ರಗಳಾವುವು?**

ಎ) ಪಾಕಿಸ್ತಾನ ಮತ್ತು ಚೀನಾ ಬಿ) ಪಾಕಿಸ್ತಾನ ಮತ್ತು ರಷ್ಯಾ ಸಿ) **ಪಾಕಿಸ್ತಾನ ಮತ್ತು ನೇಪಾಳ ಡಿ) ಅಮೇರಿಕಾ ಮತ್ತು ರಷ್ಯಾ**

### ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ನಿರುದ್ಯೋಗ ಎಂದರೇನು?**

❖ ನಿರುದ್ಯೋಗ ಎಂದರೆ ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯಾಗಿದೆ.

**2. ಭ್ರಷ್ಟಾಚಾರ ಎಂದರೇನು?**

❖ ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದರ್ಥ. (ಸ್ವಾರ್ಥದ ದೃಷ್ಟಿಯಿಂದ ಸ್ವಂತ ಲಾಭಕ್ಕಾಗಿ ಅಧಿಕಾರ ದುರುಪಯೋಗವನ್ನೇ ಭ್ರಷ್ಟಾಚಾರ ಎಂದು ಕರೆಯಬಹುದು).

**3. ಭಾರತದಲ್ಲಿ ಲಿಂಗ ತಾರತಮ್ಯಕ್ಕೆ ಕಾರಣವೇನು?**

❖ ಪುರುಷ ಮತ್ತು ಮಹಿಳೆಯರ ನಡುವೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣದಲ್ಲಿರುವ ಭಿನ್ನತೆಗಳು.

**4. ಪ್ರಾದೇಶಿಕ ಅಸಮತೋಲನ ಎಂದರೇನು?**

❖ ಅಭಿವೃದ್ಧಿಯ ಹೆಸರಿನಲ್ಲಿ ರಾಷ್ಟ್ರದ ಕೆಲವು ಪ್ರದೇಶಗಳು ಸ್ವಾಭಾವಿಕವಾಗಿಯೇ ಮುಂದುವರೆದಿದ್ದರೆ ಕೆಲವು ಪ್ರದೇಶಗಳು ಹಿಂದುಳಿದಿವೆ. ಇದನ್ನೇ ಪ್ರಾದೇಶಿಕ ಅಸಮತೋಲನ ಎನ್ನುತ್ತೇವೆ.

**5. ಡಾ॥ ಡಿ.ಎಂ ನಂಜುಂಡಪ್ಪ ಸಮಿತಿಯನ್ನು ಏಕೆ ರಚಿಸಲಾಯಿತು?**

❖ **ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ನಿಟ್ಟಿನಲ್ಲಿ ನಂಜುಂಡಪ್ಪ ಸಮಿತಿಯನ್ನು ರಚಿಸಲಾಗಿತ್ತು.**

**6. 'ಸ್ತ್ರೀಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿರುವುದರ ಉದ್ದೇಶವೇನು?**

❖ ಗ್ರಾಮೀಣ ಮಹಿಳೆಯರ ವಿಕಾಸಕ್ಕೆಂದು ಕರ್ನಾಟಕ ಸರ್ಕಾರವು 'ಸ್ತ್ರೀಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿದೆ.

**7. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು?**

❖ ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎಂದು ಕರೆಯಲಾಗುತ್ತದೆ.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಭಾರತದಲ್ಲಿ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುತ್ತಿರಲು ಕಾರಣಗಳೇನು?**

❖ ಮಿತಿಮೀರಿದ ಜನಸಂಖ್ಯೆ

❖ ಹೆಚ್ಚಾದ ತಂತ್ರಜ್ಞಾನದ ಬಳಕೆ

❖ ನೈಸರ್ಗಿಕ ಸಂಪನ್ಮೂಲಗಳ ಕೊರತೆ

❖ ಕೃಷಿಯ ಮೇಲಿನ ಅಧಿಕ ಅವಲಂಬನೆ

❖ ಗೃಹ ಕೈಗಾರಿಕೆಗಳ ನಾಶ

❖ ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**2. ಭಾರತದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ. / ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

❖ ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡುವುದು

❖ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ನೀಡುವುದು

❖ ಸಹಾಯಧನ ನೀಡುವುದು

❖ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವುದು

❖ ವೃತ್ತಿ ಶಿಕ್ಷಣಕ್ಕೆ ಒತ್ತು ನೀಡುವುದು

**3. ಭ್ರಷ್ಟಾಚಾರದ ದುಷ್ಪರಿಣಾಗಳನ್ನು ವಿವರಿಸಿ.**

❖ ಸಾರ್ವಜನಿಕ/ವೈಯಕ್ತಿಕವಾಗಿ ನಕರಾತ್ಮಕ ಪರಿಣಾಮ

❖ ರಾಜಕೀಯ ಮತ್ತು ಆರ್ಥಿಕ ದುಷ್ಪರಿಣಾಮ

❖ ಸಮಾಜ & ಆರ್ಥಿಕ ಸುವ್ಯವಸ್ಥೆಗೆ ವಿರೋಧಿ

❖ ವ್ಯವಸ್ಥಿತ ಅಪರಾಧಗಳಿಗೆ ಅವಕಾಶ

❖ ಅನೈತಿಕ ಚಟುವಟಿಕೆಗಳಿಗೆ ಕಾರಣ

**4. ಭ್ರಷ್ಟಾಚಾರಕ್ಕೆ ಪ್ರೇರೇಪಿಸುವ/ಅನುವು ಮಾಡಿಕೊಡುವ ಅಂಶಗಳಾವುವು?**

❖ ಮಾನವ ಸಹಜವಾದ ಸ್ವಾರ್ಥ

❖ ಆಪತ್ತುಗಳ ನಿವಾರಣೆಯ ಲೆಕ್ಕಾಚಾರ

❖ ವೈಯಕ್ತಿಕ ಲಾಭ

❖ ಕಟ್ಟುನಿಟ್ಟಾದ ಮೇಲ್ವಿಚಾರಣೆ ಇಲ್ಲದಿರುವುದು

❖ ದುರ್ಬಲ ಕಾನೂನು ವ್ಯವಸ್ಥೆ

**5. ಭ್ರಷ್ಟಾಚಾರದ ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?**

❖ ಪ್ರಬಲ ರಾಜಕೀಯ ಇಚ್ಛಾಶಕ್ತಿ

❖ ಸಾರ್ವಜನಿಕರ ಸಹಕಾರ

❖ ಜನ ಜಾಗೃತಿ

❖ ಕಠಿಣ ಶಿಕ್ಷೆ ವಿಧಿಸುವುದು

❖ ಲೋಕಪಾಲ್ & ಲೋಕಾಯುಕ್ತ ಸಂಸ್ಥೆಗಳ ಸ್ಥಾಪನೆ

❖ ಸರ್ಕಾರಿ ಕಛೇರಿಗಳಲ್ಲಿ ಸಿಸಿಟಿವಿ ಅಳವಡಿಕೆ

**6. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

❖ 2001ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯು ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಕುರಿತು ವರದಿ ನೀಡಿದೆ.

❖ ಸಂವಿಧಾನಕ್ಕೆ ವಿಧಿ 371 (ಜೆ) ಸೇರ್ಪಡೆ ಮಾಡುವುದರ ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

**7. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?**

❖ ಸಮಾಜದಲ್ಲಿ ಅಪನಂಬಿಕೆ ಮತ್ತು ಭಯದ ಸೃಷ್ಟಿ

❖ ಗುಂಪುಗಾರಿಕೆ & ರಾಜಕೀಯ ಪೈಪೋಟಿ

❖ ಸಾಮಾಜಿಕ ನೆಮ್ಮದಿಯ ನಾಶ

❖ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ

❖ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶ

**8. ಕೋಮುವಾದವನ್ನು ತಡೆಗಟ್ಟಲು ಪರಿಹಾರ ಕ್ರಮಗಳನ್ನು ಸೂಚಿಸಿರಿ.**

❖ ಸಮಾನ ನಾಗರಿಕ ಸಂಹಿತೆ ಜಾರಿಗೊಳಿಸುವುದು.

❖ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವುದು.

❖ ಎಲ್ಲ ರಂಗಗಳಲ್ಲಿಯೂ ಜಾತ್ಯತೀತ ತತ್ವಗಳಿಗೆ ಒತ್ತು.

❖ ಉತ್ತಮ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸುವುದು.

**9. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು?**

❖ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರಚನೆ.

❖ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಯ ಜಾರಿಗೊಳಿಸಲಾಗಿದೆ.

❖ ಸರ್ಕಾರಿ ಉದ್ಯೋಗದಲ್ಲಿ ಶೇಕಡ 33ರಷ್ಟು ಮೀಸಲಾತಿಯನ್ನು ನೀಡಲಾಗಿದೆ.

❖ ಮಹಿಳಾ ಆಯೋಗಗಳನ್ನು ರಚಿಸಲಾಗಿದೆ.

❖ ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ವಿಕಾಸಕ್ಕೆಂದು 'ಸ್ತ್ರೀ ಶಕ್ತಿ' ಕಾರ್ಯಕ್ರಮವನ್ನು ರೂಪಿಸಲಾಗಿದೆ.

**10. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳು ಯಾವುವು?**

❖ ಭಯ & ಆತಂಕದ ವಾತಾವರಣವನ್ನು ಸೃಷ್ಟಿಸುತ್ತದೆ.

❖ ವ್ಯಕ್ತಿಗಳಿಗೆ/ಸೊತ್ತುಗಳಿಗೆ ಹಾನಿ ಉಂಟು ಮಾಡುತ್ತದೆ.

❖ ಸಾಮಾಜಿಕ ಸಂಸ್ಕೃತಿಗೆ ಮತ್ತು ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.

❖ ಮಾನಸಿಕ ವೇದನೆಯನ್ನು ನೀಡುತ್ತದೆ.

**11. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?**

❖ ವಿಶೇಷ ಪರಿಣತಿ ಪಡೆದ ಪಡೆಯನ್ನು ರಚಿಸಲಾಗುತ್ತಿದೆ.

❖ ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ.

❖ ಶಾಂತಿಪ್ರಿಯ ಭಾರತ ಭಯೋತ್ಪಾದನೆಯನ್ನು ಪ್ರಬಲವಾಗಿ ವಿರೋಧಿಸುತ್ತದೆ.

**12. ಪ್ರಸ್ತುತ ಕಾರ್ಪೋರೇಟ್ ತಂತ್ರಗಾರಿಕೆ ಬೆಳವಣಿಗೆಯ ಕುರಿತು ವಿವರಿಸಿ.**

❖ ಕಾರ್ಪೋರೇಟ್ ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ.

❖ ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭವನ್ನು ಪಡೆಯುವುದಾಗಿರುತ್ತದೆ.

❖ ಇದರಿಂದ ನಕಾರಾತ್ಮಕವಾದ ಬೆಳವಣಿಗೆಗಳು ವ್ಯಕ್ತಿಯ ಜೀವನ ಸಮಾಜ & ರಾಷ್ಟ್ರಗಳ ಮೇಲುಂಟಾಗುತ್ತದೆ.

❖ ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲೂ ತನ್ನ ಪ್ರಭಾವಗಳನ್ನು ಬೀರುತ್ತದೆ.

❖ ಕಾರ್ಪೋರೇಟ್ ಸಾಮಾಜಿಕಭದ್ರತಾ ಯೋಜನೆಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗಿದೆ.

# 2. ಭಾರತದ ವಿದೇಶಾಂಗ ನೀತಿ

## ಬಹುಆಯ್ಕೆ ಪ್ರಶ್ನೆಗಳು:

**1. ಭಾರತದ ವಿದೇಶಾಂಗ ನೀತಿಯ ಶಿಲ್ಪಿ**

ಎ) ಜವಾಹರ್ ಲಾಲ್ ನೆಹರು ಬಿ) ಅಂಬೇಡ್ಕರ್

ಸಿ) ಬಾಬು ರಾಜೇಂದ್ರ ಪ್ರಸಾದ್ ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್

**2. ಪಂಚಶೀಲ ತತ್ವಗಳಿಗೆ ಸಹಿ ಹಾಕಿದ ಎರಡು ದೇಶಗಳು**

ಎ) ಭಾರತ–ಪಾಕಿಸ್ತಾನ ಬಿ) ಭಾರತ–ಶ್ರೀಲಂಕಾ

ಸಿ) ಭಾರತ–ಚೀನಾ ಡಿ) ಭಾರತ–ಅಮೇರಿಕಾ

**3. ಭಾರತವು ಅಲಿಪ್ತ ವಿದೇಶಾಂಗ ನೀತಿಯನ್ನು ಅನುಸರಿಸಿತು. ಅದರ ಅರ್ಥವೆಂದರೆ ಭಾರತವು**

**ಎ) ಅಮೇರಿಕಾ ಬಣವನ್ನು ಸೇರಿತು ಬಿ) ರಷ್ಯಾ ಬಣವನ್ನು ಸೇರಿತು**

**ಸಿ) ಎರಡೂ ಬಣಗಳಿಂದ ಸಮಾನ ಅಂತರ ಕಾಪಾಡಿತು ಡಿ) ವಿಸ್ತರಣಾವಾದಿ ನೀತಿಯನ್ನು ಅನುಸರಿಸಿತು**

**4. 'ಆಫ್ರಿಕಾದ ಗಾಂಧಿ' ಎಂದು ಕರೆಯಲ್ಪಟ್ಟವರು**

ಎ) ಅಬ್ರಹಾಂ ಲಿಂಕನ್ ಬಿ) ನೆಲ್ಸನ್ ಮಂಡೇಲಾ ಸಿ) ಜಾನ್ ಎಫ್ ಕೆನಡಿ ಡಿ) ಮಾರ್ಟಿನ್ ಲೂಥರ್

**5. ಭಾರತವು ವಸಾಹತುಶಾಹಿತ್ವವನ್ನು ಪ್ರಬಲವಾಗಿ ವಿರೋಧಿಸುತ್ತದೆ. ಏಕೆಂದರೆ ಭಾರತವು**

**ಎ)ವಸಾಹತುಶಾಹಿತ್ವವನ್ನು ಅನುಸರಿಸುತ್ತಿದೆ. ಬಿ)ವಸಾಹತುಶಾಹಿತ್ವವನ್ನು ವಿರೋಧಿಸಿ ಸ್ವಾತಂತ್ರ್ಯ ಗಳಿಸಿದೆ.**

**ಸಿ)ಅಲಿಪ್ತ ನೀತಿಯನ್ನು ಅನುಸರಿಸುತ್ತಿದೆ. ಡಿ)ಯಾವುದೇ ವಸಾಹತು ರಾಷ್ಟ್ರವನ್ನು ಹೊಂದಿಲ್ಲ.**

**6. ಭಾರತವು ನೆಲ್ಸನ್ ಮಂಡೇಲಾರವರನ್ನು ಬೆಂಬಲಿಸಿತು. ಏಕೆಂದರೆ,**

**ಎ)ಭಾರತವು ನೆಲ್ಸನ್ ಮಂಡೇಲಾರವರನ್ನು 'ಆಫ್ರಿಕಾದ ಗಾಂಧಿ' ಎಂದು ಕರೆಯಿತು.**

**ಬಿ)ಭಾರತದ ವಿದೇಶಾಂಗ ನೀತಿಯು ವರ್ಣಬೇಧ ನೀತಿಯನ್ನು ವಿರೋಧಿಸುತ್ತದೆ.**

**ಸಿ)ಭಾರತವು ವಿಶ್ವಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರವಾಗಿದೆ.**

**ಡಿ)ಭಾರತವು ಅಲಿಪ್ತ ನೀತಿಯನ್ನು ಅನುಸರಿಸುತ್ತಿದೆ.**

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ವಿದೇಶಾಂಗ ನೀತಿ ಎಂದರೇನು?**

❖ ರಾಷ್ಟ್ರವೊಂದು ಅನ್ಯ ರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ.

**2. ಸಾರ್ವಭೌಮ ರಾಷ್ಟ್ರ ಎಂದರೇನು?**

❖ ಯಾವುದೇ ರಾಷ್ಟ್ರ ಆಂತರಿಕವಾಗಲೀ, ಬಾಹ್ಯವಾಗಿ ಆಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿ ಇರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎನ್ನುತ್ತಾರೆ.

**3. ಭಾರತದ ವಿದೇಶಾಂಗ ನೀತಿಯನ್ನು ನೆಹರು ವಿದೇಶಾಂಗ ನೀತಿ ಎಂದು ಕರೆಯುತ್ತಾರೆ. ಏಕೆ?**

❖ ಭಾರತದ ವಿದೇಶಾಂಗ ನೀತಿಯನ್ನು ಜವಾಹರ್ ಲಾಲ್ ನೆಹರು ರೂಪಿಸಿರುವುದರಿಂದ ನೆಹರು ವಿದೇಶಾಂಗ ನೀತಿ ಎಂದು ಕರೆಯುತ್ತಾರೆ.

**4. ಅಲಿಪ್ತ ನೀತಿ ಎಂದರೇನು?**

❖ ಅಲಿಪ್ತ ನೀತಿ ಎಂದರೆ ಯಾವುದೇ ಶಕ್ತಿ ಬಣವನ್ನು ಸೇರದೇ ತಟಸ್ಥವಾಗಿರುವುದು.

**5. ವಸಾಹತು ಶಾಹಿತ್ವ ಎಂದರೇನು?**

❖ ವಸಾಹತುಶಾಹಿತ್ವ ಎಂದರೆ ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದು.

**6. ವರ್ಣಭೇದ ನೀತಿ ಎಂದರೇನು?**

❖ ಒಂದು ವರ್ಣದ ಜನಸಮುದಾಯ ಇನ್ನೊಂದು ವರ್ಣದ ಜನ ಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎಂದು ಕರೆಯಬಹುದು.

**7. ಸಾರ್ಕ್‌ನ ವಿಸ್ತೃತ ರೂಪವನ್ನು ಬರೆಯಿರಿ.**

❖ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ (South Asian Association of Regional Co-operation).

**<u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>**

**1. ಭಾರತ ವಿದೇಶಾಂಗ ನೀತಿಯ ಉದ್ದೇಶ(ಗುರಿ)ಗಳು ಯಾವುವು?**

❖ ರಾಷ್ಟ್ರದ ಭದ್ರತೆ

❖ ರಾಷ್ಟ್ರದ ಆರ್ಥಿಕ ಸಂವರ್ಧನೆ

❖ ನಮ್ಮ ಮೌಲ್ಯಗಳನ್ನು ಬೇರೆ ದೇಶಗಳಲ್ಲಿ ಬಿತ್ತುವುದು

❖ ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ಹತ್ತಿಕ್ಕುವುದು

❖ ವಿಶ್ವಶಾಂತಿ & ಸಹಬಾಳ್ವೆ

**2. ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾಗಿರುವ ಸಂಗತಿಗಳಾವುವು? <u>ಅಥವಾ</u> ಭಾರತದ ವಿದೇಶಾಂಗ ನೀತಿಯನ್ನು ಪ್ರಭಾವಿಸುವ /ನಿರ್ಧರಿಸುವ ಅಂಶಗಳು ಯಾವುವು?**

❖ ರಾಷ್ಟ್ರೀಯ ಹಿತಾಸಕ್ತಿಗಳು

❖ ಭೌಗೋಳಿಕ ಅಂಶಗಳು

❖ ರಾಜಕೀಯ ಪರಿಸ್ಥಿತಿ

❖ ಆರ್ಥಿಕ ವ್ಯವಸ್ಥೆ

❖ ರಕ್ಷಣಾ ಸಾಮರ್ಥ್ಯ

❖ ಜನಾಭಿಪ್ರಾಯ

❖ ಅಂತರರಾಷ್ಟ್ರೀಯ ಪರಿಸರ

**3. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು? <u>ಅಥವಾ</u> ಭಾರತದ ವಿದೇಶಾಂಗ ನೀತಿಯ ಲಕ್ಷಣಗಳಾವುವು?**

❖ ಪಂಚಶೀಲ ತತ್ವಗಳು

❖ ಅಲಿಪ್ತ ನೀತಿ

❖ ವಸಾಹತುಶಾಹಿತ್ವಕ್ಕೆ ವಿರೋಧ

❖ ವರ್ಣಭೇದ ನೀತಿಗೆ ವಿರೋಧ

❖ ನಿಶ್ಶಸ್ತ್ರೀಕರಣ

**4. ಪಂಚಶೀಲ ತತ್ವಗಳಾವುವು?**

❖ ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ & ಸಾರ್ವಭೌಮತೆಗೆ ಗೌರವ.

❖ ಪರಸ್ಪರ ಆಕ್ರಮಣ ಮಾಡದಿರುವುದು.

❖ ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.

❖ ಪರಸ್ಪರ ಸಹಕಾರ ಮತ್ತು ಸಮಾನತೆ.

❖ ಪರಸ್ಪರ ಶಾಂತಿಯುತ ಸಹಬಾಳ್ವೆ.

# 3. ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**<u>ಬಹುಆಯ್ಕೆ ಪ್ರಶ್ನೆಗಳು:</u>**

**1. ಪಂಚಶೀಲ ತತ್ವಗಳ ಮೂಲಕ ----- ರಾಷ್ಟ್ರದೊಂದಿಗೆ ಸಂಬಂಧ ವೃದ್ಧಿಸಲಾಯಿತು.**

ಎ) ಪಾಕಿಸ್ತಾನ ಬಿ) ಚೀನಾ ಸಿ) ಅಮೇರಿಕಾ ಡಿ) ರಷ್ಯಾ

**2. ಈ ಕೆಳಗಿನ ಯಾವ ರಾಷ್ಟ್ರಗಳ ಪ್ರಯತ್ನದ ಫಲವಾಗಿ ಬ್ರಿಕ್ಸ್ ರಾಷ್ಟ್ರಗಳ ಒಕ್ಕೂಟ(ಗುಂಪು) ಪ್ರಾರಂಭವಾಯಿತು.**

ಎ) ಭಾರತ ಮತ್ತು ಪಾಕಿಸ್ತಾನ ಬಿ) ಭಾರತ ಮತ್ತು ರಷ್ಯಾ ಸಿ) ಭಾರತ ಮತ್ತು ಅಮೇರಿಕಾ ಡಿ) ಭಾರತ ಮತ್ತು ಚೀನಾ

**3. ಭಾರತವು ಅಲಿಪ್ತ ಚಳುವಳಿಯನ್ನು ಅನುಸರಿಸಿದ್ದು**

ಎ) ಸ್ವಾತಂತ್ರ್ಯ ಚಳುವಳಿ ಸಮಯದಲ್ಲಿ ಬಿ) ಎರಡನೇ ವಿಶ್ವ ಸಮರದ ಸಮಯದಲ್ಲಿ

ಸಿ) ಎರಡು ಧ್ರುವೀಕರಣ ಜಗತ್ತು ಸಮಯದಲ್ಲಿ ಡಿ) ಭಾರತ ಚೀನಾಯುದ್ಧ ಸಮಯದಲ್ಲಿ

**4. ಭಾರತದ ಭಿಲಾಯ್ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ಸಹಕರಿಸಿದ ದೇಶ**

ಎ)ಅಮೇರಿಕಾ ಬಿ)ಶ್ರೀಲಂಕಾ ಸಿ)ರಷ್ಯಾ ಡಿ)ಬಾಂಗ್ಲಾದೇಶ

**5. 1966ರಲ್ಲಿ ಭಾರತ-ಪಾಕಿಸ್ತಾನಗಳ ಮಧ್ಯೆ ಈ ಕೆಳಗಿನ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.**

ಎ) ತಾಷ್ಕೆಂಟ್ ಬಿ) ಅಮೃತಸರ ಸಿ) ಸಿಮ್ಲಾ ಡಿ) ಲಾಹೋರ್

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ಭಾರತ-ಚೀನಾ ಸಂಬಂಧದ ಮೇಲೆ ದುಷ್ಪರಿಣಾಮ ಬೀರುವ ಅಂಶ ಯಾವುದು?**

❖ ಚೀನಾ ದೇಶವು ಅರುಣಾಚಲ ಪ್ರದೇಶವನ್ನು ತನ್ನದೆಂದು ಪ್ರತಿಪಾದಿಸುತ್ತಿರುವುದು.

**2. 1971ರಲ್ಲಿ 20ವರ್ಷಗಳ ಶಾಂತಿ, ಮೈತ್ರಿ & ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳಾವುವು?**

❖ **ಭಾರತ ಮತ್ತು ರಷ್ಯಾ**

**3. ಭಾರತ ಮತ್ತು ಅಮೇರಿಕಾ ದೇಶಗಳು ಯಾವ ವಿಷಯದಲ್ಲಿ ಸಮಾನ ಹಿತಾಸಕ್ತಿಯನ್ನು ಹೊಂದಿವೆ?**

❖ ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಎರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.

**4. ಭಾರತವು ಅಮೇರಿಕಾ ರಾಷ್ಟ್ರಾಧ್ಯಕ್ಷರ ಧೋರಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತದೆ. ಏಕೆ?**

❖ **ಅಮೇರಿಕಾ ರಾಷ್ಟ್ರಾಧ್ಯಕ್ಷರ ಧೋರಣೆಗಳಿಗೆ ಅನುಗುಣವಾಗಿ ಭಾರತ ತನ್ನ ವಿದೇಶಾಂಗ ನೀತಿಯನ್ನು ಸಿದ್ಧಪಡಿಸುತ್ತದೆ.**

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಭಾಂದವ್ಯ ಅವಶ್ಯಕ ಏಕೆ?**

❖ ವಿಶ್ವ ಕುಟುಂಬದ ಪರಿಕಲ್ಪನೆಯ ಸಾಕಾರ

❖ ಪರಸ್ಪರ ಸಹಕಾರ ಮತ್ತು ಅನ್ಯೋನ್ಯತೆ

❖ ರಾಷ್ಟ್ರೀಯ ಹಿತಾಸಕ್ತಿಗಳು

❖ ಗಡಿ ಭದ್ರತೆ

❖ ವಿದೇಶ ವ್ಯಾಪಾರ

❖ ಆರ್ಥಿಕ ಲಾಭ

❖ ರಾಷ್ಟ್ರದ ಗೌರವ

**2. ಭಾರತ ಮತ್ತು ಚೀನಾ ನಡುವಿನ ಭಾಂದವ್ಯಕ್ಕೆ ಅಡ್ಡಿಯಾಗಿರುವ ಅಂಶಗಳಾವುವು? / ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?**

❖ **ಟಿಬೆಟ್ ವಿವಾದ**

❖ **1962ರ ಭಾರತ ಮತ್ತು ಚೀನಾ ಯುದ್ಧ**

❖ **ಗಡಿ ವಿವಾದ**

❖ **ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವ ಚೀನಾವಾದ**

**3. ಭಾರತ ಮತ್ತು ಚೀನಾ ನಡುವಿನ ಸಂಬಂದವನ್ನು ವಿವರಿಸಿ.**

❖ **ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧ ಸಿಂಧೂ ನಾಗರೀಕತೆಯ ಕಾಲದಿಂದಲೂ ಕಾಣಬಹುದು.**

❖ **ಪಂಚಶೀಲ ತತ್ವಗಳ ಮೂಲಕ ಸಂಬಂಧ ವೃದ್ಧಿಗೆ ಪ್ರಯತ್ನಿಸಲಾಗಿದೆ.**

❖ **ಟಿಬೆಟ್ ಆಕ್ರಮಣ ಮತ್ತು ಭಾರತದ ಮೇಲಿನ ಯುದ್ಧದಿಂದ ಸಂಬಂಧ ಹದಗೆಟ್ಟಿದೆ.**

❖ **ಗಡಿ ಸಮಸ್ಯೆ ಮತ್ತು ಚೀನಾ ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವುದು ಸಂಬಂಧಕ್ಕೆ ಧಕ್ಕೆಯಾಗಿದೆ.**

❖ **ಈ ಸಮಸ್ಯೆಗಳ ಹೊರತಾಗಿಯೂ ಎರಡು ದೇಶಗಳು ರಾಯಭಾರಿ ಸಂಬಂಧಗಳನ್ನು ಮುಂದುವರೆಸಿವೆ.**

❖ 1980ರ **ನಂತರ ದೊಡ್ಡಮಟ್ಟದ ವ್ಯಾಪಾರ ಸಂಪರ್ಕ ಬೆಳೆದಿದೆ.**

❖ **ಭಾರತ ಮತ್ತು ಚೀನಾ ದೇಶಗಳ ಪ್ರಯತ್ನದಿಂದ ಬ್ರಿಕ್ಸ್ ದೇಶಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ.**

**4. ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವಿನ ಸಂಬಂಧವನ್ನು ವಿವರಿಸಿ.**

❖ ಪಾಕಿಸ್ತಾನ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅವಿಭಾಜ್ಯ ಅಂಗವಾಗಿತ್ತು.

❖ 1947ರ ಭಾರತ ಸ್ವಾತಂತ್ರ್ಯ ಕಾಯಿದೆಯನ್ವಯ ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿ ರಚಿತವಾದವು.

❖ ಜಮ್ಮು-ಕಾಶ್ಮೀರ, ಭಯೋತ್ಪಾದನೆ, ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.

❖ ಎರಡು ರಾಷ್ಟ್ರಗಳ ನಡುವೆ ಮೂರು ಬಾರಿ ಯುದ್ಧಗಳು ನಡೆದಿವೆ.

❖ ತಾಷ್ಕೆಂಟ್ ಒಪ್ಪಂದ, ಸಿಮ್ಲಾ ಒಪ್ಪಂದ, ಲಾಹೋರ್ ಬಸ್ ಯಾತ್ರೆ, ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಾಗಿದೆ.

❖ ಭಾರತ ಸಂಸತ್ತಿನ ಮೇಲಿನ ದಾಳಿ, ದಾಳಿ, ಪಠಾಣ್ ಕೋಟ್ ದಾಳಿಗಳು ಪರಸ್ಪರ ಸಂಬಂಧಗಳ ವೃದ್ಧಿಗೆ ಹಿನ್ನಡೆಯನ್ನು ಉಂಟುಮಾಡಿವೆ.

❖ ಎರಡು ರಾಷ್ಟ್ರಗಳ ನಡುವೆ ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ ಕಾರ್ಯಗಳನ್ನು ಮುಂದುವರೆಸಿವೆ.

**5. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**

❖ ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಸುಮಧುರವಾಗಿದೆ

❖ 1966ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.

❖ 1971ರಲ್ಲಿ 20ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.

❖ ಚೀನಾ ಆಕ್ರಮಣವನ್ನು ಖಂಡಿಸಿತು.

❖ ಗೋವಾ ವಿಮೋಚನೆಯ ವೇಳೆ ಭಾರತವನ್ನು ಬೆಂಬಲಿಸಿತು.

❖ ಭಿಲಾಯ್ & ಭೋಕಾರೋ ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ರಷ್ಯಾ ನೆರವು ನೀಡಿತು.

❖ ನಮ್ಮ ದೇಶದ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ರಷ್ಯಾ ಸಾಕಷ್ಟು ನೆರವು ನೀಡಿದೆ.

❖ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**6. ಭಾರತ ಮತ್ತು ಅಮೇರಿಕಾ ದೇಶಗಳು ಸಂಬಂಧ ವಿವರಿಸಿ.**

❖ ಅಮೇರಿಕಾ ಮತ್ತು ಭಾರತ ಪ್ರಪಂಚದ ಎರಡು ಬೃಹತ್ ಪ್ರಜಾತಂತ್ರ ರಾಷ್ಟ್ರಗಳಾಗಿವೆ.

❖ ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ಸಹಾಯ ಮಾಡಿದೆ

❖ ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಸಮಾನ ಹಿತಾಸಕ್ತಿ ಹೊಂದಿವೆ.

❖ ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನ ಕೇತ್ರದಲ್ಲಿ ಉತ್ತಮ ಬಾಂಧವ್ಯ ಹೊಂದಿವೆ.

❖ ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ ಹೊಂದಿವೆ.

❖ ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ.

# 4. ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

## ಬಹುಆಯ್ಕೆ ಪ್ರಶ್ನೆಗಳು:

**1. ಮಾನವ ಹಕ್ಕುಗಳ ದಿನವನ್ನು ------ ರಂದು ಆಚರಿಸುತ್ತೇವೆ.**

ಎ) ಡಿಸೆಂಬರ್ 8 ಬಿ) ಡಿಸೆಂಬರ್ 10 ಸಿ) ಜೂನ್ 5 ಡಿ) ನವಂಬರ್ 10

**2. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ'. ಎಂದವರು**

**ಎ) ಜಾನ್ ಎಫ್ ಕೆನಡಿ ಬಿ) ಅಬ್ರಹಾಂ ಲಿಂಕನ್ ಸಿ) ನೆಲ್ಸನ್ ಮಂಡೇಲಾ ಡಿ)** ಐಸನ್ ಹೋವರ್

**3. ಆಧುನಿಕ ಜಗತ್ತಿನಲ್ಲಿ "ಪರಸ್ಪರ ನಿಶ್ಚಿತ ನಾಶ" ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳೂ ಪ್ರಯತ್ನಿಸುವ ಅವಶ್ಯಕತೆಯಿದೆ. ಇಲ್ಲಿ "ಪರಸ್ಪರ ನಿಶ್ಚಿತ ನಾಶ" ಎಂದರೆ**

ಎ) ಆರ್ಥಿಕ ಅಸಮಾನತೆ ಬಿ) ಶಸ್ತ್ರಾಸ್ತ್ರಗಳ ಪೈಪೋಟಿ ಸಿ) **ವಸಾಹತುಶಾಹಿತ್ವ ಡಿ) ಭಯೋತ್ಪಾದಕತೆ**

**4. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ------ ಹಾಗೂ -----ಯನ್ನು ಪ್ರತಿಪಾದಿಸುತ್ತಿದೆ.**

ಎ) ಸಾಮಾಜಿಕ ನ್ಯಾಯ ಹಾಗೂ ಸ್ವಾವಲಂಬನೆಬಿ) ಧಾರ್ಮಿಕ ನ್ಯಾಯ ಹಾಗೂ ಜಾತ್ಯತೀತೆ

ಸಿ) ಆರ್ಥಿಕ ನ್ಯಾಯ ಹಾಗೂ ಸಮಾನತೆ ಡಿ) ಸಾಮಾಜಿಕ ನ್ಯಾಯ ಹಾಗೂ ಅವಲಂಬನೆ

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. 1948 ಡಿಸೆಂಬರ್ 10 ಮಾನವನ ಇತಿಹಾಸದಲ್ಲೇ ಅತ್ಯಂತ ಐತಿಹಾಸಿಕ ದಿನವಾಗಿದೆ. ಏಕೆ?**

❖ ಮಾನವ ಹಕ್ಕುಗಳ ಪರಿಕಲ್ಪನೆಯನ್ನು 1948ರ ಡಿಸೆಂಬರ್ 10ರಂದು ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಂಗೀಕರಿಸಿತು.

**2. ನಿಶ್ಶಸ್ತ್ರೀಕರಣ ಎಂದರೇನು?**

- ❖ ನಿರ್ದಿಷ್ಟ/ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆಯೇ ನಿಶ್ಯಸ್ತ್ರೀಕರಣ.

**3. ತೃತೀಯ ಜಗತ್ತನ್ನು ವ್ಯಾಖ್ಯಾನಿಸಿ.**

- ❖ ಶೀತಲ ಸಮರದ ವೇಳೆ ಅಮೇರಿಕಾ ಅಥವಾ ರಷ್ಯಾ ಬಣವನ್ನು ಸೇರದೇ ತಟಸ್ಥವಾಗಿದ್ದ ರಾಷ್ಟ್ರಗಳ ಗುಂಪಿಗೆ ತೃತೀಯ ಜಗತ್ತು ಎಂದು ಕರೆಯುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

**1. ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ನೀಡಿದ ಘಟನೆಗಳಾವುವು?**

- ❖ 1776ರ ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ
- ❖ 1789ರ ಫ್ರಾನ್ಸಿನ ಮಹಾಕ್ರಾಂತಿ
- ❖ 1971ರ ರಷ್ಯಾ ಕ್ರಾಂತಿ
- ❖ ಭಾರತ ಮತ್ತು ಇತರೆ ದೇಶಗಳ ಸ್ವಾತಂತ್ರ್ಯ ಹೋರಾಟ

**2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ.**

- ❖ ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ
- ❖ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅಂಗೀಕಾರ
- ❖ ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿಯೂ ಮಾನವ ಹಕ್ಕುಗಳು ಸಮರ್ಥನೆ
- ❖ ಮಾನವ ಹಕ್ಕುಗಳ ಆಯೋಗ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗ ಮೊದಲಾದವುಗಳ ರಚನೆ

**3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?**

- ❖ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ.
- ❖ ಶಸ್ತ್ರಾಸ್ತ್ರಗಳ & ಮದ್ದುಗುಂಡುಗಳು ಆರ್ಥಿಕವಾಗಿಯೂ ನಷ್ಟದಾಯಕವಾಗಿವೆ.

**4. 'ಪರಸ್ಪರ ನಿಶ್ಚಿತ ನಾಶ'ದ ವಿರುದ್ಧ ಭಾರತವು ಹೇಗೆ ಹೋರಾಡುತ್ತಿದೆ?**

- ❖ ಶಸ್ತ್ರಾಸ್ತ್ರ ಮತ್ತು ಅಣ್ವಸ್ತ್ರಗಳ ಪೈಪೋಟಿಯು ಮಾನವ ಸಮಾಜಕ್ಕೆ ಕಂಟಕವಾಗುತ್ತಿದೆ.
- ❖ ಭಾರತವು ಸೇರಿದಂತೆ ಪ್ರತಿಯೊಂದು ರಾಷ್ಟ್ರವೂ ಈ 'ಪರಸ್ಪರ ನಾಶ'ದ ವಿರುದ್ಧ ಹೋರಾಡಬೇಕಾಗಿದೆ.
- ❖ ಭಾರತವು ಗುಣಾತ್ಮಕ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ.
- ❖ ಭಾರತವು ಶಾಂತಿ ಉದ್ದೇಶಕ್ಕೆ ಮಾತ್ರವೇ ಅಣ್ವಸ್ತ್ರದ ಬಳಕೆಯನ್ನು ಪ್ರತಿಪಾಧಿಸುತ್ತದೆ.
- ❖ ಹೀಗೆ ಭಾರತವು 'ಪರಸ್ಪರ ನಿಶ್ಚಿತ ನಾಶದ' ವಿರುದ್ಧ ಹೋರಾಡುತ್ತಿದೆ.

**5. ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ವಿದೇಶಿ ಆರ್ಥಿಕ ಸಹಕಾರ ಅತ್ಯಗತ್ಯ. ಏಕೆ?**

- ❖ ಸ್ವಾತಂತ್ರ್ಯನಂತರ ಆಫ್ರಿಕಾ ಮತ್ತು ಏಷ್ಯಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು.
- ❖ ಆದರೆ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಸಮಸ್ಯೆ ತಲೆದೋರಿತ್ತು.
- ❖ ಹಾಗಾಗಿ ವಿದೇಶಿ ಆರ್ಥಿಕ ಸಹಕಾರ ಈ ರಾಷ್ಟ್ರಗಳಿಗೆ ತೀರಾ ಅವಶ್ಯಕವಾಗಿದೆ.

**6. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?**

- ❖ ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು.
- ❖ ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಎತ್ತಿ ಹಿಡಿಯಲು ಸಹಕರಿಸಿತು.
- ❖ ಅದರೊಂದಿಗೆ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಪ್ರಯತ್ನಿಸಿತು.
- ❖ ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತದೆ.

# 5. ಜಾಗತಿಕ ಸಂಸ್ಥೆಗಳು

**ಬಹುಆಯ್ಕೆ ಪ್ರಶ್ನೆಗಳು:**

**1. ವಿಶ್ವಸಂಸ್ಥೆ ಪದವನ್ನು ಚಾಲ್ತಿಗೆ ತಂದವರು**

ಎ) ಚರ್ಚಿಲ್ ಬಿ) ಸ್ಟಾಲಿನ್ ಸಿ) ರೂಸ್‌ವೆಲ್ಟ್ ಡಿ) ನೆಹರು

**2. ವಿಶ್ವಸಂಸ್ಥೆ ಸ್ಥಾಪನೆಯಾದ ವರ್ಷ**

ಎ) 1942 ಜನವರಿ 1 ಬಿ) 1945 ಜೂನ್ 26 ಸಿ) 1945 ಅಕ್ಟೋಬರ್ 24 ಡಿ) 1948 ಡಿಸೆಂಬರ್ 10

**3. ವಿಶ್ವಸಂಸ್ಥೆಯ ಸನ್ನದಿನ ಪ್ರಸ್ತಾವನೆಯು ಈ ಕೆಳಗಿನ ಯಾವ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ.**

ಎ) ವಿಶ್ವದ ಪ್ರಜೆಗಳಾದ ನಾವು ಬಿ) ವಿಶ್ವದ ಜನಸಂಖ್ಯೆಯೆನಿಸಿದ ನಾವು

ಸಿ) ವಿಶ್ವದ ಜನಸಮುದಾಯವೆನಿಸಿದ ನಾವು ಡಿ) ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಾದ ನಾವು

**4. ಜಾಗತಿಕ ಸಂಸತ್ತಿನ ರೀತಿಯಲ್ಲಿ ಕಾರ್ಯ ನಿರ್ವಹಿಸುವ ವಿಶ್ವಸಂಸ್ಥೆ ಅಂಗ ಸಂಸ್ಥೆ**

ಎ) ಸಾಮಾನ್ಯ ಸಭೆ ಬಿ) ಭದ್ರತಾ ಸಮಿತಿ ಸಿ) ದತ್ತಿ ಸಮಿತಿ ಡಿ) ಸಚಿವಾಲಯ

**5. ವಿಶ್ವಸಂಸ್ಥೆಯ ಸಚಿವ ಸಂಪುಟದ ಮಾದರಿಯಲ್ಲಿ ಕಾರ್ಯನಿರ್ವಹಿಸುವ ಅಂಗಸಂಸ್ಥೆ**

ಎ) ಸಾಮಾನ್ಯ ಸಭೆ ಬಿ) ಭದ್ರತಾ ಸಮಿತಿ ಸಿ) ದತ್ತಿ ಸಮಿತಿ ಡಿ) ಸಚಿವಾಲಯ

**6. ಅಂತರರಾಷ್ಟ್ರೀಯ ನ್ಯಾಯಾಲಯವು ಎಲ್ಲಿದೆ?**

ಎ) ಜಿನೇವಾ ಬಿ) ವಿಯೆನ್ನಾ ಸಿ) ಹೇಗ್ ಡಿ) ನ್ಯೂಯಾರ್ಕ್

**7. ವಿಶ್ವಸಂಸ್ಥೆಯ ಈಗಿನ ಮಹಾ ಕಾರ್ಯದರ್ಶಿ**

ಎ) ಆಂಟೋನಿಯಸ್ ಗುಟೆರಸ್ ಬಿ) ಕೋಫಿ ಅನ್ನಾನ್ ಸಿ) ಯು ಥಾಂಟ್ ಡಿ) ಟ್ರಿಗ್ವೆ ಲೀ

**8. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಇರುವುದು**

ಎ)ರೋಮ್ ಬಿ)ಜಿನೇವಾ ಸಿ)ಪ್ಯಾರಿಸ್ ಡಿ)ನ್ಯೂಯಾರ್ಕ್

**9. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ**

ಎ) 1945 ಬಿ) 1946 ಸಿ) 1947 ಡಿ) 1948

**10. ಯೂನಿಸೆಫ್ ಸಂಸ್ಥೆಯ ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದೆ.**

ಎ) ಮಕ್ಕಳ ಯೋಗಕ್ಷೇಮಕ್ಕಾಗಿ ಬಿ) ಮಹಿಳೆಯರ ಯೋಗಕ್ಷೇಮಕ್ಕಾಗಿ

ಸಿ) ಕಾರ್ಮಿಕರ ಕಲ್ಯಾಣಕ್ಕಾಗಿ ಡಿ) ಆರ್ಥಿಕವಾಗಿ ಹಿಂದುಳಿದ ಜನರ ಕಲ್ಯಾಣಕ್ಕಾಗಿ

**11. ಸಾರ್ಕ್‌ನ ಕೇಂದ್ರ ಕಛೇರಿ ------ನಲ್ಲಿದೆ**

ಎ) ದೆಹಲಿ ಬಿ) ಕಠ್ಮಂಡು ಸಿ) ಢಾಕಾ ಡಿ) ಬೆಂಗಳೂರು

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲ ಉತ್ತರಿಸಿರಿ:

**1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿರಿ.**

❖ ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೇರಿಕಾದ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್.

**2. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ?**

❖ ವಿಶ್ವಸಂಸ್ಥೆಯ ಪ್ರಧಾನ ಕಛೇರಿ ನ್ಯೂಯಾರ್ಕ್‌ನಲ್ಲಿದೆ.

**3. ಯುನಿಸೆಫ್‌ನ ಮೂಲ ಉದ್ದೇಶವೇನು?**

❖ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ.

**4. ನಾವು ಯುನಿಸೆಫ್ ಶುಭಾಷಯ ಪತ್ರಗಳನ್ನು ಏಕೆ ಕೊಳ್ಳಬೇಕು?**

❖ ಈ ಸಂಸ್ಥೆ ಶುಭಾಷಯ ಪತ್ರಗಳ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆ ಬಳಸುತ್ತದೆ.

**5. ಸಾರ್ಕ್‌ನ್ನು ವಿಸ್ತರಿಸಿ.**

❖ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ(South Asian Association of Regional Co-operation).

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿ ಮಾಡಿರಿ.**

❖ ವಿಶ್ವ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.

❖ ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.

❖ ಮಾನವ ಹಕ್ಕುಗಳ ಬಗ್ಗೆ ನಂಬಿಕೆಯನ್ನು ಹೆಚ್ಚಿಸುವುದು.

❖ ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಮತ್ತು ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು.

❖ ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ನಿರ್ವಹಿಸುವುದು.

**2. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?**

❖ ಸಾಮಾನ್ಯ ಸಭೆ

❖ ಭದ್ರತಾ ಮಂಡಳಿ

❖ ಆರ್ಥಿಕ ಮತ್ತು ಸಾಮಾಜಿಕ ಸಮಿತಿ

❖ ದತ್ತಿ ಸಮಿತಿ

❖ ಅಂತರರಾಷ್ಟ್ರೀಯ ನ್ಯಾಯಾಲಯ

❖ ಸಚಿವಾಲಯ

**3. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?**

❖ ಅಮೇರಿಕಾ

❖ ರಷ್ಯಾ

❖ ಬ್ರಿಟನ್

❖ ಫ್ರಾನ್ಸ್

❖ ಚೀನಾ

**4. ಭದ್ರತಾ ಸಮಿತಿಯ ಕಾರ್ಯಗಳನ್ನು ವಿವರಿಸಿ.**

❖ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಪ್ರಯತ್ನಿಸುತ್ತದೆ.

❖ ಶಾಂತಿಪಾಲನಾ ಪಡೆಯನ್ನು ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ.

❖ ಈ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುತ್ತದೆ.

❖ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

**5. ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳಾವುವು?**

❖ **ಕೃಷಿ ಕ್ಷೇತ್ರದ ಅಭಿವೃದ್ಧಿ**

❖ **ಪೌಷ್ಟಿಕ ಆಹಾರ ಒದಗಿಸುವಿಕೆ**

❖ **ಹಸಿವಿನಿಂದ ಜನರಿಗೆ ವಿಮುಕ್ತಿ**

❖ **ಗ್ರಾಮೀಣ ಜನಜೀವನ ಸುಧಾರಣೆ**

**6. ಯುನೆಸ್ಕೋದ ಕಾರ್ಯಗಳಾವುವು?**

❖ ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ ಹಾಗೂ ಸಂಸ್ಕೃತಿ ಮುಂತಾದವುಗಳನ್ನು ಪ್ರೋತ್ಸಾಹಿವುದು.

❖ ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಪರಿಸರ ವಿಜ್ಞಾನದ ಬಗೆಗೆ ವಿಶೇಷ ಕಾಳಜಿ.

❖ ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸಹಾಯ ನೀಡುತ್ತದೆ.

**7. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳೇನು?**

❖ ಪ್ರಜಾ ತಂತ್ರವನ್ನು ಎತ್ತಿ ಹಿಡಿಯುವುದು

❖ ಸ್ವಾತಂತ್ರ್ಯದ ರಕ್ಷಣೆ

❖ ಬಡತನ ನಿರ್ಮೂಲನೆ

❖ ವಿಶ್ವಶಾಂತಿ ನೆಲೆಗೊಳಿಸುವಿಕೆ

❖ ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆ

**8. ಯುರೋಪಿಯನ್ ಯೂನಿಯನ್‌ನ ಮುಖ್ಯ ಸಾಧನೆ ಏನು?**

❖ ಸದಸ್ಯ ರಾಷ್ಟ್ರಗಳ ಮಧ್ಯ ಸಮಾನ ಏಕ ಮಾರುಕಟ್ಟೆ

❖ ಒಂದೇ ಚಲಾವಣೆಯ ಕರೆನ್ಸಿ

❖ ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ

# ಸಮಾಜಶಾಸ್ತ್ರ

## 1.ಸಾಮಾಜಿಕ ಸ್ತರವಿನ್ಯಾಸ

### <u>ಬಹುಆಯ್ಕೆ ಪ್ರಶ್ನೆಗಳು:</u>

**1. ಈ ಕೆಳಗಿನ ಯಾವ ಅಂಶವು ಸಮಾನತೆ, ಸಮಾನ ಭಾಗವಹಿಸುವಿಕೆ, ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದಲ್ಲಿ ಮಹತ್ವದ ಬದಲಾವಣೆ ತರುವಲ್ಲಿ ಆಸರೆಯಾಗುವ ಶಕ್ತಿಯನ್ನು ಹೊಂದಿರುತ್ತದೆ.**

ಎ) ಜಾತಿ ಬಿ) ಧರ್ಮ ಸಿ) ಶಿಕ್ಷಣ ಡಿ) ಸ್ವಾತಂತ್ರ್ಯ

**2. ಸಂವಿಧಾನ ---- ತಿದ್ದುಪಡಿಯ ಮೂಲಕ ಶಿಕ್ಷಣ ಮೂಲಭೂತ ಹಕ್ಕೆಂಬ ಅಂಶವನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ.**

ಎ) 45ನೇ ಬಿ) 46ನೇ ಸಿ) 73ನೇ ಡಿ) 86ನೇ

**3. 1993ರಲ್ಲಿ ಸುಪ್ರೀಂ ಕೋರ್ಟ್ ಉನ್ನಿಕೃಷ್ಣನ್ V/S ಆಂಧ್ರಪ್ರದೇಶ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಈ ಕೆಳಗಿನ ಯಾವ ಅಂಶದ ಬಗ್ಗೆ ಒತ್ತೆ ಹೇಳುತ್ತದೆ.**

ಎ) ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ **ಬಿ) ಶಿಕ್ಷಣ ಮೂಲಭೂತ ಹಕ್ಕು**

**ಸಿ) ಲಿಂಗ ತಾರತಮ್ಯ ಶಿಕ್ಷಾರ್ಹ ಅಪರಾಧ ಡಿ)** ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ

**4. 'ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ'. ಈ ಹೇಳಿಕೆಯನ್ನು ನೀಡಿದವರು**

ಎ) ಅಂಬೇಡ್ಕರ್ ಬಿ) ವಿವೇಕಾನಂದರು ಸಿ) ಗಾಂಧೀಜಿ ಡಿ) ಬಿ. ಕುಪ್ಪುಸ್ವಾಮಿ

**5. ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ --ವಿಧಿಯು ನಿಷೇಧಿಸಿದೆ.**

ಎ) 14ನೇ ವಿಧಿ ಬಿ) 16ನೇ ವಿಧಿ ಸಿ) 17ನೇ ವಿಧಿ ಡಿ) 29ನೇ ವಿಧಿ

**6. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು --ರಲ್ಲಿ ಜಾರಿಗೆ ಬಂದಿತು.**

ಎ) 1955ರಲ್ಲಿ ಬಿ) 1976ರಲ್ಲಿ ಸಿ) 1989ರಲ್ಲಿ ಡಿ) 2001ರಲ್ಲಿ

**7. 1976ರಲ್ಲಿ ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ**

ಎ) ಪರಿಶಿಷ್ಟ ಪಂಗಡದ ಕಾಯ್ದೆ ಬಿ) ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

ಸಿ) ಅಸ್ಪೃಶ್ಯತಾ ನಿರ್ಮೂಲನಾ ಕಾಯ್ದೆ ಡಿ) ನಾಗರೀಕರ ಸಮಾನ ಹಕ್ಕು ಕಾಯ್ದೆ

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:**

**1. ಸಂವಿಧಾನದ ಯಾವ ವಿಧಿಯು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಸಾರಿದೆ?**

❖ ಸಂವಿಧಾನದ 21ಎ ವಿಧಿಯಲ್ಲಿ 6 ರಿಂದ 14 ವರ್ಷ ವಯೋಮಿತಿಯೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸಲಾಗಿದೆ.

**2. ಸ್ವಾತಂತ್ರ್ಯ ನಂತರ ಭಾರತವು ಶೈಕ್ಷಣಿಕ ಅಸಮಾನತೆಯನ್ನು ಹೋಗಲಾಡಿಸಲು ಹೇಗೆ ಪ್ರಯತ್ನಿಸುತ್ತಿದೆ?**

❖ ಸಂವಿಧಾನಾತ್ಮಕ ಹಕ್ಕು ಅವಕಾಶಗಳನ್ನು ಸೂಕ್ತವಾಗಿ ಬಳಸುವ ಮೂಲಕ ಶೈಕ್ಷಣಿಕ ಅಸಮಾನತೆಯನ್ನು ಹೋಗಲಾಡಿಸುವ ಕೆಲಸವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಿರಂತರವಾಗಿ ನಡೆಯುತ್ತಿದೆ.

**3. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?**

❖ ಸಮಾಜದಲ್ಲಿ ಇರುವ "ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ "ಸಾಮಾಜಿಕ ಸ್ತರವಿನ್ಯಾಸ".

**4. 'ಸಾಮಾಜಿಕ ಸ್ತರವಿನ್ಯಾಸ ಅತ್ಯಂತ ಪುರಾತನವಾದುದು' ಈ ಹೇಳಿಕೆಯನ್ನು ಸಮರ್ಥಿಸಿ.**

❖ ಮಾನವರು ಸಾಮೂದಾಯಿಕ ಜೀವನ ಕ್ರಮವನ್ನು ಆರಂಭಿಸಿದಾಗಿನಿಂದಲೂ ಸಾಮಾಜಿಕಸ್ತರವಿನ್ಯಾಸವಿದೆ.

**5. ಡಾ॥ ಬಿ. ಆರ್. ಅಂಬೇಡ್ಕರ್ ಅವರು `ಸಂವಿಧಾನ ಶಿಲ್ಪಿ' ಎಂದು ಖ್ಯಾತರಾಗಲು ಕಾರಣವೇನು?**

❖ ಡಾ॥ ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನೆಯಲ್ಲಿ ನಿರ್ಣಾಯಕವಾದ ಹಾಗೂ ಮಹತ್ವದ ಪಾತ್ರವನ್ನು ನಿರ್ವಹಿಸಿ `ಸಂವಿಧಾನ ಶಿಲ್ಪಿ' ಎಂಬ ಕೀರ್ತಿಗೆ ಬಾಜನರಾಗಿದ್ದರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

**1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?**

❖ ಆದಾಯದ ಮೂಲಗಳು

❖ ಶಿಕ್ಷಣ ಮತ್ತು ವೃತ್ತಿ ಅವಕಾಶಗಳು

❖ ಆರೋಗ್ಯ ಸೌಲಭ್ಯಗಳು

❖ ರಾಜಕೀಯ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ

**2. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?**

❖ ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು

❖ ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು

❖ ಸ್ತರವ್ಯವಸ್ಥೆ ಪುರಾತನವಾದದ್ದು

❖ ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ

**3. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ? / ಅಸ್ಪೃಶ್ಯತೆಯು ಸೃಷ್ಟಿಸಿದ್ದ ಸಮಸ್ಯೆಗಳಾವುವು? / 'ಅಸ್ಪೃಶ್ಯತೆಯು ಅತ್ಯಂತ ಅಮಾನವೀಯ ವ್ಯವಸ್ಥೆಯಾಗಿದೆ' ಈ ಹೇಳಿಕೆಯನ್ನು ವಿಮರ್ಶಿಸಿ.**

❖ **ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ**

❖ **ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು**

❖ **ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ**

❖ **ರಾಜಕೀಯ ಭಾಗವಹಿಸುವಿಕೆ ನಿರಾಕರಣೆ**

**4. ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ &ಶಾಸನಾತ್ಮಕ ಕ್ರಮಗಳಾವುವು?**

❖ ಸಂವಿಧಾನದ **17**ನೇವಿಧಿಯು **ಅಸ್ಪೃಶ್ಯತೆ**ಯನ್ನು ತೊಡೆದು ಹಾಕಿದೆ.

❖ **1955**ರಲ್ಲಿ **ಅಸ್ಪೃಶ್ಯತಾ** ಅಪರಾಧಗಳ ಕಾಯ್ದೆಯನ್ನು ಜಾರಿಗೆ ತರಲಾಗಿದೆ.

❖ **ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.**

❖ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಿದೆ.

❖ **ವಿಶೇಷ ಜವಾಬ್ದಾರಿಯನ್ನು ರಾಜ್ಯಗಳಿಗೆ ವಹಿಸಲಾಗಿದೆ.**

# 2. ದುಡಿಮೆ

**ಬಹುಆಯ್ಕೆ ಪ್ರಶ್ನೆಗಳು:**

1. **"ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪಗೊಳ್ಳುತ್ತದೆ, ಈ ಸ್ವಾಭಾವಿಕ ಅಸಮಾನತೆಯು ಶ್ರಮ ವಿಭಜನೆಯಿಂದ ಕೂಡಿರುತ್ತದೆ"** ಎಂದವರು

ಎ) ಪ್ಲೇಟೋ ಬಿ) ಕಾರ್ಲ್‌ಮಾರ್ಕ್ಸ್ ಸಿ) ಅಂಬೇಡ್ಕರ್ ಡಿ) ಗಾಂಧೀಜಿ

**2. ಭಾರತದ ಸಾಮಾಜಿಕ ವ್ಯವಸ್ಥೆಯೊಳಗೆ ಒಬ್ಬ ವ್ಯಕ್ತಿ ಕೆಳಗಿನಿಂದ ಮೇಲ್ಮುಖವಾಗಿ ಅಧಿಕಾರ ಅಂತಸ್ತು ಪಡೆಯುವತ್ತ ಚಲಿಸಿದರೆ, ಅವರ**

ಎ) ಆದಾಯ & ಅಧಿಕಾರ ಎರಡೂ ಕಡಿಮೆಯಾಗುತ್ತವೆ ಬಿ) ಆದಾಯ ಹೆಚ್ಚುತ್ತದೆ & ಅಧಿಕಾರ ಕಡಿಮೆಯಾಗುತ್ತದೆ

ಸಿ) ಆದಾಯ & ಅಧಿಕಾರ ಎರಡೂ ಹೆಚ್ಚುತ್ತವೆ ಡಿ) ಆದಾಯ ಕಡಿಮೆಯಾಗುತ್ತದೆ & ಅಧಿಕಾರ ಹೆಚ್ಚುತ್ತದೆ

**3. ಚಿತ್ರ ಕಲಾಕಾರನೊಬ್ಬನು ತನ್ನ ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು**

ಎ) ಸಂಭಾವನೆ ಸಹಿತ ದುಡಿಮೆ ಬಿ) ಶ್ರಮ ವಿಭಜನೆ ಸಿ) ಸಂಭಾವನೆ ರಹಿತ ದುಡಿಮೆ ಡಿ) ವಿಶೇಷ ಪರಿಣಿತಿ

**4. ಈ ಕೆಳಗಿನವುಗಳಲ್ಲಿ ಯಾವುದು ಸಂಭಾವನೆ ರಹಿತ ದುಡಿಮೆಯಾಗಿದೆ.**

ಎ) ದಾದಿಯರ ಕೋರ್ಸ್ ಬಿ) ಕೈಗಾರಿಕೆಗಳ ದುಡಿಮೆ ಸಿ) ಬೀದಿ ಬದಿಯ ವ್ಯಾಪಾರ ಡಿ) ವಾಹನಗಳ ರಿಪೇರಿ

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ಶ್ರಮ ವಿಭಜನೆ ಎಂದರೇನು?**

❖ ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣಿತಿ, ಕೌಶಲ್ಯ ಹಾಗೂ ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನುತ್ತಾರೆ.

**2. ದುಡಿಮೆ ಎಂದರೇನು?**

❖ ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು 'ದುಡಿಮೆ' ಎನ್ನಬಹುದು.

**3. ಸಂಭಾವನೆ ರಹಿತ ದುಡಿಮೆ ಎಂದರೇನು?**

❖ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದ ಪ್ರತಿಫಲ ಇಲ್ಲದ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

**4. ಸಂಭಾವನೆ ಸಹಿತ ದುಡಿಮೆ ಎಂದರೇನು?**

ನಿಗಧಿತ ವೇತನಕ್ಕಾಗಿ ಮಾಡುವ ದುಡಿಮೆಯ ಚಟುವಟಿಕೆಗೆ ಸಂಭಾವನೆ ಸಹಿತ ದುಡಿಮೆ ಎಂದು ಕರೆಯಲಾಗುತ್ತದೆ.

**5. ಕೂಲಿ ಎಂದರೇನು?**

❖ ದುಡಿಮೆಯ ಅವಧಿ ಆಧಾರದಲ್ಲಿ ಒಟ್ಟುಗೂಡಿಸಿ, ನೀಡುವ ಸಂಭಾವನೆಯನ್ನು ಕೂಲಿ ಎಂದು ಕರೆಯಬಹುದು.

**6. ದುಡಿಮೆಯ ವಲಯಗಳನ್ನು ಸಂಘಟಿತ ಮತ್ತು ಅಸಂಘಟಿತ ವಲಯವೆಂದು ಹೇಗೆ ವರ್ಗೀಕರಿಸುತ್ತಾರೆ?**

❖ ದುಡಿಮೆಯ ಪರಿಸ್ಥಿತಿಗಳು ಹಾಗೂ ದೊರೆಯುವ ಸೌಲಭ್ಯಗಳ ಆಧಾರದಲ್ಲಿ ಸಂಘಟಿತ ಮತ್ತು ಅಸಂಘಟಿತ ದುಡಿಮೆಯ ವಲಯವೆಂದು ವರ್ಗೀಕರಿಸಲಾಗಿದೆ.

**7. ಸಂಘಟಿತ ದುಡಿಮೆಯ ವಲಯ ಎಂದರೇನು?**

❖ ದುಡಿಮೆಗೆ ಸಂಬಂಧಿಸಿದಂತೆ ಕಾನೂನಿನ ಚೌಕಟ್ಟು ಹೊಂದಿರುವುದೇ ಸಂಘಟಿತ ದುಡಿಮೆಯ ವಲಯ.

**8. ಅಸಂಘಟಿತ ದುಡಿಮೆಯ ವಲಯ ಎಂದರೇನು?**

❖ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದೇ ಅಸಂಘಟಿತ ದುಡಿಮೆಯ ವಲಯ.

**9. ಸಾಮಾಜಿಕ ಭದ್ರತೆ ಎಂದರೇನು?**

❖ ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳನ್ನು ಸಾರ್ವಜನಿಕ(ಸಾಮುದಾಯಿಕ)ವಾಗಿ ಒದಗಿಸಿಕೊಡುವುದೇ ಸಾಮಾಜಿಕ ಭದ್ರತೆ.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

❖ ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.

❖ ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ.

❖ ಪುರುಷರಿಗೆ ಹೆಚ್ಚಿನ ಸಂಬಳವನ್ನೂ, ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ.

❖ ಸರ್ಕಾರಿ ವಲಯದ ಶ್ರೇಣೀಕೃತ ದುಡಿಮೆಯಲ್ಲಿ ಅಸಮಾನತೆ ಕಾಣಬಹುದು.

❖ ಖಾಸಗಿ ವಲಯದಲ್ಲಿ ದುಡಿಮೆಯ ಅಸಮಾನತೆಯನ್ನು ಹೆಚ್ಚಾಗಿ ಕಾಣಬಹುದು.

❖ ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ.

❖ ದುಡಿಮೆಯಲ್ಲಿನ ಅಸಮಾನತೆಯು ವರ್ಗ, ಆದಾಯ, ಸಂಭಾವನೆ, ಲಿಂಗ, ಪ್ರದೇಶ, ಜಾತಿ ಮತ್ತು ಧರ್ಮ ಮೊದಲಾದವುಗಳಿಂದ ಪ್ರಭಾವಿತಗೊಂಡಿರುತ್ತದೆ.

**2. ಸಂಭಾವನೆ ರಹಿತ ದುಡಿಮೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.**

❖ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದ ಪ್ರತಿಫಲ ಇಲ್ಲದ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

❖ ಸಂಭಾವನೆ ರಹಿತ ದುಡಿಮೆಯಲ್ಲಿ ದುಡಿಮೆಗಾರರು ಯಾವುದೇ ಸಂಭಾವನೆಯನ್ನು ಪಡೆಯುವುದಿಲ್ಲ ಅಥವಾ ನೀಡಲಾಗುವುದಿಲ್ಲ.

❖ ಈ ರೀತಿಯ ದುಡಿಮೆಯು ಕುಟುಂಬದ ಸದಸ್ಯರ ಒಳಗೆ, ಸಹಕಾರದ ಮೂಲಕ, ಕೆಲವು ಸಮಯದಲ್ಲಿ ಒತ್ತಾಯದ ಮೂಲಕ, ಕೆಲವೊಮ್ಮೆ ಸ್ವಯಂ ಪ್ರೇರಣೆಯಿಂದ, ಪ್ರೀತಿಯಿಂದ ಮಾಡುವ ದುಡಿಮೆಯಾಗಿದೆ.

❖ ಉದಾಹರಣೆಗೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್ ಆಂಡ್ ಗೈಡ್ಸ್‌ನಲ್ಲಿ, ರಾಷ್ಟ್ರೀಯ ಸೇವಾ ಯೋಜನೆ ಇನ್ನೂ ಮುಂತಾದ ಶ್ರಮ ಆಧಾರಿತ ಚಟುವಟಿಕೆಗಳಲ್ಲಿ ತೊಡಗುವುದು.

❖ ಅದೇ ರೀತಿ ಮಹಿಳೆಯರ ಕೌಟುಂಬಿಕ ದುಡಿಮೆಯು ಸಂಭಾವನೆ ರಹಿತ ದುಡಿಮೆಗೆ ಉದಾಹರಣೆಯಾಗಿದೆ.

**3. ಸಂಭಾವನೆ ಸಹಿತ ದುಡಿಮೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.**

❖ ನಿಗದಿತ ಸಂಭಾವನೆಗಾಗಿ ಮಾಡುವ ದುಡಿಮೆಯ ಚಟುವಟಿಕೆಗೆ ಸಂಭಾವನೆ ಸಹಿತ ದುಡಿಮೆ ಎಂದು ಕರೆಯಲಾಗುತ್ತದೆ.

❖ ವ್ಯಕ್ತಿ ತನ್ನ ಶ್ರಮಕ್ಕೆ ಪ್ರತಿಫಲವಾಗಿ ಸಂಭಾವನೆವನ್ನು ಪಡೆಯುತ್ತಾನೆ.

❖ ಸಂಭಾವನೆಯನ್ನು ಘಂಟೆ, ದಿನ, ವಾರ, ತಿಂಗಳ ಆಧಾರದಲ್ಲಿ ನೀಡಲಾಗುತ್ತದೆ.

❖ ಉದಾಹರಣೆಗೆ ಹೊಲ ಗದ್ದೆಗಳಲ್ಲಿನ ದುಡಿಮೆ, ಕೈಗಾರಿಕೆಗಳ ದುಡಿಮೆ, ಶಾಲೆಯಲ್ಲಿ ಶಿಕ್ಷಕರಾಗಿ ದುಡಿಮೆ, ಕಟ್ಟಡ ಕಟ್ಟುವುದು ಇತ್ಯಾದಿ.

❖ ಸಂಭಾವನೆ ನೀಡಿಕೆಯು ಕೆಲಸ ನೀಡುವವರು ಮತ್ತು ದುಡಿಮೆದಾರರ ನಡುವಿನ ಒಪ್ಪಂದದಂತೆ ನಡೆಯುತ್ತದೆ.

**4. ಸಂಘಟಿತ ವಲಯ ದುಡಿಮೆಗಾರರ ಲಕ್ಷಣಗಳೇನು?**

❖ ಕಾನೂನಿನ ಚೌಕಟ್ಟು

❖ ನಿಗದಿತ ಕೆಲಸ

❖ ಉದ್ಯೋಗ ಭರವಸೆ

❖ ನಿಗದಿತ ವೇತನ

❖ ಉದ್ಯೋಗ ಭದ್ರತೆ

❖ ಸಾಮಾಜಿಕ ಭದ್ರತೆ

**5. ಅಸಂಘಟಿತ ದುಡಿಮೆಗಾರ ಲಕ್ಷಣ(ಸಮಸ್ಯೆ)ಗಳನ್ನು ಪಟ್ಟಿ ಮಾಡಿರಿ.**

❖ ಕಾನೂನಿನ ನಿಯಂತ್ರಣವಿಲ್ಲ.

❖ ಉದ್ಯೋಗದ ಭದ್ರತೆ ಇರುವುದಿಲ್ಲ.

❖ ನಿಗದಿತ ವೇತನ ಮತ್ತು ವಿಶೇಷ ಭತ್ಯೆಗಳಿರುವುದಿಲ್ಲ.

❖ ಸಾಮಾಜಿಕ ಭದ್ರತೆ ಇರುವುದಿಲ್ಲ.

❖ ವಿಶ್ರಾಂತಿ ಮತ್ತು ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.

❖ ಮಾಲೀಕರು ನಿರಂತರ ದೌರ್ಜನ್ಯ.

**6. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?**

<u>ಸಂಘಟಿತ ಕೆಲಸಗಾರರು</u>

❖ ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ.

❖ ನಿಗದಿತ ಕೆಲಸದಲ್ಲಿ ತೊಡಗಿರುತ್ತಾರೆ.

❖ ಉದ್ಯೋಗದ ಭದ್ರತೆ ಇರುತ್ತದೆ.

❖ ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ.

<u>ಅಸಂಘಟಿತ ಕೆಲಸಗಾರರು</u>

❖ ಕಾನೂನಿನ ನಿಯಂತ್ರಣಕ್ಕೆ ಒಳಪಡುವುದಿಲ್ಲ.

❖ ವಿವಿಧ ಕೆಲಸಗಳಲ್ಲಿ ತೊಡಗಿರುತ್ತಾರೆ.

❖ ಯಾವುದೇ ಉದ್ಯೋಗದ ಭದ್ರತೆ ಇರುವುದಿಲ್ಲ.

❖ ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ.

# 3. ಸಾಮಾಜಿಕ ಚಳುವಳಿಗಳು

## <u>ಬಹುಆಯ್ಕೆ ಪ್ರಶ್ನೆಗಳು:</u>

**1. ಕರ್ನಾಟಕದ ---- ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳವಳಿಯನ್ನು ನಡೆಸಿದರು.**

ಎ) ದಕ್ಷಿಣ ಕನ್ನಡ ಬಿ) ಉಡುಪಿ ಸಿ) ಉತ್ತರ ಕನ್ನಡ ಡಿ) ಶಿವಮೊಗ್ಗ

**2. ಮೇಧಾ ಪಾಟ್ಕರ್ ಅವರ ನೇತೃತ್ವದಲ್ಲಿ ಈ ಕೆಳಗಿನ ಯಾವ ಪರಿಸರ ಸಂರಕ್ಷಣಾ ಚಳುವಳಿ ನಡೆಯಿತು.**

ಎ) ನರ್ಮದಾ ಬಚಾವೋ ಆಂದೋಲನ ಬಿ) ಮೌನ ಕಣಿವೆ ಆಂದೋಲನ

ಸಿ) ಚಿಪ್ಕೋ ಚಳವಳಿ ಡಿ) ಕೈಗಾ ಅಣು ಸ್ಥಾವರ ವಿರೋಧಿ ಚಳವಳಿ

**3. ಶಿವರಾಮ ಕಾರಂತರ ನಾಯಕತ್ವದಲ್ಲಿ ಈ ಕೆಳಗಿನ ಯಾವ ಪರಿಸರ ಸಂರಕ್ಷಣಾ ಚಳುವಳಿ ನಡೆಯಿತು.**

ಎ) ನರ್ಮದಾ ಬಚಾವೋ ಆಂದೋಲನ ಬಿ) ಮೌನ ಕಣಿವೆ ಆಂದೋಲನ

ಸಿ) ಚಿಪ್ಕೋ ಚಳವಳಿ ಡಿ) ಕೈಗಾ ಅಣು ಸ್ಥಾವರ ವಿರೋಧಿ ಚಳವಳಿ

**4. ಕುಸುಮಾ ಸೊರಬರವರು ಈ ಕೆಳಗಿನ ಯಾವ ಚಳುವಳಿಯೊಂದಿಗೆ ಗುರುತಿಸಿಕೊಂಡಿದ್ದಾರೆ.**

ಎ) ಪರಿಸರ ಚಳವಳಿ ಬಿ) ಮಹಿಳಾ ಚಳವಳಿ ಸಿ) ಮದ್ಯಪಾನ ನಿಷೇಧ ಚಳವಳಿ ಡಿ) ಕಾರ್ಮಿಕ ಚಳವಳಿ

**5. ಈ ಕೆಳಗಿನ ಯಾರ ನಾಯಕತ್ವದಲ್ಲಿ ಕರ್ನಾಟಕದಲ್ಲಿ ರೈತ ಸಂಘವನ್ನು ಸ್ಥಾಪಿಸಲಾಯಿತು.**

ಎ) ಕುಸುಮಾ ಸೊರಬ ಬಿ) ಎಂ.ಡಿ. ನಂಜುಂಡಸ್ವಾಮಿ ಸಿ) ಎನ್.ಡಿ. ಸುಂದರೇಶ್ ಡಿ) ಎಚ್.ಎಸ್. ರುದ್ರಪ್ಪ

**6. ಕಾರ್ಮಿಕ ಸಂಘ ಎನ್ನುವುದು ಸಾಮಾನ್ಯವಾಗಿ ----- ವರ್ಗವನ್ನು ಪ್ರತಿನಿಧಿಸುವ ಸಂಘಟನೆ.**

ಎ) ಜನಸಾಮಾನ್ಯ ಬಿ) ಮಾಲೀಕ ಸಿ) ದುಡಿಯುವ ಡಿ) ರೈತಾಪಿ

**7. 1925ರಲ್ಲಿ -----ರವರು ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದರು**

ಎ) ಅಂಬೇಡ್ಕರ್ ಬಿ) ಜ್ಯೋತಿರಾವ್ ಫುಲೆ ಸಿ) ಗಾಂಧೀಜಿ ಡಿ) ಪೆರಿಯಾರ್ ರಾಮಸ್ವಾಮಿ

**8. ದಲಿತರ ಹಿತಾಸಕ್ತಿಗಳ ಪ್ರತಿಪಾದನೆಗಾಗಿ `ಮೂಕ ನಾಯಕ' ಎಂಬ ಪತ್ರಿಕೆಯನ್ನು ಆರಂಭಿಸಿದವರು.**

ಎ) ಅಂಬೇಡ್ಕರ್ ಬಿ) ಜ್ಯೋತಿರಾವ್ ಫುಲೆ ಸಿ) ಗಾಂಧೀಜಿ ಡಿ) ಪೆರಿಯಾರ್ ರಾಮಸ್ವಾಮಿ

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

**1. ಸಾಮಾಜಿಕ ಚಳವಳಿ ಎಂದರೇನು?**

❖ ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿದಂತೆ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆಯೇ ಸಾಮಾಜಿಕ ಚಳುವಳಿ.

**2. ಸಮೂಹ ವರ್ತನೆ ಎಂದರೇನು?**

❖ ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ಆಲೋಚನೆ, ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನಬಹುದು.

**3. ಸಮೂಹ ವರ್ತನೆಯ ಮಾದರಿಗಳಾವುವು?**

❖ ಜನಮಂದೆ, ದೊಂಬಿ(ಗಲಭೆ), ಚಳುವಳಿ ಇತ್ಯಾದಿ

**4. ದೊಂಬಿ(ಗಲಭೆ) ಎಂದರೇನು?**

❖ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ(ಗಲಭೆ) ಎನ್ನುತ್ತಾರೆ.

**5. ದೊಂಬಿ/ಗಲಭೆಯನ್ನು ಹೇಗೆ ನಿಯಂತ್ರಿಸಬಹುದು?**

❖ ಅಧಿಕಾರಿಗಳ ಸಮಯಪ್ರಜ್ಞೆ, ಪೋಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿ/ಗಲಭೆಗಳನ್ನು ನಿಯಂತ್ರಿಸಬಹುದು.

**6. ಪರಿಸರ ಚಳುವಳಿ ಎಂದರೇನು?**

❖ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿಯೇ ಪರಿಸರ ಚಳುವಳಿ.

**7. ಚಿಪ್ಕೋ ಚಳುವಳಿಯ ಪ್ರಮುಖ ಉದ್ದೇಶವೇನು?**

❖ ಅರಣ್ಯ ಮತ್ತು ಪರಿಸರ ನಾಶವನ್ನು ತಡೆಗಟ್ಟುವುದು.

**8. ಕೈಗಾರಿಕಾ ಕ್ರಾಂತಿಯು ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ವಲಯದ ಕಡೆಗೆ ಕಾರ್ಮಿಕ ಚಲನೆಯನ್ನು ಹೆಚ್ಚಿಸಿತು. ಹೇಗೆ?**

❖ ಐರೋಪ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕಾಂತ್ರಿಯಿಂದ ಕೃಷಿ ವಲಯದಲ್ಲಿ ಉದ್ಯೋಗದ ಅವಕಾಶಗಳು ಕುಸಿತ ಕಂಡು, ಕೈಗಾರಿಕ ವಲಯಗಳ ಕಡೆಗೆ ಕಾರ್ಮಿಕರ ಚಲನೆ ಹೆಚ್ಚಾಯಿತು.

**9. ಲಂಡನ್‌ನಲ್ಲಿ 1864ರಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ ಸಂಘಟನೆ ಯಾವುದು?**

❖ ದಿ ಇಂಟರ್ ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಶನ್.

**10. 1923ರ ಭಾರತೀಯ ಕಾರ್ಮಿಕ ಕಾಯ್ದೆಯು ಭಾರತೀಯ ಕಾರ್ಮಿಕರ ಹಿತಾಸಕ್ತಿ ಕಾಪಾಡುವಲ್ಲಿ ಅತ್ಯಂತ ಪ್ರಮುಖವಾದುದು. ಹೇಗೆ?**

❖ 1923ರ ಭಾರತೀಯ ಕಾರ್ಮಿಕ ಕಾಯ್ದೆಯು ಕಾರ್ಮಿಕ ಸಂಘಟನೆಗಳಿಗೆ ಶಾಸನಾತ್ಮಕ ಮನ್ನಣೆ ನೀಡಿತು.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಜನಮಂದೆ ಎಂದರೇನು? ಉದಾಹರಣೆ ಕೊಡಿ.**

❖ ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

❖ ಉದಾ:- ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ.

**2. ಜನಮಂದೆಯ ಪರಿಣಾಮ(ಪ್ರಭಾವ)ವನ್ನು ವಿವರಿಸಿ.**

❖ ಸಮಾಜದ ಲೋಪದೋಷಗಳನ್ನು ಸೂಚಿಸುತ್ತವೆ.

❖ ಸಾಮಾಜಿಕ ಸಂಸ್ಥೆಗಳ ಕಾರ್ಯ ವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುತ್ತದೆ.

❖ ಸರ್ಕಾರದ ಯೋಜನೆ, ಧೋರಣೆಗಳ ಬಗೆಗಿನ ಜನರ ಅಸಮಾಧಾನವನ್ನು ಪ್ರಕಟಿಸುತ್ತದೆ.

**3. ದೊಂಬಿಯ ಸ್ವರೂಪ(ಲಕ್ಷಣ)ವನ್ನು ತಿಳಿಸಿ.**

❖ ಉದ್ದೇಶ ಅಥವಾ ಏಕತೆ ಇರುವುದಿಲ್ಲ.

❖ ಗೊಂದಲವನ್ನು ಸೃಷ್ಟಿ ಮಾಡುತ್ತವೆ.

❖ ಅಪಪ್ರಚಾರಗಳನ್ನು ನಡೆಸಿ ಗಲಭೆಗಳನ್ನು ಸೃಷ್ಟಿಸುತ್ತವೆ.

❖ ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಹಾಳು ಮಾಡುತ್ತವೆ.

❖ ಕೆಲವೊಮ್ಮೆ ಜೀವ ಹಾನಿಯನ್ನುಂಟು ಮಾಡುತ್ತವೆ.

**4. ಚಿಪ್ಕೋ ಚಳುವಳಿಯ ಬಗ್ಗೆ ಟಿಪ್ಪಣಿ ಬರೆಯಿರಿ.**

❖ ಉತ್ತರ ಪ್ರದೇಶದ ತೆಹ್ರಿ-ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ 2500 ಮರಗಳನ್ನು ಸರ್ಕಾರವು ಕಡಿಯಲು ಅನುಮತಿ ನೀಡಿತ್ತು.

❖ ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಅಲ್ಲಿನ ಮಹಿಳೆಯರು ಮರಗಳನ್ನು ತಬ್ಬಿಕೊಂಡು 'ಅಪ್ಪಿಕೋ'(ಚಿಪ್ಕೊ) ಚಳವಳಿಯನ್ನು ಪ್ರಾರಂಭಿಸಿದರು.

❖ ಈ ಚಳವಳಿಯ ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

**5. ಅಪ್ಪಿಕೋ ಚಳುವಳಿಯ ಉದ್ದೇಶವೇನು?**

❖ ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು

❖ ಗಿಡಮರಗಳನ್ನು ಬೆಳೆಸುವುದು

❖ ಪರಿಸರದ ಬಗ್ಗೆ ಜನರಿಗೆ ಅರಿವು ಮೂಡಿಸುವುದು

**6. ನರ್ಮದಾ ಆಂದೋಲನದ ಬಗ್ಗೆ ಟಿಪ್ಪಣಿ ಬರೆಯಿರಿ.**

❖ ಗುಜರಾತ್ ರಾಜ್ಯದ ನರ್ಮದಾ ನದಿಗೆ ಆಣೆಕಟ್ಟು ನಿರ್ಮಾಣ ಮಾಡಲು ಮುಂದಾಯಿತು.

❖ ಇದು ಅಲ್ಲಿನ ಸ್ಥಳೀಯ ಜನರನ್ನು ಮತ್ತು ಬುಡಕಟ್ಟು ಜನರನ್ನು ನಿರ್ಗತೀಕರಣಕ್ಕೆ ಒಳಪಡಿಸಿತ್ತು.

❖ ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆಂದು ಮೇಧಾ ಪಾಟ್ಕರ್ ಅವರ ನೇತೃತ್ವದಲ್ಲಿ ಹೋರಾಟ ಪ್ರಾರಂಭವಾಯಿತು.

❖ ಇದನ್ನೇ 'ನರ್ಮದಾ ಬಚಾವೋ ಆಂದೋಲನ' ಎಂದು ಕರೆಯಲಾಗಿದೆ.

**7. ಕರ್ನಾಟಕ ಮಾಜಿ ಮುಖ್ಯಮಂತ್ರಿ ದೇವರಾಜ ಅರಸರು ಜಾರಿಗೆ ತಂದ ಕ್ರಾಂತಿಕಾರಿ ಸುಧಾರಣೆ (ಕಾರ್ಯಕ್ರಮ) ಗಳನ್ನು ತಿಳಿಸಿ.**

❖ ಸಾಮಾಜಿಕ ದುರ್ಬಲರ ವಿಮೋಚನೆಗೆ ಪೂರಕವಾದ ಶಾಸನಗಳನ್ನು ಜಾರಿಗೆ ತಂದರು.

❖ ಗೇಣಿದಾರರನ್ನು ಭೂಮಾಲಿಕರ ಹಿಡಿತದಿಂದ ರಕ್ಷಿಸಿದರು

❖ ಜೀತಪದ್ಧತಿಯನ್ನು ರದ್ದುಗೊಳಿಸಿದರು.

❖ ಬಡವರ ಋಣಪರಿಹಾರ ಮಾಡಿದರು.

❖ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದರು.

**8. ಕರ್ನಾಟಕದಲ್ಲಿ ರೈತ ಸಂಘ(ರೈತ ಚಳುವಳಿಯ)ದ ಪ್ರಮುಖ ಬೇಡಿಕೆಗಳಾವುವು?**

❖ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸುವುದು.

❖ ಗ್ರಾಮಗಳ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

❖ ರೈತರ ಸ್ವಾಭಿಮಾನಕ್ಕೆ, ಸ್ವಾತಂತ್ರಕ್ಕೆ ಧಕ್ಕೆ ತರುವ ಜಪ್ತಿ ಕಾರ್ಯಕ್ರಮಗಳು ನಿಲ್ಲಬೇಕು.

❖ ಸ್ಥಳೀಯ ನೈಸರ್ಗಿಕ ಸಂಪತ್ತಿನಲ್ಲಿ ಸ್ಥಳೀಯ ಗ್ರಾಮಗಳಿಗೆ ಪಾಲು ದೊರೆಯಬೇಕು.

❖ ಲೆವಿ ಪದ್ಧತಿ ನಿಲ್ಲಬೇಕು.

# 4. ಸಾಮಾಜಿಕ ಸಮಸ್ಯೆಗಳು

**ಬಹುಆಯ್ಕೆ ಪ್ರಶ್ನೆಗಳು:**

**1. ಸಂವಿಧಾನದ ------ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.**

ಎ) 14ನೇ ಬಿ) 17ನೇ ಸಿ) 24ನೇ ಡಿ) 42ನೇ

**2. ಸಹಾಯ ವಾಣಿ ಸಂಖ್ಯೆ 1098ಕ್ಕೆ ಕರೆ ಮಾಡಿ ಈ ಕೆಳಗಿನ ಪ್ರಕರಣದ ಕುರಿತು ದೂರು ನೀಡಬಹುದಾಗಿದೆ.**

ಎ) ಅಗ್ನಿ ಅವಘಡ ಬಿ) ಕೊಲೆ, ದರೋಡೆ ಸಿ) ಭ್ರಷ್ಟಾಚಾರ ಡಿ) ಮಕ್ಕಳ ಮೇಲಿನ ದೌರ್ಜನ್ಯ

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:**

**1. ಬಾಲಕಾರ್ಮಿಕತನ ಎಂದರೇನು?**

❖ ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆಯನ್ನು ಬಾಲ ಕಾರ್ಮಿಕತನ ಎಂದು ಕರೆಯಲಾಗುತ್ತಿದೆ.

**2. ಬಾಲಕಾರ್ಮಿಕರು ಎಂದರೆ ಯಾರು?**

❖ ಶಾಲೆಯಿಂದ ಹೊರಗಿರುವ 14 ವರ್ಷದೊಳಗಿನ ಮಕ್ಕಳನ್ನು ಬಾಲಕಾರ್ಮಿಕರು ಎಂದು ಕರೆಯಲಾಗಿದೆ.

**3. ಪೋಕ್ಸೋ ಕಾಯ್ದೆ-2012ನ್ನು ಜಾರಿಗೆ ತಂದಿರುವ ಉದ್ದೇಶವೇನು?**

❖ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯುವ ಉದ್ದೇಶದಿಂದ ಪೋಕ್ಸೋ ಕಾಯ್ದೆ-2012ನ್ನು ಜಾರಿಗೆ ತರಲಾಗಿದೆ.

**4. ಹೆಣ್ಣುಭ್ರೂಣ ಹತ್ಯೆ ಎಂದರೇನು?**

❖ ತಾಯಿಯ ಗರ್ಭದಲ್ಲಿ ಬೆಳೆದ ಹೆಣ್ಣು ಭ್ರೂಣವನ್ನು ಬೆಳೆಯದಂತೆ ತಡೆಯುವುದು ಅಥವಾ ಕಾನೂನನ್ನು ಕಡೆಗಣಿಸಿ ಹತ್ಯೆ ಮಾಡುವುದನ್ನು ಹೆಣ್ಣು ಭ್ರೂಣ ಹತ್ಯೆ ಎಂದು ಕರೆಯಲಾಗುತ್ತದೆ.

**5. ಲಿಂಗತಾರತಮ್ಯ ಎಂದರೇನು?**

❖ ಲಿಂಗದ ಆಧಾರದ ಮೇಲೆ ಸ್ತ್ರೀ-ಪುರುಷರ ನಡುವೆ ತಾರತಮ್ಯ ಮಾಡುವುದನ್ನು ಲಿಂಗ ತಾರತಮ್ಯ ಎಂದು ಕರೆಯುತ್ತಾರೆ.

**6. ಬಾಲ್ಯವಿವಾಹ ಎಂದರೇನು?**

❖ 18 ವರ್ಷದೊಳಗಿನ ಹುಡುಗಿಗೆ ಅಥವಾ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡಿದರೆ ಅದನ್ನು ಬಾಲ್ಯವಿವಾಹ ಎಂದು ಕರೆಯಲಾಗುತ್ತದೆ.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

**1. ಭಾರತದ ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.**

❖ ಬಾಲ ಕಾರ್ಮಿಕ ಪದ್ಧತಿ

❖ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

❖ ಹೆಣ್ಣು ಭ್ರೂಣಹತ್ಯೆ

❖ ಹಸಿವು ಮತ್ತು ಅಪೌಷ್ಟಿಕತೆ

❖ ಲಿಂಗತಾರತಮ್ಯ

❖ ಬಾಲ್ಯ ವಿವಾಹ

❖ ಮಕ್ಕಳ ಸಾಗಾಣಿಕೆ ಮತ್ತು ಮಾರಾಟ

**2. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು? ತಿಳಿಸಿ.**

❖ ಸಾಮಾಜಿಕ ಪರಿಸರದ ಕೊರತೆ

❖ ವಲಸೆ

❖ ಕೃಷಿ ಸಮಾಜದ ಬಿಕ್ಕಟ್ಟುಗಳು

❖ ಪೋಷಕರ ದುಶ್ಚಟಗಳು

❖ ಶಿಕ್ಷಣ ಹಕ್ಕು ಕಾಯ್ದೆಯ ಅಸಮರ್ಪಕ ಅನುಷ್ಠಾನ

❖ ಕುಟುಂಬದ ಆರ್ಥಿಕ ಸ್ಥಿತಿ

❖ ಕನಿಷ್ಠ ಕೂಲಿ

❖ ಭೂಸುಧಾರಣಾ ಕಾಯ್ದೆಯ ಅಸಮರ್ಪಕ ಅನುಷ್ಠಾನ

**3. ಬಾಲಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು? ವಿವರಿಸಿ.**

❖ ಪ್ರತಿಯೊಂದು ಮಗವು ಕಡ್ಡಾಯವಾಗಿ 18 ವರ್ಷಗಳ ತನಕ ನಿರಂತರ ಶಾಲಾ ಶಿಕ್ಷಣವನ್ನು ಪೂರೈಸುವುದು.

❖ ಲಿಂಗ ಸಮಾನತೆಯನ್ನು ಕಾಪಾಡುವುದು.

❖ ವಲಸೆ / ಗುಳೆ ಹೋಗುವುದನ್ನು ತಡೆಗಟ್ಟುವುದು.

❖ ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವನ್ನು ಹೆಚ್ಚಿಸುವುದು.

❖ ಬಾಲ್ಯವಿವಾಹದ ಕುರಿತು ಅರಿವನ್ನು ಹೆಚ್ಚಿಸುವುದು.

❖ ಮಕ್ಕಳ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

**4. ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳೇನು?**

❖ ಪುರುಷ ಪ್ರಧಾನ ಸಮಾಜ

❖ ಮದುವೆ ಮತ್ತು ಆಸ್ತಿಯ ಒಡೆತನ

❖ ವರದಕ್ಷಿಣೆ

❖ ಸ್ತ್ರೀಯರ ಮೇಲಿನ ದೌರ್ಜನ್ಯ ಪ್ರಕರಣಗಳು

❖ ಪುತ್ರ ಸಂತಾನದ ಬಯಕೆ

**5. ಹೆಣ್ಣು ಭ್ರೂಣ ಹತ್ಯೆಯ ದುಷ್ಪರಿಣಾಮಗಳಾವುವು?**

❖ ಸ್ತ್ರೀ-ಪುರುಷರ ಲಿಂಗಾನುಪಾತದಲ್ಲಿ ಅಸಮಾನತೆ

❖ ಲಿಂಗ ತಾರತಮ್ಯ

❖ ಹೆಣ್ಣಿನ ಅಪಮೌಲ್ಯೀಕರಣ

**6. ಹಸಿವಿನ ಸೂಚ್ಯಾಂಕದಲ್ಲಿರುವ ಪ್ರಮುಖ ಮೂರು ಅಂಶಗಳಾವುವು? / ಹಸಿವಿನ ಸೂಚ್ಯಾಂಕವನ್ನು ಹೇಗೆ ನಿರ್ಧರಿಸುತ್ತಾರೆ?**

❖ ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ.

❖ ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ

❖ 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ

❖ ಈ ಮೇಲಿನ ಮೂರು ಅಂಶಗಳ ಸರಾಸರಿಯಿಂದ ಹಸಿವಿನ ಸೂಚ್ಯಾಂಕವನ್ನು ನಿರ್ಧರಿಸುತ್ತಾರೆ.

**7. ಲಿಂಗತಾರತಮ್ಯದ ಪ್ರಕಾರಗಳು ಯಾವುವು?**

❖ ಜನನ ಪ್ರಮಾಣದಲ್ಲಿ ಅಸಮಾನತೆ

❖ ಮೂಲಸೌಕರ್ಯದಲ್ಲಿ ಅಸಮಾನತೆ

❖ ಅವಕಾಶಗಳಲ್ಲಿ ಅಸಮಾನತೆ

❖ ಒಡೆತನದ ಅಸಮಾನತೆ

❖ ಕೌಟುಂಬಿಕ ಅಸಮಾನತೆ

**8. ಬಾಲ್ಯವಿವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

❖ 18 ವರ್ಷದ ತನಕ ಕಡ್ಡಾಯ ಶಾಲಾ ಶಿಕ್ಷಣ ನೀಡುವುದು

❖ ಜನನ ನೊಂದಣಿ ಕಡ್ಡಾಯವಾಗಿ ಮಾಡಿಸುವುದು

❖ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದು

❖ ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ

❖ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು

**9. ಮಕ್ಕಳ ಸಾಗಾಣಿಕೆಯ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

❖ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಲಾಗಿದೆ.

❖ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಸುರಕ್ಷತಾ ಸಮಿತಿ" ರಚಿಸಲಾಗಿದೆ.

❖ ಗ್ರಾಮ ಪಂಚಾಯತಿಗಳು ಪ್ರತಿ ವರ್ಷ ಕಡ್ಡಾಯವಾಗಿ "ಮಕ್ಕಳ ಗ್ರಾಮ ಸಭೆ" ಗಳನ್ನು ನಡೆಸುವುದು.

❖ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ" ರಚಿಸಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸುವುದು.

❖ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ" ಸಮಿತಿ ರಚಿಸಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸುವುದು.

❖ ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಒಂದು 'ಬಾಲಿಕಾ ಸಂಘ' ಪ್ರಾರಂಭಿಸಲಾಗಿದೆ.

# ಭೂಗೋಳ ವಿಜ್ಞಾನ

## ಅಧ್ಯಾಯ-1

## ಭಾರತದ ಸ್ಥಾನ ಮತ್ತು ವಿಸ್ತೀರ್ಣ

**ಬಹು ಆಯ್ಕೆಯ ಪ್ರಶ್ನೆಗಳು-**

**1) ಭಾರತದ ದೊಡ್ಡ ರಾಜ್ಯ: ರಾಜಸ್ತಾನ : : ಚಿಕ್ಕ ರಾಜ್ಯ : ______**

ಅ) ಅಸ್ಸಾಂ ಆ) ಸಿಕ್ಕಿಂ

**ಇ) ಗೋವಾ** ಈ) ಅಂಡಮಾನ್

**2) ಭಾರತ ಮತ್ತು ಶ್ರೀಲಂಕಾ ದೇಶವನ್ನು ಇದು ಪ್ರತ್ಯೇಕಿಸಿದೆ.**

ಅ) ಪಾಕ್ ಖಾರಿ **ಆ) ಪಾಕ್ ಜಲಸಂಧಿ**

ಇ) ಮನ್ನಾರ್ ಜಲಸಂಧಿ ಈ) ಬಂಗಾಳಕೊಲ್ಲಿ

**3) ಭಾರತ ಭೂರಾಶಿಯ ದಕ್ಷಿಣ ತುದಿ.**

ಅ) ಇಂದಿರಾ ಕೋಲ್ **ಆ) ಕನ್ಯಾಕುಮಾರಿ**

ಇ) ಇಂದಿರಾ ಪಾಯಿಂಟ್ ಈ) ಕೊಚ್ಚಿ

**4) ಇದು ಭಾರತದ ಪ್ರಮಾಣಿತ ವೇಳೆ/ ಆದರ್ಶ ಕಾಲಮಾನ**

ಅ) 82½° ಉತ್ತರ ಅಕ್ಷಾಂಶ

**ಆ) 82½° ಪೂರ್ವ ರೇಖಾಂಶ**

ಇ) 23½° ಉತ್ತರ ಅಕ್ಷಾಂಶ

ಈ) 82½° ಪಶ್ಚಿಮ ರೇಖಾಂಶ

**5) ಭಾರತದ ಒಟ್ಟು ರಾಜ್ಯ ಮತತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ.**

**ಅ) 29, 7** ಆ) 30, 7

ಇ) 29, 6 ಈ) 30, 6

**ಈ ಪಾಠದಲ್ಲಿ ಕೇಳಬಹುದಾದ ಒಂದು ಅಂಕದ ಪ್ರಶ್ನೆಗಳು/ನಕ್ಷೆ ಮತ್ತು ಸ್ಥಳ ಗುರುತಿಸುವಿಕೆ ಪ್ರಶ್ನೆಗಳು-**

**1) ಭಾರತದ ನಕ್ಷೆ ಬರೆಯಿರಿ ಮತ್ತು ಈ ಕೆಳಗಿನ ಭಾಗ/ ಸ್ಥಳಗಳನ್ನು ಗುರುತಿಸಿ**

ಅ) ಕರ್ಕಾಟಕ ಸಂಕ್ರಾಂತಿ ವೃತ್ತ/ 23½° ಉತ್ತರ ಅಕ್ಷಾಂಶ

ಆ) 82½° ಪೂರ್ವ ರೇಖಾಂಶ/ ಅಲಹಾಬಾದ್ ರೇಖೆ

ಇ) ಇಂದಿರಾಕೋಲ್

ಈ) ಇಂದಿರಾ ಪಾಯಿಂಟ್/ ಪಿಗ್ಮೇಲಿಯನ್ ಪಾಯಿಂಟ್

ಉ) ಭಾರತದ ಭೌಗೋಳಿಕ ಕೇಂದ್ರ

ಊ) ಭಾರತದ ಜಲಮೇರೆಗಳು-ಅರಬ್ಬಿ ಸಮುದ್ರ, ಹಿಂದೂ ಮಹಾಸಾಗರ, ಬಂಗಾಳ ಕೊಲ್ಲಿ.

ಋ) ಅಂಡಮಾನ್ ನಿಕೋಬಾರ್ ದ್ವೀಪ,

ಎ) ಲಕ್ಷದ್ವೀಪ

ಏ) ಕನ್ಯಾಕುಮಾರಿ

ಐ) ಭಾರತದ ಅತ್ಯಂತ ದಕ್ಷಿಣ ಅಕ್ಷಾಂಶ-6°.45'

ಒ) ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿ

ಓ) ದೆಹಲಿ

ಔ) ಭಾರತದ ರೇಖಾ ನಕ್ಷೆಯನ್ನು ರಚಿಸಿ, ಅದರಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಅವುಗಳ ರಾಜಧಾನಿಗಳನ್ನು ಗುರುತಿಸಿ ಹಾಗೂ ಹೆಸರಿಸಿ.

**1 ಅಂಕದ ಪ್ರಶ್ನೆಗಳು:-**

**1) ಭಾರತದ ರಾಜ್ಯಗಳಲ್ಲಿ ವಿಸ್ತೀರ್ಣದಲ್ಲಿ ದೊಡ್ಡದು ಮತ್ತು ಅತಿ ಚಿಕ್ಕ ರಾಜ್ಯ ಯಾವುದು?**

ಭಾರತದ ರಾಜ್ಯಗಳಲ್ಲಿ ರಾಜಸ್ತಾನವು ವಿಸ್ತೀರ್ಣದಲ್ಲಿ ದೊಡ್ಡದು ಮತ್ತು ಗೋವಾ ಅತಿ ಚಿಕ್ಕದು.

**2) ಭಾರತದ ಭೌಗೋಳಿಕ ನೆಲೆಯನ್ನು ತಿಳಿಸಿ.**

ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಭಾರತದ ಪ್ರಧಾನ ಭೂಭಾಗವು 8°.4′ ದಿಂದ 37°.6′ ಉತ್ತರ ಅಕ್ಷಾಂಶ ಹಾಗೂ 68°.7′ ರಿಂದ 97°.3′ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

**3) ಭಾರತದ ಅತ್ಯಂತ ದಕ್ಷಿಣ ಮತ್ತು ಉತ್ತರ ತುದಿಗಳು ಯಾವುವು?**

'ಇಂದಿರಾ ಪಾಯಿಂಟ್' ಭಾರತದ ಅತ್ಯಂತ ದಕ್ಷಿಣ ತುದಿ, ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

**4) ಭಾರತದ ಮಧ್ಯಭಾಗದಲ್ಲಿ ಹಾಯ್ದುಹೋದ ರೇಖಾಂಶ ಯಾವುದು?**

ಭಾರತದ ಮಧ್ಯಭಾಗದಲ್ಲಿ ಹಾಯ್ದುಹೋದ ರೇಖಾಂಶ 82½° ಪೂರ್ವ ರೇಖಾಂಶ/ ಅಲಹಾಬಾದ್ ರೇಖೆ

**5) ಭಾರತದ ಮಧ್ಯಭಾಗದಲ್ಲಿ ಹಾಯ್ದುಹೋದ ಅಕ್ಷಾಂಶ ಯಾವುದು?**

ಭಾರತದ ಮಧ್ಯಭಾಗದಲ್ಲಿ ಹಾಯ್ದುಹೋದ ಅಕ್ಷಾಂಶ ಕರ್ಕಾಟಕ ಸಂಕ್ರಾಂತಿ ವೃತ್ತ/ 23½° ಉತ್ತರ ಅಕ್ಷಾಂಶ

**6) ಭಾರತದ ಪ್ರಮಾಣಿತ ವೇಳೆಯನ್ನು ಯಾವ ರೇಖಾಂಶದ ಆಧಾರದಲ್ಲಿ ಕಂಡುಹಿಡಿಯಲಾಗುತ್ತದೆ?**

ಭಾರತದ ಮಧ್ಯಭಾಗದಲ್ಲಿ ಹಾಯ್ದುಹೋದ 82½° ಪೂರ್ವ ರೇಖಾಂಶದ ಆಧಾರದಲ್ಲಿ ಕಂಡುಹಿಡಿಯಲಾಗುತ್ತದೆ

**7) ಭಾರತವು ಪ್ರಪಂಚದಲ್ಲಿ ಎಷ್ಟನೇ ದೊಡ್ಡದೇಶವಾಗಿದೆ?**

ಭಾರತವು ಪ್ರಪಂಚದಲ್ಲಿ ಏಳನೇ ದೊಡ್ಡದೇಶವಾಗಿದೆ

**8) ಭಾರತದ ಒಟ್ಟು ವಿಸ್ತೀರ್ಣವೆಷ್ಟು?**

ಭಾರತದ ಒಟ್ಟು ವಿಸ್ತೀರ್ಣ 32, 87, 263 ಚ.ಕಿ.ಮೀ. ಇದು ಪ್ರಪಂಚದ ವಿಸ್ತೀರ್ಣದಲ್ಲಿ ಶೇ. 2.42 ಭಾಗವಾಗಿರುತ್ತದೆ.

**9) ಭಾರತದ ಪೂರ್ವ–ಪಶ್ಚಿಮವಾಗಿ ಅಗಲ ಹಾಗೂ ಉತ್ತರ–ದಕ್ಷಿಣವಾಗಿ ಉದ್ದವೆಷ್ಟು ತಿಳಿಸಿ.**

ಪೂರ್ವ–ಪಶ್ಚಿಮವಾಗಿ 2933 ಕಿ.ಮೀ., ಅಗಲ ಹಾಗೂ ಉತ್ತರ–ದಕ್ಷಿಣವಾಗಿ 3214 ಕಿ.ಮೀ., ಉದ್ದವಾಗಿದೆ.

**10) ಭಾರತದ ಭೂಮೇರೆ ಮತ್ತು ಜಲಮೇರೆಗಳು ಎಷ್ಟು ಉದ್ದವಿದೆ ತಿಳಿಸಿ.**

ಭೂ ಮೇರೆಯ ಉದ್ದ 15,200 ಕಿಮೀ, ಭಾರತದ ಪ್ರಧಾನ ಭೂ ಭಾಗವು 6100 ಕಿ.ಮೀ. ದ್ವೀಪಗಳ ತೀರಗಳನ್ನೂ ಒಳಗೊಂಡಂತೆ ದೇಶದ ಒಟ್ಟು ಸಮುದ್ರ ತೀರದ ಉದ್ದ 7516.5 ಕಿ.ಮೀ.ಗಳು.

**11) ಭಾರತದ ನೆರೆರಾಷ್ಟ್ರಗಳಾವುವು?**

ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನ ಹಾಗೂ ಪೂರ್ವಭಾಗದಲ್ಲಿ ಬಾಂಗ್ಲಾದೇಶ ಮತ್ತು ಮ್ಯೆಯನ್ಮಾರ್ ದೇಶಗಳಿವೆ.

**12) ಭಾರತದಲ್ಲಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ ಎಷ್ಟು?**

ಭಾರತದಲ್ಲಿ ಒಟ್ಟು 29 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳು ಇವೆ.

# ಅಧ್ಯಾಯ –2
# ಭಾರತದ ಮೇಲ್ಮೈ ಲಕ್ಷಣಗಳು

**ಬಹು ಆಯ್ಕೆಯ ಪ್ರಶ್ನೆಗಳು–**

**1) ಇದರ ಪೂರ್ವಭಾಗವು ಅರಣ್ಯಗಳಿಂದಾವರಿಸಿದೆ.**

ಅ) ಮಹಾ ಹಿಮಾಲಯ
**ಆ) ಒಳ ಹಿಮಾಲಯ**
ಇ) ಹೊರ ಹಿಮಾಲಯ
ಈ) ಸಿವಾಲಿಕ್ ಬೆಟ್ಟಗಳು

**2) ಇವುಗಳನ್ನು ಪಾದಬೆಟ್ಟಗಳು ಎನ್ನುವರು.**

ಅ) ಮಹಾ ಹಿಮಾಲಯ
ಆ) ಒಳ ಹಿಮಾಲಯ
ಇ) ಹೊರ ಹಿಮಾಲಯ
**ಈ) ಸಿವಾಲಿಕ್ ಬೆಟ್ಟಗಳು**

**3) ಇದು ಪ್ರಪಂಚದಲ್ಲಿಯೇ ಅತ್ಯಂತ ಎತ್ತರದ ಪರ್ವತ.**

**ಅ) ಮೌಂಟ್ ಎವರೆಸ್ಟ್**
ಆ) ಕಾಂಚನಜಂಗ
ಇ) ಗಾಡ್ವಿನ್ ಆಸ್ಟಿನ್
ಈ) ಧವಳಗಿರಿ

**4) ಡೆಹ್ರಾಡೂನ್ ಕಣಿವೆ ಇಲ್ಲಿ ಕಂಡು ಬರುತ್ತದೆ.**

ಅ) ಮಹಾ ಹಿಮಾಲಯ
ಆ) ಒಳ ಹಿಮಾಲಯ
ಇ) ಹೊರ ಹಿಮಾಲಯ
**ಈ) ಸಿವಾಲಿಕ್ ಬೆಟ್ಟಗಳು**

**5) ಇದು ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ, ಈ ಮೂರು ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡಿದೆ.**

ಅ) ಉತ್ತರದ ಪರ್ವತಗಳು.
**ಆ) ಉತ್ತರದ ಮೈದಾನಗಳು.**
ಇ) ಪರ್ಯಾಯ ಪ್ರಸ್ಥಭೂಮಿ.
ಈ) ಕರಾವಳಿ ಮೈದಾನ ಮತ್ತು ದ್ವೀಪಗಳು.

**6) ಉತ್ತರದ ಮೈದಾನವು ಕೃಷಿಗೆ ಉಪಯುಕ್ತ. ಕಾರಣ.**

ಅ) ಕೈಗಾರಿಕಿಕರಣ
ಆ) ನಗರೀಕರಣ
ಇ) ಆಧುನಿಕ ಯಂತ್ರೋಪಕರಣ ಹೆಚ್ಚು
**ಈ) ಫಲವತ್ತಾಗಿದೆ ಮತ್ತು ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ.**

7) **ಇದು ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಅತ್ಯಂತ ವಿಶಾಲವಾದುದು ಗೊಂಡ್ವಾನ ಭೂಭಾಗಕ್ಕೆ ಸೇರಿದ್ದು, ಪುರಾತನ ಶಿಲೆಗಳಿಂದ ರಚಿತವಾಗಿದೆ.**

ಅ) ಉತ್ತರದ ಪರ್ವತಗಳು.
ಆ) ಉತ್ತರದ ಮೈದಾನಗಳು.
**ಇ) ಪರ್ಯಾಯ ಪ್ರಸ್ಥಭೂಮಿ.**
ಇ) ಕರಾವಳಿ ಮೈದಾನ ಮತ್ತು ದ್ವೀಪಗಳು.

**8) ಇವುಗಳನ್ನು 'ಸಹ್ಯಾದ್ರಿ ಸರಣಿ' ಎಂತಲೂ ಕರೆಯಲಾಗಿದೆ?**

ಅ) ವಿಂಧ್ಯಾ ಪರ್ವತ ಸರಣಿ
**ಆ) ಪಶ್ಚಿಮ ಘಟ್ಟಗಳು**
ಇ) ಪೂರ್ವ ಘಟ್ಟಗಳು
ಈ) ನೀಲಗಿರಿ ಪರ್ವತ

**9) ಅಣ್ಣಾಮಲೈ ಬೆಟ್ಟಗಳಲ್ಲಿರುವ ಇದು ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ.**

**ಅ) 'ಅಣೈಮುಡಿ'** ಆ) ಪಳನಿ,

ಇ) ಕಾರ್ಡಮಮ್ ಈ) ಅರ್ಮಕೊಂಡ

**10) ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ.**

ಅ) 'ಅಣೈಮುಡಿ' ಆ) ಪಳನಿ,

ಇ) ಕಾರ್ಡಮಮ್ **ಈ) ಅರ್ಮಕೊಂಡ**

**1 ಅಂಕದ ಪ್ರಶ್ನೆಗಳು:-**

**1) ಮೇಲ್ಮೈ ಲಕ್ಷಣವನ್ನಾಧರಿಸಿ ಭಾರತದ 4 ಪ್ರಮುಖ ವಿಭಾಗಗಳಾವುವು?**

1. ಉತ್ತರದ ಪರ್ವತಗಳು.
2. ಉತ್ತರದ ಮೈದಾನಗಳು.
3. ಪರ್ಯಾಯ ಪ್ರಸ್ಥಭೂಮಿ.
4. ಕರಾವಳಿ ಮೈದಾನ ಮತ್ತು ದ್ವೀಪಗಳು.

**2) ಉತ್ತರದ ಹಿಮಾಲಯ ಪರ್ವತಗಳ ವಿಸ್ತೀರ್ಣವನ್ನು ಬರೆಯಿರಿ.**

ಭಾರತದಲ್ಲಿ ಹಿಮಾಲಯ ಪೂರ್ವ ಪಶ್ಚಿಮವಾಗಿ 2400 ಕಿ.ಮೀ. ಉದ್ದವಾಗಿವೆ. ಅವುಗಳ ಅಗಲವು 240 ರಿಂದ 320 ಕಿ.ಮೀ. ಗಳು. ಸುಮಾರು 5 ಲಕ್ಷ ಚ.ಕಿ.ಮೀ. ಗಳಲ್ಲಿ ಹರಡಿವೆ.

**3) ಹಿಮಾಲಯ ಪರ್ವತಗಳ ಸರಣಿಗಳ ವಿಭಾಗಳಾವುವು?**

1) ಮಹಾ ಹಿಮಾಲಯ. 2) ಒಳ ಹಿಮಾಲಯ ಮತ್ತು 3) ಸಿವಾಲಿಕ್ ಬೆಟ್ಟಗಳು.

**4) ಪ್ರಪಂಚದಲ್ಲಿಯೇ ಅತ್ಯಂತ ಎತ್ತರದ ಪರ್ವತ ಯಾವುದು?**

ಮೌಂಟ್ ಎವರೆಸ್ಟ್

**5) ಪ್ರಪಂಚದಲ್ಲಿಯೇ ಅತ್ಯಂತ ಎತ್ತರದ ಪರ್ವತ ಹಿಮಾಲಯದ ಯಾವ ಸರಣಿಯಲ್ಲಿದೆ?**

ಮಹಾಹಿಮಾಲಯ ಸರಣಿ

**6) ಮಹಾಹಿಮಾಲಯವನ್ನು ಹಿಮಾದ್ರಿ ಎನ್ನಲು ಕಾರಣವೇನು?**

ಈ ಸರಣಿಯು ವರ್ಷವೆಲ್ಲಾ ಹಿಮಾವೃತವಾಗಿರುವುದರಿಂದ, ಇದನ್ನು 'ಹಿಮಾದ್ರಿ' ಎಂದು ಕರೆಯಲಾಗಿದೆ.

**7) ಮಹಾ ಹಿಮಾಲಯದಲ್ಲಿ ಕಂಡುಬರುವ ಪರ್ವತ ಘಾಟಿಗಳಾವುವು?**

ಬುರ್ಜಿಲ್, ಜೋಜಿಲಾ, ಶಿಪ್ಕಿಲಾ

**8) ಹೊರ ಹಿಮಾಲಯಗಳೆಂದರೇನು?**

ಹಿಮಾದ್ರಿ ಸರಣಿಗಳಿಂದ ಉತ್ತರಕ್ಕೆ ಕಂಡುಬರುವ ಪರ್ವತಗಳನ್ನು ಹೊರ-ಹಿಮಾಲಯಗಳೆಂದು ಕರೆಯಲಾಗಿದೆ.

**9) ಭಾರತದಲ್ಲಿಯೇ ಅತ್ಯಂತ ಎತ್ತರದ ಪರ್ವತ ಯಾವುದು?**

ಭಾರತದ ಎತ್ತರವಾದ ಶಿಖರ $k_2$ ಅಥವಾ ಗಾಡ್ವಿನ್ ಆಸ್ಟಿನ್.

**10) ತಮಿಳುನಾಡು ಭಾಗದ ತೀರವನ್ನು ಏನೆಂದು ಕರೆಯುವರು?**

ಕೋರಮಂಡಲ ತೀರ

**11) ಪೂರ್ವಕರಾವಳಿಯ ಲಗೂನ್‌ಗಳನ್ನು ಹೆಸರಿಸಿ.**

ಚಿಲ್ಕ, ಪುಲಿಕೇಟ್ ಮತ್ತು ಕೊಲ್ಲೇರು ಸರೋವರಗಳು.

**12) ಯಾವುದನ್ನು ಹವಳದ ದ್ವೀಪ ಎನ್ನುವರು?**

ಭಾರತದ ಲಕ್ಷದ್ವೀಪಗಳನ್ನು ಹವಳದ ದ್ವೀಪ ಎನ್ನುವರು.

**2 ಅಂಕದ ಪ್ರಶ್ನೆಗಳು:-**

1) ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

1. ಉತ್ತರದ ಪರ್ವತಗಳು.
2. ಉತ್ತರದ ಮೈದಾನಗಳು.
3. ಪರ್ಯಾಯ ಪ್ರಸ್ಥಭೂಮಿ.
4. ಕರಾವಳಿ ಮೈದಾನ ಮತ್ತು ದ್ವೀಪಗಳು.

**2) ಹಿಮಾಲಯ ಪರ್ವತಗಳ ವಿವಿಧ ಸರಣಿಗಳನ್ನು ಬರೆಯಿರಿ.**

1) ಮಹಾ ಹಿಮಾಲಯ. 2) ಒಳ ಹಿಮಾಲಯ ಮತ್ತು 3) ಸಿವಾಲಿಕ್ ಬೆಟ್ಟಗಳು.

**3) ಸಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

ಇವು ಹಿಮಾಲಯದ ಹೊರಗಿನ ಅಥವಾ ಪಾದಭಾಗದ ಸರಣಿಗಳಾಗಿದ್ದು, ಪ್ರಧಾನ ಹಿಮಾಲಯದ ದಕ್ಷಿಣ ಭಾಗದಲ್ಲಿವೆ. ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.ಗಳು. ಇವು ಜಮ್ಮು-ಕಾಶ್ಮೀರದಿಂದ ಅರುಣಾಚಲಪ್ರದೇಶದವರೆಗೆ ಹಬ್ಬಿವೆ.

**4) ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.**

**ಪೂರ್ವ ಘಟ್ಟಗಳು**

ಎತ್ತರವಾಗಿಲ್ಲ.
ನಿರಂತರವಾಗಿಲ್ಲ.
ಪೂರ್ವ ಕರಾವಳಿಗೆ ಹೊಂದಿಕೊಂಡಂತೆ ಹಬ್ಬಿದೆ.
ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದೆ.

**ಪಶ್ಚಿಮ ಘಟ್ಟಗಳು**

ಎತ್ತರವಾಗಿದೆ.
ನಿರಂತರವಾಗಿವೆ.
ಪಶ್ಚಿಮ ಕರಾವಳಿಗೆ ಹೊಂದಿಕೊಂಡಂತೆ ಹಬ್ಬಿದೆ.
ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ವಿಸ್ತರಿಸಿದೆ.

**5) ಉತ್ತರ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.**

- ಪರಕೀಯರ ದಾಳಿ ಹಾಗೂ ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ನಿಯಂತ್ರಿಸುತ್ತವೆ.
- ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
- ದಟ್ಟ ಕಾಡುಗಳಿವೆ ಮತ್ತು ನೆಡುತೋಟದ ಬೆಳೆಗಳಿಗೆ ಸೂಕ್ತ.
- ಖನಿಜಗಳ ಉಗ್ರಾಣಗಳಾಗಿವೆ.
- ಹಲವು ನದಿಗಳ ಉಗಮ ಸ್ಥಾನ, ಇಲ್ಲಿನ ಜಲಪಾತಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತ.

**6) ಉತ್ತರದ ಮೈದಾನಗಳು ಹೇಗೆ ರಚನೆಯಾಗಿವೆ?**

ಉತ್ತರದ ಮೈದಾನಗಳು ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ, ಈ ಮೂರು ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡಿದೆ.

**7) ಮಹಾ ಹಿಮಾಲಯದ ವಿಶೇಷತೆ ಏನು?**

ಮಹಾ ಹಿಮಾಲಯದ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ 6100 ಮೀ. ಮೌಂಟ್ ಎವರೆಸ್ಟ್ (8848 ಮೀ.) ಪ್ರಪಂಚದಲ್ಲೇ

ಎತ್ತರವಾದುದು. ಈ ಸರಣಿಯು ವರ್ಷವೆಲ್ಲಾ ಹಿಮಾವೃತವಾಗಿರುವುದರಿಂದ, ಇದನ್ನು 'ಹಿಮಾದ್ರಿ' ಎಂದು ಕರೆಯಲಾಗಿದೆ. ಕಾರಾಕೊರಂ ಸರಣಿಯ k2 ಅಥವಾ ಗಾಡ್ವಿನ್ ಆಸ್ಟಿನ್ ಭಾರತದ ಎತ್ತರವಾದ ಶಿಖರ.

**8) ಉತ್ತರದ ಮೈದಾನಗಳ ಮಹತ್ವವನ್ನು ತಿಳಿಸಿ.**

- ವಿಶಾಲವಾದ ಮೈದಾನ, ಫಲವತ್ತಾಗಿದೆ ಮತ್ತು ಇಲ್ಲಿ ಸರ್ವಕಾಲಿಕ
- ನದಿಗಳು ಹರಿಯುತ್ತವೆ.
- ಕೃಷಿಗೆ ಉಪಯುಕ್ತ.
- ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ, ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯ.
- ಜೊತೆಗೆ ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತದೆ.
- ಇಲ್ಲಿ ಅನೇಕ ಯಾತ್ರಾಸ್ಥಳಗಳಿವೆ.

**9) ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ತಿಳಿಸಿ.**

- ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೈವಿಕ
- ವೈವಿಧ್ಯದಿಂದ ಕೂಡಿದೆ.
- ನೈಋತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತದೆ.
- ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕವಾಗಿದೆ.
- ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನ. ಅವು ಜಲಶಕ್ತಿ ತಯಾರಿಕೆಗೆ ಉಪಯುಕ್ತ.
- ಇಲ್ಲಿ ಗಿರಿಧಾಮಗಳೂ ಇವೆ.

**10) ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.**

**ಪೂರ್ವ ಕರಾವಳಿ**

- ಸುವರ್ಣರೇಖಾ ನದಿಯಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ.
- ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ನೆಲೆಸಿದೆ.
- ಅಗಲ ಮತ್ತು ಸಮತಟ್ಟಾಗಿದೆ.
- ಸರ್ಕಾರ್ ತೀರ & ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

**ಪಶ್ಚಿಮ ಕರಾವಳಿ**

- ಕಛ್ ನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ.
- ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ
- ಕಿರಿದಾಗಿದ್ದು ಕಡಿದಾದ ಇಳಿಜಾರಿನಿಂದ ಕೂಡಿದೆ.
- ಕೊಂಕಣತೀರ, ಕರ್ನಾಟಕ ತೀರ ಮತ್ತು ಮಲಬಾರ್ ತೀರ ಎಂದು ವಿಂಗಡಿಸಲಾಗಿದೆ.

**11) ಭಾರತದ ಕರಾವಳಿಯ ಪ್ರಾಮುಖ್ಯತೆಯನ್ನು ತಿಳಿಸಿ.**

ನೈಸರ್ಗಿಕ ಬಂದರುಗಳಿಗೆ ಪೂರಕ
ವಿದೇಶ ವ್ಯಾಪಾರಾಭಿವೃದ್ಧಿ
ಮೀನುಗಾರಿಕೆ ಮತ್ತು ಕೃಷಿ ಅಭಿವೃದ್ಧಿ
ಉಪ್ಪಿನ ತಯಾರಿಕೆಗೆ ಸಹಕಾರಿ
ಹಡಗು ನಿರ್ಮಾಣ ಕೈಗಾರಿಕೆ ಬೆಳವಣಿಗೆ
ನೌಕಯಾನಕ್ಕೆ ಸಹಕಾರಿ
ಪ್ರವಾಸೋದ್ಯಮದ ಅಭಿವೃದ್ಧಿ

**12) ಭಾರತದ ದ್ವೀಪಗಳ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.**

ಭಾರತದಲ್ಲಿ 247 ದ್ವೀಪಗಳಿವೆ, 204 ಬಂಗಾಳಕೊಲ್ಲಿಯಲ್ಲಿವೆ. ಉದಾ: ಅಂಡಮಾನ್ ಮತ್ತು ನಿಕೋಬಾರ್. 43 ಅರಬ್ಬಿ ಸಮುದ್ರಗಳಲ್ಲಿವೆ. ಉದಾ: ಲಕ್ಷದ್ವೀಪಗಳು. ಲಕ್ಷದ್ವೀಪಗಳು ಹವಳ ದ್ವೀಪಗಳಾಗಿವೆ

**13) ಭಾರತದ ನಕ್ಷೆ ಬರೆಯಿರಿ ಮತ್ತು ಈ ಕೆಳಗಿನ ಭಾಗ/ ಸ್ಥಳಗಳನ್ನು ಗುರುತಿಸಿ**

1. ಉತ್ತರದ ಪರ್ವತಗಳು.
2. ಉತ್ತರದ ಮೈದಾನಗಳು.
3. ಪರ್ಯಾಯ ಪ್ರಸ್ಥಭೂಮಿ.
4. ಕರಾವಳಿ ಮೈದಾನ ಮತ್ತು ದ್ವೀಪಗಳು.
5. ಮಹಾ ಹಿಮಾಲಯ.
6. ಒಳ ಹಿಮಾಲಯ ಮತ್ತು
7. ಸಿವಾಲಿಕ್ ಬೆಟ್ಟಗಳು.
8. ಮೌಂಟ್ ಎವರೆಸ್ಟ್,
9. ಮೌಂಟ್ ಗಾಡ್ವಿನ್ ಆಸ್ಟಿನ್,
9. ಬುರ್ಜಿಲ್, ಜೋಜಿಲಾ, ಶಿಪ್ಕಿಲಾ
10. ಮುಸ್ಸೋರಿ, ಡಾರ್ಜಲಿಂಗ್
11. ಶಿಮ್ಲಾ, ರಾಣಿಕೇಟ್, ಮುಸ್ಸೋರಿ, ನೈನಿತಾಲ್
12. ಡೆಹ್ರಾಡೂನ್
13. ಅರಾವಳಿ, ವಿಂದ್ಯಾ, ಸಾತ್ಪುರ, ನೀಲಗಿರಿ.
14. ಛೋಟನಾಗಪುರ ಸರಣಿ, ದಖನ್ ಪ್ರಸ್ಥಭೂಮಿ, ಮಾಳವ ಪ್ರಸ್ಥಭೂಮಿ
15. ಮೌಂಟ್ ಅಬು, ಗುರುಶಿಖರ, ಬೋರ್ಗಾಟ್, ತಾಲ್ಘಾಟ್ ಮತ್ತು ಪಾಲ್ಘಾಟ್.
16. ಅಣ್ಣಾಮಲೈ, ಪಳನಿ, ಮತ್ತು ಕಾರ್ಡಮಮ್, ಅರ್ಮಕೊಂಡ.
17. ಕೊಂಕಣತೀರ, ಕರ್ನಾಟಕ ತೀರ, ಮಲಬಾರ್ ತೀರ, ಕೊರಮಂಡಲ ತೀರ, ಉತ್ತರ ಸರ್ಕಾರ್.

## ಅಧ್ಯಾಯ–3

# ಭಾರತದ ವಾಯುಗುಣ

**ಬಹುಆಯ್ಕೆಯ ಪ್ರಶ್ನೆಗಳು:–**

**1) ಇದು ಭಾರತದ ವಾಯುಗುಣವಾಗಿದೆ**

**ಅ) ಉಷ್ಣವಲಯದ ಮಾನ್ಸೂನ್**
ಆ) ಆಲ್ಪೈನ್ ಮಾದರಿಯ ವಾಯುಗುಣ
ಇ) ಸಮಶೀತೋಷ್ಣವಲಯದ ಮಾನ್ಸೂನ್
ಈ) ಶೀತವಲಯದ ಮಾನ್ಸೂನ್

**2) ಭಾರತದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೇಯ ಪರಿಸ್ಥಿತಿ ಇರುವ ಕಾಲ ಇದಾಗಿದೆ.**

**ಅ) ಚಳಿಗಾಲ (ಡಿಸೆಂಬರ್–ಫೆಬ್ರವರಿ)**
ಆ) ಬೇಸಿಗೆ ಕಾಲ (ಮಾರ್ಚ್–ಮೇ)
ಇ) ಮಳೆಗಾಲ (ಜೂನ್–ಸೆಪ್ಟೆಂಬರ್)
ಈ) ನಿರ್ಗಮನ ಮಾನ್‌ಸೂನ್ ಕಾಲ.

**3) ಭಾರತದಲ್ಲಿಯೇ ಅತಿ ಕಡಿಮೆ ಉಷ್ಣಾಂಶ ದಾಖಲಾದ ಪ್ರದೇಶ.**

ಅ) ರೂಯ್ಲಿ

ಆ) ಮಾಸಿನ್ ರಾಮ್
<u>ಇ) ಕಾರ್ಗಿಲ್ ಹತ್ತಿರ ಡ್ರಾಸ್</u>
ಈ) ಗಂಗಾನಗರ

**4) ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಪ್ರದೇಶ ಇದು.**
ಅ) ರೂಯ್ಲಿ
ಆ) ಮಾಸಿನ್ ರಾಮ್
ಇ) ಕಾರ್ಗಿಲ್ ಹತ್ತಿರ ಡ್ರಾಸ್
<u>ಈ) ಗಂಗಾನಗರ</u>

**5) ಇದು ಕರ್ನಾಟಕದ ಕಾಫಿ ಬೆಳೆಗೆ & ಕೇರಳದ ಮಾವಿನ ಬೆಳೆಗೆ ಸಹಾಯಕ.**
ಅ) ಚಳಿಗಾಲ (ಡಿಸೆಂಬರ್–ಫೆಬ್ರವರಿ)
<u>ಆ) ಬೇಸಿಗೆ ಕಾಲ (ಮಾರ್ಚ್–ಮೇ)</u>
ಇ) ಮಳೆಗಾಲ (ಜೂನ್–ಸೆಪ್ಟೆಂಬರ್)
ಈ) ನಿರ್ಗಮನ ಮಾನ್‌ಸೂನ್ ಕಾಲ.

**6) ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಕಾಲ ಇದು.**
<u>ಅ) ಚಳಿಗಾಲ (ಡಿಸೆಂಬರ್–ಫೆಬ್ರವರಿ)</u>
ಆ) ಬೇಸಿಗೆ ಕಾಲ (ಮಾರ್ಚ್–ಮೇ)
ಇ) ಮಳೆಗಾಲ (ಜೂನ್–ಸೆಪ್ಟೆಂಬರ್)
ಈ) ನಿರ್ಗಮನ ಮಾನ್‌ಸೂನ್ ಕಾಲ.

**7) ಭಾರತದಲ್ಲಿ ಅತಿ ಹೆಚ್ಚು ಮಳೆ ಪಡೆಯುವ ಪ್ರಧೇಶ.**
ಅ) ರೂಯ್ಲಿ <u>ಆ) ಮಾಸಿನ್ ರಾಮ್</u>
ಇ) ಕಾರ್ಗಿಲ್ ಹತ್ತಿರ ಡ್ರಾಸ್ ಈ) ಗಂಗಾನಗರ

**8) ಭಾರತದಲ್ಲಿ ಈ ಕಾಲದ ಹವಾಗುಣವು ಅಸ್ಥಿರವಾಗಿರುತ್ತದೆ.**
ಅ) ಚಳಿಗಾಲ (ಡಿಸೆಂಬರ್–ಫೆಬ್ರವರಿ)
ಆ) ಬೇಸಿಗೆ ಕಾಲ (ಮಾರ್ಚ್–ಮೇ)
ಇ) ಮಳೆಗಾಲ (ಜೂನ್–ಸೆಪ್ಟೆಂಬರ್)
<u>ಈ) ನಿರ್ಗಮನ ಮಾನ್‌ಸೂನ್ ಕಾಲ.</u>

**9) ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಮಳೆ ಪಡೆಯುವ ಪ್ರದೇಶಗಳು.**
ಅ) ಪಶ್ಚಿಮ ಘಟ್ಟಗಳ ಪ್ರದೇಶ
<u>ಆ) ತಮಿಳುನಾಡಿನ ಪ್ರಧೇಶ</u>
ಇ) ಮೇಘಾಲಯ
ಈ) ರಾಜಸ್ಥಾನ

**10) ಇದು ಭಾರತದಲ್ಲಿ ಅತಿ ಹೆಚ್ಚು ವ್ಯಾಪಿಸಿದ ಪ್ರದೇಶವಾಗಿದೆ.**
ಅ) ಕಡಿಮೆ ಮಳೆ ಬೀಳುವ ಪ್ರದೇಶ
<u>ಆ) ಸಾಧಾರಣ ಮಳೆ ಬೀಳುವ ಪ್ರದೇಶ</u>
ಇ) ಅತಿ ಕಡಿಮೆ ಮಳೆ ಬೀಳುವ ಪ್ರದೇಶ
ಈ) ಅಧಿಕ ಮಳೆ ಬೀಳುವ ಪ್ರದೇಶ.

<u>ಒಂದು ಅಂಕದ ಪ್ರಶ್ನೆಗಳು:–</u>

**1. ಭಾರತದಲ್ಲಿ ಕಂಡು ಬರುವ ವಾಯುಗುಣ ಯಾವುದು?**
ಉಷ್ಣವಲಯದ ಮಾನ್ಸೂನ್.

**2. ಚಳಿಗಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಕಡಿಮೆ. ಏಕೆ?**
ಈ ಋತುಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ. ಭಾರತದಲ್ಲಿ ಓರೆ ಕಿರಣಗಳಿರುತ್ತವೆ. ಹೀಗಾಗಿ ಭಾರತದಲ್ಲಿ ಕಡಿಮೆ ಉಷ್ಣಾಂಶ.

**3. ಉತ್ತರ ಪ್ರದೇಶದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು?**
'ಆಂಧಿಸ್'

**4. ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆ?**
ಏಕೆಂದರೆ ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ.

**5. ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶವು ಎಲ್ಲಿ ದಾಖಲಾಗುತ್ತದೆ?**
ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ಎಂಬಲ್ಲಿ ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶವು ($-4^\circ$ ಸೆ) ದಾಖಲಾಗುತ್ತದೆ.

**6. ಭಾರತದಲ್ಲಿ ಕಡಿಮೆ ಮಳೆಯಾಗುವ ಋತುಮಾನ ಯಾವುದು?**
ಚಳಿಗಾಲ

**7. ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಉಷ್ಣಾಂಶವು ಹೆಚ್ಚು. ಏಕೆ?**
ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶವು ಹೆಚ್ಚು. ಹವಾಗುಣವು ಅತಿಶಾಖ.

**8. ಅಕ್ಟೋಬರ್ ತಿಂಗಳ ಆರಂಭದಲ್ಲಿ ನೈಋುತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.ಏಕೆ?**
ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗುವುದರಿಂದ ಭೂ ಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ಕ್ರಮೇಣ ಕ್ಷೀಣಗೊಂಡು ಅಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುವುದು. ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುವುದು. ಪರಿಣಾಮವಾಗಿ ನೈಋುತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.

**9. ಪರಿಸರಣ ಮಳೆ ಎಂದರೇನು?**
ಬೇಸಿಗೆ ಕಾಲದಲ್ಲಿ ಮದ್ಯಾಹ್ನದ ಸಮಯದಲ್ಲಿ ಗುಡುಗು ಮಿಂಚು ಸಹಿತವಾಗಿ ಮಳೆಯಾದರೆ ಅದನ್ನು ಪರಿಸರಣ ಮಳೆ ಎನ್ನುವರು.

**10. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಮಳೆ ಪಡೆಯುವ ಮುಖ್ಯ ಪ್ರದೇಶಗಳು ಯಾವುವು?**
ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳ ಕರಾವಳಿ ಭಾಗಗಳಿಗೆ ಮಳೆಯಾಗುತ್ತದೆ.

**11. ಉಷ್ಣವಲಯದ ಆವರ್ತಮಾರುತಗಳು (ಸೈಕ್ಲೋನ್) ಭಾರತದಲ್ಲಿ ಹೆಚ್ಚಾಗಿ ಎಲ್ಲಿ ಸಂಭವಿಸುತ್ತವೆ.**
ಉಷ್ಣವಲಯದ ಆವರ್ತಮಾರುತಗಳು (ಸೈಕ್ಲೋನ್) ಬಂಗಾಳಕೊಲ್ಲಿಯಲ್ಲಿ ಸಂಭವಿಸುತ್ತವೆ.

<u>ಎರಡು ಅಂಕದ ಪ್ರಶ್ನೆಗಳು:–</u>

**1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

ಸ್ಥಾನ, ಜಲರಾಶಿಗಳು, ಮೇಲ್ಮೈ ಲಕ್ಷಣ ಮತ್ತು ಮಾನ್ಸೂನ್ ಮಾರುತಗಳು ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ.

**2. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು?**

1. ಚಳಿಗಾಲ (ಡಿಸೆಂಬರ್–ಫೆಬ್ರವರಿ)
2. ಬೇಸಿಗೆ ಕಾಲ (ಮಾರ್ಚ್–ಮೇ)
3. ಮಳೆಗಾಲ (ಜೂನ್–ಸೆಪ್ಟೆಂಬರ್)
4. ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ (ಸೆಪ್ಟೆಂಬರ್ ಮಧ್ಯ–ನವೆಂಬರ್)

**3. ನೈಋತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯೆಗಳನ್ನು ವಿವರಿಸಿ.**

ಬೇಸಿಗೆಯ ಅಂತ್ಯಾವಧಿಯಿಂದ ಉಷ್ಣಾಂಶವು ಹೆಚ್ಚಾಗುವುದರಿಂದ ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುತ್ತದೆ. ಇದಕ್ಕೆ ಪ್ರತಿಯಾಗಿ ಹಿಂದೂಸಾಗರದಲ್ಲಿ ಅಧಿಕ ಒತ್ತಡವಿರುತ್ತದೆ. ಆದ್ದರಿಂದ ತೇವಾಂಶಭರಿತ ಮಾರುತಗಳು ನೈಋತ್ಯದಿಂದ ಭಾರತದದೆಡೆಗೆ ಬೀಸುತ್ತವೆ. ಇವು ದೇಶದ ವಿವಿಧ ಭಾಗಗಳಿಗೆ ಮಳೆಯನ್ನು ತರುತ್ತವೆ.

**4. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿ.**

ಭಾರತದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡ ರಹಿತವಾಗಿರುತ್ತದೆ. ದೇಶದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿಯಿರುತ್ತದೆ. ಜನವರಿ ಅತಿ ಶೀತವಾದ ಮಾಹೆಯಾಗಿರುತ್ತದೆ. ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಪರ್ವತಗಳಲ್ಲಿ ಅತಿ ಕಡಿಮೆ ಉಷ್ಣಾಂಶವು ದಾಖಲಾಗಿರುತ್ತದೆ.

**5. ಭಾರತದ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.**

ಕಛ್‌ನ ಪಶ್ಚಿಮ ಭಾಗ, ರಾಜಸ್ತಾನದ ಥಾರ್ ಮರುಭೂಮಿ ಹಾಗೂ ಅದರ ಸುತ್ತಮುತ್ತಲಿನ ಭಾಗಗಳಾದ ಪಶ್ಚಿಮದ ಪಂಜಾಬು, ಹರಿಯಾಣ ಮತ್ತು ಗುಜರಾತ್, ಉತ್ತರ ಜಾಸ್ಕರ್ ಶ್ರೇಣಿ, ಮತ್ತು ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು ಸೇರಿವೆ. ರಾಜಸ್ತಾನದ ಜೈಸಲ್ಮಾರ್‌ನಲ್ಲಿರುವ 'ರೂಯ್ಲಿ' ಅತಿ ಕಡಿಮೆ ಮಳೆ ಪಡೆಯುವ (8.3 ಸೆಂ.ಮೀ.) ಹಾಗೂ ಭಾರತ ಅತ್ಯಂತ ಶುಷ್ಕ ಪ್ರದೇಶವಾಗಿದೆ.

**6. ಮೇಘಾಲಯದ 'ಮಾಸಿನ್‌ರಾಮ್'ನಲ್ಲಿ ಭಾರತದಲ್ಲೇ ಅತಿ ಹೆಚ್ಚು ಮಳೆ ಪಡೆಯಲು ಕಾರಣವೇನು?**

ಬಂಗಾಳಕೊಲ್ಲಿಯ ಶಾಖೆಯು ಮೇಘಾಲಯ ಮತ್ತು ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಡುವುದರಿಂದ ಅಧಿಕ ಮಳೆ ಬೀಳುವುದು. ಅಲ್ಲದೇ ಅರಬ್ಬಿಸಮುದ್ರದ ಶಾಖೆಯೂ ಕೂಡ ಕೆಲವು ಮಳೆ ಮಾರುತಗಳನ್ನು ಹೊತ್ತು ತಂದು ಇಲ್ಲಿ ಹೆಚ್ಚು ಮಳೆ ಸುರಿಸುತ್ತದೆ. ಮೇಘಾಲಯದ 'ಮಾಸಿನ್‌ರಾಮ್'ನಲ್ಲಿ ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುತ್ತದೆ.

**7. ಮಾನ್ಸೂನ್ ಮಾರುತಗಳ ನಿರ್ಗಮನಕ್ಕೆ ಕಾರಣಗಳೇನು?**

ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗುವುದರಿಂದ ಭೂ ಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ಕ್ರಮೇಣ ಕ್ಷೀಣಗೊಂಡು ಅಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುವುದು. ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುವುದು. ಪರಿಣಾಮವಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ. ಅವು ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುವವು.

**8. ಭಾರತದಲ್ಲಿ ಅಧಿಕ ಮಳೆ ಪಡೆಯುವ ಭಾಗಗಳಾವುವು?**

ಎ) ಪಶ್ಚಿಮ ಘಟ್ಟಗಳ ಕಿರಿದಾದ ವಲಯ.
ಬಿ) ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಉತ್ತರಭಾಗ, ಬಿಹಾರ ಮತ್ತು ಪಶ್ಚಿಮಬಂಗಾಳ.
ಸಿ) ಈಶಾನ್ಯ ಭಾರತ. ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಮಾಸಿನ್‌ರಾಮ್ ಈ ಭಾಗದಲ್ಲಿದೆ. ಹಾಗೂ
ಡಿ) ಪಶ್ಚಿಮ ಸಮುದ್ರ ತೀರ ಪ್ರದೇಶ.

**9. ಭಾರತದ ನಕ್ಷೆ ಬಿಡಿಸಿ. ಈ ಪ್ರದೇಶಗಳನ್ನ ಗುರುತಿಸಿ.**

- ಕಾರ್ಗಿಲ್ ನ ಡ್ರಾಸ್
- ಗಂಗಾನಗರ
- ಮಾಸಿನ್ ರಾಮ್
- ಥಾರ್ ಮರುಭೂಮಿ
- ಜೈಸಲ್ಮೇರ್/ ರೂಯ್ಲಿ

**10. ಭಾರತದ ರೇಖಾ ನಕ್ಷೆಯನ್ನು ರಚಿಸಿ, ಅದರಲ್ಲಿ ಮಳೆಯ ಹಂಚಿಕೆಯನ್ನು ಗುರುತಿಸಿ.**

# ಅಧ್ಯಾಯ–4
# ಭಾರತದ ಮಣ್ಣುಗಳು

<u>ಬಹು ಆಯ್ಕೆಯ ಪ್ರಶ್ನೆಗಳು</u>

**1. ಇದು ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣಗೊಂಡ ಮಣ್ಣು.**

<u>ಅ) ಮೆಕ್ಕಲು ಮಣ್ಣು</u>
ಆ) ಕಪ್ಪು ಮಣ್ಣು.
ಇ) ಕೆಂಪು ಮಣ್ಣು.
ಈ) ಮರುಭೂಮಿ ಮಣ್ಣು

**2. ಭಾರತದ ಅತಿ ಹೆಚ್ಚು ಭಾಗ ವಿಸ್ತಾರವಾದ ಮಣ್ಣು.**

<u>ಅ) ಮೆಕ್ಕಲು ಮಣ್ಣು</u>
ಆ) ಕಪ್ಪು ಮಣ್ಣು.
ಇ) ಕೆಂಪು ಮಣ್ಣು.
ಈ) ಮರುಭೂಮಿ ಮಣ್ಣು

**3. ಇದು ರೀಗರ್ ಮತ್ತು ಹತ್ತಿಬೆಳೆಯುವ ಮಣ್ಣು ಎಂತಲೂ ಕರೆಸಿಕೊಳ್ಳುತ್ತದೆ.**

ಅ) ಮೆಕ್ಕಲು ಮಣ್ಣು
<u>ಆ) ಕಪ್ಪು ಮಣ್ಣು.</u>
ಇ) ಕೆಂಪು ಮಣ್ಣು.
ಈ) ಮರುಭೂಮಿ ಮಣ್ಣು

**4. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುವ ಮಣ್ಣಾಗಿದೆ.**

ಅ) ಮೆಕ್ಕಲು ಮಣ್ಣು
<u>ಆ) ಕಪ್ಪು ಮಣ್ಣು.</u>
ಇ) ಕೆಂಪು ಮಣ್ಣು.
ಈ) ಮರುಭೂಮಿ ಮಣ್ಣು

**5. ರಾಗಿ, ತೃಣಧಾನ್ಯ ಬೆಳೆಯಲು ಸೂಕ್ತವಾದ ಮಣ್ಣು ಇದು.**

ಅ) ಮೆಕ್ಕಲು ಮಣ್ಣು
ಆ) ಕಪ್ಪು ಮಣ್ಣು.
<u>ಇ) ಕೆಂಪು ಮಣ್ಣು.</u>

ಈ) ಮರುಭೂಮಿ ಮಣ್ಣು

**6. ಇದು ಕೃಷಿಗೆ ಅಷ್ಟೊಂದು ಸೂಕ್ತವಲ್ಲ.**

**ಅ) ಲ್ಯಾಟರೈಟ್ ಮಣ್ಣು**

ಆ) ಕಪ್ಪು ಮಣ್ಣು.

ಇ) ಕೆಂಪು ಮಣ್ಣು.

ಈ) ಪರ್ವತ ಮಣ್ಣು

**7. ಹೆಚ್ಚು ಉಷ್ಣಾಂಶ ಮತ್ತು ಹೆಚ್ಚು ಮಳೆ ಬೀಳುವಲ್ಲಿ ಉತ್ಪತ್ತಿಯಾಗುವ ಮಣ್ಣು.**

**ಅ) ಲ್ಯಾಟರೈಟ್ ಮಣ್ಣು**

ಆ) ಕಪ್ಪು ಮಣ್ಣು.

ಇ) ಕೆಂಪು ಮಣ್ಣು.

ಈ) ಪರ್ವತ ಮಣ್ಣು

**8. ಮರುಭೂಮಿ ಮಣ್ಣು ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ.**

ಅ) ಪಶ್ಚಿಮ ಘಟ್ಟ

ಆ) ಭಾರತದ ಮಧ್ಯಭಾಗ

ಇ) ಹಿಮಾಲಯ ಪರ್ವತ

**ಈ) ಭಾರತದ ವಾಯುವ್ಯ ಭಾಗ**

**9. ಪರ್ವತ ಮಣ್ಣು ಇದಕ್ಕೆ ಹೆಚ್ಚು ಸೂಕ್ತವಾಗಿದೆ.**

ಅ) ಖರ್ಜೂರ ಬೆಳೆಗೆ

ಆ) ರಾಗಿ, ತೃಣಧಾನ್ಯ ಬೆಳೆಗೆ

**ಇ) ಚಹ, ಕಾಫಿ**

ಈ) ಜೋಳ, ಹತ್ತಿ

**10. ಭಾರತದ ಅತಿ ಹೆಚ್ಚು ಮಳೆ ಬೀಳುವ ಮೇಘಲಯ ಪ್ರಸ್ಥಭೂಮಿಯಲ್ಲಿ ಈ ಮಣ್ಣು ಕಂಡುಬುತ್ತದೆ.**

**ಅ) ಲ್ಯಾಟರೈಟ್ ಮಣ್ಣು**

ಆ) ಕಪ್ಪು ಮಣ್ಣು.

ಇ) ಕೆಂಪು ಮಣ್ಣು.

ಈ) ಪರ್ವತ ಮಣ್ಣು

ಒಂದು ಅಂಕದ ಪ್ರಶ್ನೆಗಳು

**1. ಮಣ್ಣು ಎಂದರೇನು?**

ಖನಿಜ ಮತ್ತು ಜೈವಿಕಾಂಶಗಳ ಸಂಯೋಜನೆಯುಳ್ಳ ಭೂಮೇಲ್ಭಾಗದ ತೆಳು ಪದರವೇ ಮಣ್ಣು.

**2. ಭಾರತದ ಮಣ್ಣಿನ ವೈವಿಧ್ಯತೆಗೆ ಮೂಲವೇನು?**

ಭಾರತದ ವಿವಿಧ ಪ್ರಕಾರದ ಮಣ್ಣಿನ ಉತ್ಪತ್ತಿಯು ಮೂಲ ಶಿಲೆಗಳು, ಮೇಲ್ಮೈಲಕ್ಷಣ, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳಿಗೆ ಸಂಬಂಧಿಸಿದೆ. ಹೀಗಾಗಿ ಭಾರತದ ಮಣ್ಣಿನಲ್ಲಿ ವೈವಿಧ್ಯವಿದೆ.

**3. ಮೆಕ್ಕಲು ಮಣ್ಣಿನ ಉತ್ಪತ್ತಿಗೆ ಕಾರಣವೇನು?**

ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತ್ತದೆ.

**4. ಮೆಕ್ಕಲು ಮಣ್ಣಿನಲ್ಲಿ ಬೆಳೆಯುವ ಮುಖ್ಯ ಬೆಳೆಗಳು ಯಾವುವು?**

ಗೋಧಿ, ಭತ್ತ, ಕಬ್ಬು, ಹತ್ತಿ, ಸೆಣಬು, ಆಲೂಗೆಡ್ಡೆ ಮತ್ತು ತರಕಾರಿಗಳು.

**5. ನದಿ ಬಯಲು ಪ್ರದೇಶಗಳಲ್ಲಿ ಕಂಡುಬರುವ ಮಣ್ಣುಯಾವುದು?**

ಮೆಕ್ಕಲು ಮಣ್ಣು

**6. ಬಸಾಲ್ಟ ಶಿಲಾಕಣಗಳಿಂದಾದ ಮಣ್ಣು ಯಾವುದು?**

'ಕಪ್ಪು ಹತ್ತಿ ಮಣ್ಣು'

**7. ಕಪ್ಪು ಮಣ್ಣು ಕಡು ಕಪ್ಪು/ ಬೂದು ಬಣ್ಣಕ್ಕೆ ಕಾರಣವೇನು?**

ಕಪ್ಪು ಮಣ್ಣು ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿಯಾಗಿರುತ್ತದೆ. ಇದು ಮೂಲತಃ ಕಪ್ಪಾಗಿರುವ ಕಾರಣ ಇದರಿಂದ ಉತ್ಪತ್ತಿಯಾದ ಇದು ಕಡು ಕಪ್ಪು/ ಬೂದು ಬಣ್ಣ ಹೊಂದಿದೆ.

**8. ಕಪ್ಪು ಮಣ್ಣಿನಲ್ಲಿ ಬೆಳೆಯುವ ಮುಖ್ಯ ಬೆಳೆಗಳು ಯಾವುವು?**

ಹತ್ತಿ, ಕಬ್ಬು, ಜೋಳ, ಮೆಕ್ಕೆಜೋಳ, ದ್ವಿದಳಧಾನ್ಯ, ಗೋಧಿ ಮತ್ತು ಮೆಣಸಿನಕಾಯಿ ಬೆಳೆಗಳು.

**9. ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ ಕಂಡುಬರುವ ಮಣ್ಣು ಯಾವುದು?**

'ಕಪ್ಪು ಹತ್ತಿ ಮಣ್ಣು'

**10. ಕೆಂಪು ಮಣ್ಣಿನಲ್ಲಿ ಬೆಳೆಯುವ ಮುಖ್ಯ ಬೆಳೆಗಳು ಯಾವುವು?**

ಕೆಂಪುಮಣ್ಣು ರಾಗಿ, ತೃಣಧಾನ್ಯ, ಶೇಂಗ, ತಂಬಾಕು ಮತ್ತು ಆಲೂಗೆಡ್ಡೆಗಳ ಬೇಸಾಯಕ್ಕೆ ಸೂಕ್ತವಾದುದು.

**11. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಉತ್ಪತ್ತಿಯಾಗುವ ಮಣ್ಣು ಯಾವುದು?**

ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ).

**12. ಲ್ಯಾಟರೈಟ್ ಮಣ್ಣಿನ ಹಂಚಿಕೆಯನ್ನು ತಿಳಿಸಿ.**

ಲ್ಯಾಟರೈಟ್ ಮಣ್ಣು ಹೆಚ್ಚಾಗಿ ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು, ಛೋಟನಾಗಪುರ ಪ್ರಸ್ಥಭೂಮಿ, ಮೇಘಾಲಯ ಪ್ರಸ್ಥಭೂಮಿ, ರಾಜಮಹಲ್ ಬೆಟ್ಟಗಳು, ವಿಂಧ್ಯಾ ಮತ್ತು ಸಾತ್ಪುರ ಸರಣಿಗಳಲ್ಲಿ ಹಂಚಿಕೆಯಾಗಿದೆ.

**13. ಲ್ಯಾಟರೈಟ್ ಮಣ್ಣಿನಲ್ಲಿ ಬೆಳೆಯುವ ಮುಖ್ಯ ಬೆಳೆಗಳು ಯಾವುವು?**

ಗೋಡಂಬಿ, ರಬ್ಬರ್, ಚಹ, ಕಾಫಿ ಮತ್ತು ಭತ್ತ

**14. ಭಾರತದ ವಾಯುವ್ಯ ಭಾಗದಲ್ಲಿ ಕಂಡುಬರುವ ಮಣ್ಣಿನ ವಿಧ ಯಾವುದು?**

ಮರುಭೂಮಿ ಮಣ್ಣು.

**15. ನೆಡುತೋಟದ ಬೆಳೆಗಳಿಗೆ ಉತ್ತಮವಾದ ಮಣ್ಣು ಯಾವುದು?**

ಪರ್ವತ ಮಣ್ಣು

**16. ಮಣ್ಣಿನ ಸವೆತ ಎಂದರೇನು?**

ನೈಸರ್ಗಿಕ ಕರ್ತೃಗಳಿಂದ ಮಣ್ಣಿನ ಸ್ತರದ ಮೇಲ್ಭಾಗವು ಕೊಚ್ಚಿಹೋಗುವುದನ್ನು ಮಣ್ಣಿನ ಸವೆತವೆನ್ನುವರು

**17. ಮಣ್ಣಿನ ಸವೆತದ ಯಾವುದಾದರೂ ಒಂದು ಕಾರಣ ತಿಳಿಸಿ.**

ಎ) ಅರಣ್ಯನಾಶ.

ಬಿ) ಅತಿಯಾಗಿ ಮೇಯಿಸುವುದು.

ಸಿ) ವರ್ಗಾವಣೆ ಬೇಸಾಯ ಪದ್ಧತಿ.

ಡಿ) ಅವೈಜ್ಞಾನಿಕ ಬೇಸಾಯ ಪದ್ಧತಿ.

ಇ) ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

**18. ಮಣ್ಣಿನ ಸಂರಕ್ಷಣೆ ಎಂದರೇನು?**
ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದನ್ನು 'ಮಣ್ಣಿನ ಸಂರಕ್ಷಣೆ' ಎನ್ನುವರು.

**ಭಾರತದ ನಕ್ಷೆ ಬಿಡಿಸಿ ಈ ಕೆಳಗಿನ ಪ್ರದೇಶಗಳನ್ನು/ ಮಣ್ಣಿನ ಹಂಚಿಕೆಯ ಭಾಗಗಳನ್ನು ಅದರಲ್ಲಿ ಗುರುತಿಸಿ.**
1. ಪೂರ್ವಘಟ್ಟಗಳು,
2. ಪಶ್ಚಿಮ ಘಟ್ಟಗಳು,
3. ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್.

# 5. ಭಾರತದ ಅರಣ್ಯ ಸಂಪತ್ತು

<u>**ಬಹು ಆಯ್ಕೆಯ ಪ್ರಶ್ನೆಗಳು**</u>

**1. ಎತ್ತರವಾದ ಮರಗಳುಳ್ಳ ದಟ್ಟವಾದ ಕಾಡುಗಳನ್ನ ಇದು ಹೊಂದಿದೆ.**
<u>**ಅ) ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು**</u>
ಆ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
ಇ) ಪರ್ವತ ಕಾಡು
ಈ) ಮ್ಯಾಂಗ್ರೋವ್ ಕಾಡುಗಳು

**2. ಶ್ರೀಗಂಧ, ತೇಗ, ಸಾಲೆ, ಕೆಂದಾಳ, ತಪಸಿ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಮತ್ತು ಹುಣಸೆ ಮರಗಳನ್ನು ಹೊಂದಿರುವ ಕಾಡುಗಳು**
ಅ) ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು

<u>**ಆ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.**</u>
ಇ) ಪರ್ವತ ಕಾಡು
ಈ) ಮ್ಯಾಂಗ್ರೋವ್ ಕಾಡುಗಳು

**3. ಇದಕ್ಕೆ ಪರ್ಣಪಾತಿ/ಮಾನ್ಸೂನ್ ಕಾಡು ಎನ್ನುವರು**
ಅ) ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು

<u>**ಆ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.**</u>
ಇ) ಪರ್ವತ ಕಾಡು
ಈ) ಮ್ಯಾಂಗ್ರೋವ್ ಕಾಡುಗಳು

**4. ಸುಂದರಿ ಮರಗಳು/ ಸುಂದರ್ ಬನ್ ಪ್ರದೇಶಗಳು ಈ ಕಾಡಿನಲ್ಲಿವೆ.**
ಅ) ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು

ಆ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
ಇ) ಪರ್ವತ ಕಾಡು
<u>**ಈ) ಮ್ಯಾಂಗ್ರೋವ್ ಕಾಡುಗಳು**</u>

**5. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು ಸದಾ ಹಸಿರಾಗಿ ಕಾಣಲು ಕಾರಣ.**
ಅ) ತೇಗ, ಬೀಟೆ ಮರಗಳು ಹೆಚ್ಚಾಗಿವೆ.
ಆ) ಇಲ್ಲಿ 200 ಸೆಂ.ಮೀ ಗಿಂತಲೂ ಹೆಚ್ಚು ವಾರ್ಷಿಕ ಮಳೆಯಾಗುತ್ತದೆ.
**ಇ) ಮರಗಿಡಗಳು ಯಾವುದೇ ಒಂದೇ ಅವಧಿಯಲ್ಲಿ ಎಲೆಗಳನ್ನು ಉದುರಿಸುವುದಿಲ್ಲ.**
ಈ) ಇಲ್ಲಿ ಮರಗಳು ಎತ್ತರವಾಗಿದ್ದು, ದಟ್ಟ ಕಾಡು ಇದೆ.

**6. ಭಾರತದ ಭೌಗೋಳಿಕ ಪ್ರದೇಶದ ______ ರಷ್ಟು ಅರಣ್ಯ ಇದೆ.**
ಅ) 33.3 %    <u>**ಆ) 23.3 %**</u>
ಇ) 23.6 %    ಈ) 29.5 %

**7. ಹೆಚ್ಚು ಅರಣ್ಯ ಹೊಂದಿರುವ ರಾಜ್ಯ : ಮಧ್ಯಪ್ರದೇಶ : : ಕಡಿಮೆ ಅರಣ್ಯ ಹೊಂದಿರುವ ರಾಜ್ಯ : ________**
<u>**ಅ) ಗೋವಾ**</u>    ಆ) ರಾಜಸ್ಥಾನ
ಇ) ಪಂಜಾಬ್    ಈ) ಅಸ್ಸಾಂ

**8. ಕಾಜಿರಂಗ : ಅಸ್ಸಾಂ : : ಗಿರ್ : ________**
ಅ) ಪಶ್ಚಿಮ ಬಂಗಾಳ    <u>**ಆ) ಗುಜರಾತ್**</u>
ಇ) ಕರ್ನಾಟಕ    ಈ) ಕೇರಳ

<u>**ಒಂದು ಅಂಕದ ಪ್ರಶ್ನೆಗಳು**</u>

**1. ಅರಣ್ಯಗಳು ಎಂದರೇನು?**
ನೈಸರ್ಗಿಕ ಅಥವಾ ಮಾನವ ಪೋಷಿತ ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ' (ಕಾಡು) ಎಂದು ಕರೆಯಲಾಗಿದೆ.

**2. ಮರುಭೂಮಿ ಸಸ್ಯವರ್ಗವಿರುವ ಪ್ರಧೇಶಗಳು ಯಾವುವು?**
ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು

**3. ಅರಣ್ಯ ಸಂರಕ್ಷಣೆ ಎಂದರೇನು?**
ಅರಣ್ಯನಾಶ, ಮಿತಿಮೀರಿದ ಅರಣ್ಯ ಸಂಪತ್ತಿನ ಸಮಗ್ರ ನಿಯಂತ್ರಣ ಹಾಗೂ ಅರಣ್ಯ ನಿರ್ವಹಣೆ ಪ್ರಕ್ರಿಯೆಗಳಿಗೆ 'ಅರಣ್ಯ ಸಂರಕ್ಷಣೆ' ಎನ್ನುವರು.

**4. ವನ್ಯಜೀವಿಧಾಮಗಳೆಂದರೇನು?**
ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮಗಳೆಂದು ಕರೆಯುವರು.

**5. ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.**
ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನಗಳು ಎನ್ನುವರು.

**6. ಅರಣ್ಯಗಳ ವಿಧಗಳ ನಿರ್ಧಾರಕ ಅಂಶಗಳಾವುವು?**
ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳು.

**7. ಕರ್ನಾಟಕದ ವನ್ಯಜೀವಿಧಾಮಗಳಾವುವು?**
ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ.

**8. ಭಾರತದ ಮುಖ್ಯ ವನ್ಯಜೀವಿಧಾಮಗಳಾವುವು?**
ಅಣ್ಣಾಮಲೈ ಮತ್ತು ಮದುಮಲೈ (ತಮಿಳುನಾಡು), ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ (ಕರ್ನಾಟಕ), ಪೆರಿಯಾರ್ (ಕೇರಳ), ನಾಗಾರ್ಜುನ ಸಾಗರ (ತೆಲಂಗಾಣ), ಭರತ್‌ಪುರ ಮತ್ತು ರಾಥಂಬೋರ (ರಾಜಸ್ತಾನ), ಮಾನಸ (ಅಸ್ಸಾಂ), ಜಲ್ದಪಾರ (ಪ.ಬಂಗಾಳ) ಮೊದಲಾದವು.

**9. ಭರತದ ಪ್ರಮುಖ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.**
ಕಾಜಿರಂಗ (ಅಸ್ಸಾಂ), ಸುಂದರಬನ (ಪ.ಬಂಗಾಳ), ಕಾರ್ಬೆಟ್ (ಉತ್ತರಾಂಚಲ), ಗಿರ್ (ಗುಜರಾತ್), ಕನ್ಹಾ (ಮಧ್ಯಪ್ರದೇಶ), ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ (ಕರ್ನಾಟಕ), ಸರಿಕ್ಷ (ರಾಜಸ್ತಾನ) ಧುದವ (ಉತ್ತರ ಪ್ರದೇಶ) ತೊಡೋಬ (ಮಹಾರಾಷ್ಟ್ರ) ಇತ್ಯಾದಿ.

<u>**ಎರಡು ಅಂಕದ ಪ್ರಶ್ನೆಗಳು**</u>

**1. ಜೀವ ಸಂರಕ್ಷಣಾವಲಯಗಳ ಪ್ರಮುಖ ಉದ್ದೇಶಗಳೇನು?**

ಜೀವಿಗಳ ಸಂರಕ್ಷಣೆ, ಸಂಶೋಧನೆ, ಶಿಕ್ಷಣ ಮತ್ತು ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳು.

**2. ಅರಣ್ಯಗಳ ಪ್ರಾಮುಖ್ಯತೆ ತಿಳಿಸಿ. ಅಥವಾ ಕಾಡು ರಕ್ಷಣೆಯಿಂದಾಗುವ ಲಾಭಗಳೇನು?**

- ಪ್ರತ್ಯಕ್ಷವಾಗಿ ಮರದ ವಸ್ತುಗಳನ್ನು ಪೂರೈಸುತ್ತವೆ.
- ಅವು ಸೌದೆ ಚೌಬೀನೆ ಮತ್ತು ಕೈಗಾರಿಕಾ ಕಚ್ಚಾಪದಾರ್ಥಗಳಾಗಿ ಬಳಕೆಯಾಗುವವು.
- ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.
- ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ, ಹರಿಯುವ ನೀರಿನ ರಭಸವನ್ನು ಮಿತಗೊಳಿಸಿ, ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
- ಮರುಭೂಮೀಕರಣವನ್ನು ತಡೆಯುತ್ತವೆ,
- ಮಣ್ಣಿನ ಫಲವತ್ತತೆಯ ವೃದ್ಧಿಗೆ ನೆರವಾಗುತ್ತವೆ. ವಾಯುಗುಣವನ್ನು ಸಮತೋಲನ ಗೊಳಿಸಲು ಮತ್ತು ಪರಿಯಾವರಣ (ಎಕಾಲಾಜಿಕಲ್) ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ.
- ಅವು ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

**3. ಭಾರತದ ಅರಣ್ಯದ ಮುಖ್ಯ ವಿಧಗಳಾವುವು?**

1. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು.
2. ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
3. ಕುರುಚಲು ಸಸ್ಯ ಮತ್ತು ಹುಲ್ಲುಗಾವಲು.
4. ಮರುಭೂಮಿ ಸಸ್ಯವರ್ಗ.
5. ಪರ್ವತ ಕಾಡುಗಳು.
6. ಮ್ಯಾಂಗ್ರೋವ್ ಕಾಡುಗಳು.

**4. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು ಮತ್ತು ಮರುಭೂಮಿ ಕಾಡುಗಳ ಮುಖ್ಯ ವ್ಯತ್ಯಾಸ ತಿಳಿಸಿ.**

**ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು–**

250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ.

ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಹಾಗೂ ಈಶಾನ್ಯ ರಾಜ್ಯ ಮತ್ತು ಅಂಡಮಾನ್-ನಿಕೋಬರ್ ದ್ವೀಪಗಳಲ್ಲಿ ಹಂಚಿಕೆಯಾಗಿವೆ.

ಕಾಡುಗಳು ದಟ್ಟವಾಗಿವೆ ಮತ್ತು ಇಲ್ಲಿ ಮರಗಳು ಎತ್ತರಕ್ಕೆ ಬೆಳೆಯುತ್ತವೆ.

ಅವು ಸದಾ ಹಸಿರಾಗಿರುತ್ತವೆ.

ತೇಗ, ಬೀಟೆ, ಎಬೋನಿ, ಮಹೋಗನಿ, ಗುರ್ಜಾನ್ ಮತ್ತು ಚಂಪ ಇಲ್ಲಿ ಬೆಳೆಯುವ ಪ್ರಮುಖ ಮರಗಳು.

**ಮರುಭೂಮಿ ಕಾಡುಗಳು–**

10–50 ಸೆಂ.ಮೀ. ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ.

ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲಭಾಗಗಳು ಮತ್ತು ದಖನ್ ಪ್ರಸ್ಥಭೂಮಿಗಳು ಸೇರುತ್ತವೆ.

ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು ಇಲ್ಲಿ ಕಂಡುಬರುತ್ತವೆ.

**5. ಮಾನ್ಸೂನ್ ಕಾಡುಗಳು ಮತ್ತು ಮ್ಯಾಂಗ್ರೋವ್ ಕಾಡುಗಳ ವ್ಯತ್ಯಾಸ ಪಟ್ಟಿ ಮಾಡಿ.**

**ಮಾನ್ಸೂನ್ ಕಾಡುಗಳು–**

100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ. ಪಶ್ಚಿಮ ಘಟ್ಟಗಳ ಪೂರ್ವ ಭಾಗ, ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆ.

ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ.

ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ

**ಮ್ಯಾಂಗ್ರೋವ್ ಕಾಡುಗಳು–**

ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ

ಹೆಚ್ಚು ಕಂಡುಬರುತ್ತವೆ.

ಸುಂದರಿ, ಬೆತ್ತ, ಜರಿಗಿಡ, ತಾಳೆ, ಕಂದಾಳೆ, ಕೇದಿಗೆ ಬೆಳೆ.

**6. ಹಿಮಾಲಯದ ಅರಣ್ಯಗಳನ್ನು ವಿವರಿಸಿ./ ಪರ್ವತ ಕಾಡುಗಳ ಬಗ್ಗೆ ಬರೆಯಿರಿ.**

ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯುವ ಸಸ್ಯ ಮತ್ತು ಮರಗಳನ್ನು 'ಪರ್ವತ ಕಾಡುಗಳು' ಎನ್ನುವರು.

ಅವು ಭಾರತದಲ್ಲಿ ಹಿಮಾಲಯ ಪರ್ವತಗಳು ಹಾಗೂ ಸ್ವಲ್ಪಮಟ್ಟಿಗೆ ನೀಲಗಿರಿ ಬೆಟ್ಟಗಳಲ್ಲಿ ಕಂಡುಬರುತ್ತವೆ.

ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ; ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್.

**7. ಮರುಭೂಮಿ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ.**

- 10–50 ಸೆಂ.ಮೀ. ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ.
- ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲಭಾಗಗಳು ಮತ್ತು ದಖನ್ ಪ್ರಸ್ಥಭೂಮಿಗಳು ಸೇರುತ್ತವೆ.
- ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು ಇಲ್ಲಿ ಕಂಡುಬರುತ್ತವೆ.

**8. ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳನ್ನು ತಿಳಿಸಿ.**

ಕೃಷಿ ಕ್ಷೇತ್ರದ ವಿಸ್ತರಣೆ, ರಸ್ತೆ ಮತ್ತು ರೈಲು ಮಾರ್ಗಗಳು ಹಾಗೂ ನೀರಾವರಿ ಯೋಜನೆಗಳ ನಿರ್ಮಾಣ, ಕೈಗಾರಿಕೀಕರಣ, ನಗರೀಕರಣ, ಅತಿಯಾಗಿ ಮೇಯಿಸುವಿಕೆ, ಕಾಡ್ಗಿಚ್ಚು ಮೊದಲಾದವು.

**9. ಭಾರತದ ಜೀವಿ ಸಂರಕ್ಷಣಾ ವಲಯಗಳಾವುವು?**

ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬರ್, ಮನ್ನಾರ್‌ಖಾರಿ, ಸುಂದರಬನ, ಸಿಮಿಲಿಪಾಲ್, ಕಾಂಚನಜಂಗ, ಪಚಮ್ಹಾರಿ, ಅಗಸ್ತ್ಯಮಲೈ, ದಿಬ್ರು, ಸೈಖೋವ, ದಿಬಾಂಗ್ ಇತ್ಯಾದಿ.

**10. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಗುರುತಿಸಿ.**

ಅ) ಜೀವಿ ಸಂರಕ್ಷಣಾ ವಲಯಗಳು
ಆ) ಸ್ವಾಭಾಮಿಕ ಸಸ್ಯವರ್ಗಗಳು.
ಇ) ವನ್ಯ ಜೀವಿಧಾಮಗಳು
ಈ) ರಾಷ್ಟ್ರೀಯ ಉದ್ಯಾನಗಳು
ಉ) ಪ್ರಮುಖ ರಾಷ್ಟ್ರೀಯ ಉದ್ಯಾನಗಳು.

# 6. ಭಾರತದ ಜಲಸಂಪನ್ಮೂಲಗಳು

**ಬಹು ಆಯ್ಕೆಯ ಪ್ರಶ್ನೆಗಳು**

**1. ಇದು ಭಾರತದ ಅತಿ ಉದ್ದವಾದ ನದಿ.**

**ಅ) ಗಂಗಾ ನದಿ** ಆ) ಸಿಂದೂನದಿ

ಇ) ಬ್ರಹ್ಮಪುತ್ರ ಈ) ಗೋದಾವರಿ ನದಿ.

**2. ಇವುಗಳಲ್ಲಿ ಅತಿ ಉದ್ದವಾದ ನದಿ.**

ಅ) ಗಂಗಾ ನದಿ **ಆ) ಸಿಂಧೂನದಿ**

ಇ) ಬ್ರಹ್ಮಪುತ್ರ ಈ) ಗೋದಾವರಿ ನದಿ.

**3. ದಕ್ಷಿಣ ಭಾರತದ ಅತಿ ಉದ್ದವಾದ ನದಿ.**

ಅ) ಗಂಗಾ ನದಿ ಆ) ಸಿಂದೂನದಿ

ಇ) ಬ್ರಹ್ಮಪುತ್ರ **ಈ) ಗೋದಾವರಿ ನದಿ.**

**4. ಭಾರತದ ನೀರಾವರಿಯಲ್ಲಿ ಪ್ರಮುಖ / ಅತಿ ದೊಡ್ಡ ನೀರಾವರಿ ವಿಧಾನ.**

**ಅ) ಬಾವಿ** ಆ) ಕಾಲುವೆ

ಇ) ಕೆರೆ ಈ) ಹನಿ ನೀರಾವರಿ.

**5. ಇಂದು ಭಾರತದಲ್ಲಿ ಅತಿ ಹೆಚ್ಚು ಪ್ರಚಲಿತಗೊಂಡ ನೀರಾವರಿ ವಿಧಾನ.**

ಅ) ತೆರೆದ ಬಾವಿ ಆ) ಕಾಲುವೆ

**ಇ) ಕೊಳವೆಬಾವಿ** ಈ) ಕೆರೆ

**6. ಇದರ ನಿರ್ಮಾಣ ಮತ್ತು ನಿರ್ವಹಣೆ ಜವಾಬ್ದಾರಿ ಸರ್ಕಾರ ಮಾಡಬೇಕಾಗುತ್ತದೆ.**

ಅ) ಬಾವಿ **ಆ) ಕಾಲುವೆ**

ಇ) ಕೆರೆ ಈ) ಹನಿ ನೀರಾವರಿ.

**7. ಭಾರತದಲ್ಲಿ ಇತ್ತೀಚೆಗೆ ಕೆರೆ ನೀರಾವರಿ ಕಡಿಮೆ ಪ್ರಾಮುಖ್ಯತೆ ಪಡೆಯಲು ಕಾರಣ.**

ಅ) ಹೂಳು ತುಂಬುವಿಕೆ

ಆ) ವೆಚ್ಚದಾಯಕ

**ಇ) ಕೆರೆಗಳು ಋತುಕಾಲಿಕವಾಗಿವೆ.**

ಈ) ಆಸಕ್ತಿ ಕಡಿಮೆ.

**8. ಇದೊಂದು ಅಂತರಾಷ್ಟ್ರೀಯ ಯೋಜನೆ.**

ಅ) ದಾಮೋದರ್ ಆ) ಬಾಕ್ರಾ–ನಂಗಲ್

ಇ) ಹಿರಾಕುಡ್ **ಈ) ಕೋಸಿ**

**ಒಂದು ಅಂಕದ ಪ್ರಶ್ನೆಗಳು**

**1. ನೀರಾವರಿ ಎಂದರೇನು?**

ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎಂದು ಕರೆಯಲಾಗಿದೆ.

**2. ಸಿಂಧೂನದಿಯ ಉಗಮಸ್ಥಾನ ಯಾವುದು?**

ಕೈಲಾಸ ಪರ್ವತ (ಟಿಬೆಟ್)

**3. ಹಿರಾಕುಡ್ ಅಣೆಕಟ್ಟನ್ನು ಯಾವ ನದಿಗೆ ಕಟ್ಟಲಾಗಿದೆ?**

ಮಹಾನದಿ.

**4. ವಿವಿದೋದ್ದೇಶ ನದಿ ಕಣಿವೆ ಯೋಜನೆ ಎಂದರೇನು?**

ವಿವಿಧ ಉದ್ದೇಶಗಳನ್ನು ಪೂರೈಸುವ ನದಿ ಕಣಿವೆ ಯೋಜನೆಗಳನ್ನು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದು ಕರೆಯಲಾಗಿದೆ.

**5. ಉತ್ತರಭಾರತದ ಪ್ರಮುಖ ನದಿಗಳ ಹೆಸರುಗಳನ್ನು ಬರೆಯಿರಿ.**

ಸಿಂಧೂ, ಗಂಗಾ, ಯಮುನಾ ಮತ್ತು ಬ್ರಹ್ಮಪುತ್ರ.

**6. ಸಿಂಧೂನದಿಯ ಉಪನದಿಗಳು ಯಾವುವು?**

ಝೀಲಂ, ಚೀನಾಬ್, ಬಿಯಾಸ್. ರಾವಿ ಮತ್ತು ಸಟ್ಲೇಜ್.

**7. ಗಂಗಾ ನದಿ ಎಲ್ಲಿ ಉಗಮ ಹೊಂದುತ್ತದೆ?**

ಗಂಗೋತ್ರಿ ಎಂಬಲ್ಲಿ ಉಗಮ ಹೊಂದುತ್ತದೆ.

**8. ಗಂಗಾ ನದಿಯ ಉದ್ದವಾದ ಉಪನದಿ ಯಾವುದು?**

ಯಮುನ.

**9. ದಕ್ಷಿಣ ಭಾರತದ ನದಿಗಳನ್ನು ಹೆಸರಿಸಿ.**

ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳು.

**10. ಗೋದಾವರಿ ನದಿ ಎಲ್ಲಿ ಉಗಮ ಹೊಂದುತ್ತದೆ?**

ತ್ರಯಂಬಕ.

**11. ಕೃಷ್ಣ ನದಿ ಎಲ್ಲಿ ಉಗಮ ಹೊಂದುತ್ತದೆ?**

ಮಹಬಲೇಶ್ವರ.

**12. ಕಾವೇರಿ ನದಿಯ ಉಪನದಿಗಳು ಯಾವುವು?**

ಹೇಮಾವತಿ, ಶಿಂಶಾ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಭವಾನಿಗಳು

**13. ಇತ್ತೀಚೆಗೆ ಬಂದಿರುವ ನೀರಾವರಿ ವಿಧಾನಗಳು ಯಾವುವು?**

ಹನಿ ನೀರಾವರಿ ಮತ್ತು ಸಿಂಪಡಣೆ ನೀರಾವರಿ

**14. ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆ ಯಾವುದು?**

ದಾಮೋದರ ನದಿ ಕಣಿವೆ ಯೋಜನೆ.

**15. 'ಬಂಗಾಳದ ದುಃಖದ ನದಿ' ಯಾವುದು?**

ದಾಮೋದರ ನದಿ.

**16. ಭಾರತದಲ್ಲೇ ಉದ್ದವಾದ ಅಣೆಕಟ್ಟು ಯಾವುದು?**

ಹಿರಾಕುಡ್ ಅಣೆಕಟ್ಟೆಯು ಭಾರತದಲ್ಲೇ ಉದ್ದವಾದುದು.

**17. ತುಂಗಭದ್ರ ಯೋಜನೆಯಿಂದ ನಿರ್ಮಾಣಗೊಂಡ ಜಲಾಶಯ ಯಾವುದು?**

"ಪಂಪಸಾಗರ"

**ಎರಡು ಅಂಕದ ಪ್ರಶ್ನೆಗಳು**

**1. ದಾಮೋದರ ನದಿಯನ್ನು 'ಬಂಗಾಳದ ದುಃಖಕಾರಿ ನದಿ' ಎಂದು ಕರೆಯಲಾಗಿತ್ತು.ಏಕೆ?**

ದಾಮೋದರ ನದಿ ಮಳೆಗಾಲದಲ್ಲಿ ಪ್ರವಾಹದಿಂದ ಉಕ್ಕಿ ಹರಿದಾಗ ಬೆಳೆಗಳು ಮತ್ತು ಜನ ವಸತಿಗಳಿಗೆ ಹಾನಿಯಾಗುತ್ತಿತ್ತು.

**2. ನೀರಾವರಿ ಎಂದರೇನು? ಭಾರತದ ಪ್ರಮುಖ ನೀರಾವರಿ ವಿಧಗಳನ್ನು ತಿಳಿಸಿ.**

ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎಂದು ಕರೆಯಲಾಗಿದೆ.

ಬಾವಿ, ಕಾಲುವೆ ಮತ್ತು ಕೆರೆ ನೀರಾವರಿ ವಿಧಾನಗಳ ಜೊತೆಗೆ ಇತ್ತೀಚೆಗೆ ಇತರೆ ವಿಧಾನಗಳಾದ ಹನಿ ನೀರಾವರಿ ಮತ್ತು ಸಿಂಪಡಣೆ ನೀರಾವರಿಗಳೂ ರೂಢಿಗೆ ಬಂದಿವೆ.

**3. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?**

- ಭಾರತವು ಕೃಷಿ ಪ್ರಧಾನ ದೇಶ.
- ಕೃಷಿಗೆ ಅವಶ್ಯಕವಾದಷ್ಟು ಹಾಗೂ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ.
- ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ.

- ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ.
- ಭತ್ತ, ಕಬ್ಬು, ಇತ್ಯಾದಿಗಳಲು ನೀರಾವರಿಯಿಂದ ಮಾತ್ರ ಸಾಧ್ಯ. ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ.

**4. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದರೇನು?**

ವಿವಿಧ ಉದ್ದೇಶಗಳನ್ನು ಪೂರೈಸುವ ನದಿ ಕಣಿವೆ ಯೋಜನೆಗಳನ್ನು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದು ಕರೆಯಲಾಗಿದೆ.

1) ನೀರಾವರಿ ಪೂರೈಕೆ.
2) ಪ್ರವಾಹಗಳ ನಿಯಂತ್ರಣ.
3) ಜಲ ವಿದ್ಯುತ್ ತಯಾರಿಕೆ.
4) ಮಣ್ಣಿನ ಸವೆತ ನಿಯಂತ್ರಣ.
5) ಒಳನಾಡಿನ ನೌಕಾಯಾನ.
6) ಒಳನಾಡಿನ ಮೀನುಗಾರಿಕೆ.

**5. ಬಾವಿ ನೀರಾವರಿಯ ಪ್ರಾಮುಖ್ಯತೆ ಮತ್ತು ಹಂಚಿಕೆ ಕುರಿತು ಬರೆಯಿರಿ.**

- ದೇಶದ ಶೇ. 60.7 ಭಾಗವು ಬಾವಿ ನೀರಾವರಿ ಹೊಂದಿದೆ.
- ಬಾವಿ ನೀರಾವರಿ ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ..
- ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಬಾವಿ ತೋಡಬಹುದು.
- ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ.
- ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.

**6. ಬ್ರಹ್ಮಪುತ್ರ ನದಿ ಕುರಿತು ಟಿಪ್ಪಣಿ ಬರೆಯಿರಿ.**

ಇದು ಮಾನಸ ಸರೋವರದ ಸಮೀಪ ಚೆಮಯಂಗ್‌ಡಂಗ್ ಎಂಬಲ್ಲಿ (ಟಿಬೆಟ್) ಉಗಮವಾಗುತ್ತದೆ. ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದು ಅರುಣಾಚಲ ಪ್ರದೇಶದಲ್ಲಿ ಕಿರಿದಾದ ಕಂದರವೊಂದರ ಮೂಲಕ ಭಾರತವನ್ನು ಪ್ರವೇಶಿಸುತ್ತದೆ. ಆನಂತರ ಪಶ್ಚಿಮಕ್ಕೆ ಹರಿಯುತ್ತಾ ಬಾಂಗ್ಲಾದೇಶದಲ್ಲಿ ದಕ್ಷಿಣಕ್ಕೆ ತಿರುಗಿ ಗಂಗಾನದಿಯೊಂದಿಗೆ ಸೇರುವುದು. ಇದರ ಉದ್ದ 2589 ಕಿ.ಮೀ.ಗಳು.

**7. ಆಲಮಟ್ಟಿ ಯೋಜನೆ ಕುರಿತು ವಿವರಿಸಿ.**

- ಆಲಮಟ್ಟಿಯು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಒಂದು ಗ್ರಾಮ.
- ಇಲ್ಲಿ ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಒಂದು ಅಣೆಕಟ್ಟು ಮತ್ತು 1 ಜಲವಿದ್ಯುತ್ ತಯಾರಿಕ ಕಾರ್ಯಾಗಾರ ಇದೆ.
- ಇದು ಉತ್ತರಕರ್ನಾಟಕದ ಅತಿದೊಡ್ಡ ವಿವಿದೋದ್ದೇಶ ನದಿ ಕಣಿವೆ ಯೋಜನೆಯಾಗಿದೆ.
- ನೀರಾವರಿ ಪೂರೈಕೆ, ಕುಡಿಯುವ ನೀರು ಸರಬರಾಜು ಮತ್ತು ಜಲವಿದ್ಯುಚ್ಛಕ್ತಿ ತಯಾರಿಕೆಗಳು ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ.

**8. ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನ ಪ್ರದೇಶಗಳನ್ನು ಗುರುತಿಸಿ.**

ಪ್ರಮುಖ ನೀರಾವರಿ ಯೋಜನೆಗಳು

ಪ್ರಮುಖ ನದಿಗಳು

# 7. ಭಾರತದ ಭೂ ಸಂಪನ್ಮೂಲಗಳು

**1. ಏಪ್ರಿಲ್ ಮೇ ತಿಂಗಳಲ್ಲಿ ದ್ವಿದಳ ಧಾನ್ಯ ಮತ್ತು ತರಕಾರಿಗಳನ್ನು ಬೆಳೆಸುವುಲು ಈ ಬಗೆಯ ಬೇಸಾಯಕ್ಕೆ ಉದಾಹರಣೆಯಾಗಿದೆ.**

ಅ) ಮುಂಗಾರು ಆ) ಹಿಂಗಾರು
<u>**ಇ) ಜಾಡ್**</u> ಈ) ಜೀವನಾಧಾರ ಬೇಸಾಯ

**2. ಈ ರಾಜ್ಯದಲ್ಲಿ ಅತಿ ಹೆಚ್ಚು ಭತ್ತ ಬೆಳೆಯಲಾಗುತ್ತದೆ.**

<u>**ಅ) ಪಶ್ಚಿಮ ಬಂಗಾಳ**</u> ಆ) ಆಂದ್ರ ಪ್ರದೇಶ
ಇ) ಉತ್ತರ ಪ್ರದೇಶ ಈ) ಕರ್ನಾಟಕ

**3. ಭಾರತದ ಪ್ರಮುಖ ನಾರಿನ ಬೆಳೆ.**

ಅ) ತಂಬಾಕು–ಕಬ್ಬು ಆ) ಭತ್ತ–ಕಬ್ಬು
<u>**ಇ) ಹತ್ತಿ–ಸೆಣಬು**</u> ಈ) ಚಹಾ–ಕಾಫಿ

**4. ನಿವ್ವಳ ಸಾಗುವಳಿ ಭೂಮಿ ________ ರಾಜ್ಯಗಳಲ್ಲಿ ಅತಿ ಕಡಿಮೆ ಇದೆ.**

ಅ) ಉತ್ತರ ಆ) ದಕ್ಷಿಣ
ಇ) ವಾಯುವ್ಯ <u>**ಈ) ಈಶಾನ್ಯ**</u>

**5. ಇದು ಭಾರತದಲ್ಲಿ ಅತಿ ಭಾಗದಲ್ಲಿ ಅವರಿಸಿದೆ.**

<u>**ಅ) ನಿವ್ವಳ ಸಾಗುವಳಿ ಪ್ರದೇಶ.**</u>
ಆ) ಅರಣ್ಯ ಪ್ರದೇಶ.
ಇ) ಕೃಷಿಗಾಗಿ ದೊರೆಯದ ಭೂಮಿ.
ಈ) ಪಾಳುಭೂಮಿ,

**6. ಇದು ಮಣ್ಣಿನ ಸಾರದ ಕೊರತೆಯಿಂದಾಗಿ ಕೃಷಿಗೆ ಬಳಕೆ ಮಾಡದೇ ಬಿಟ್ಟಿರುವ ಭೂಮಿಯಾಗಿದೆ.**

ಅ) ನಿವ್ವಳ ಸಾಗುವಳಿ ಪ್ರದೇಶ.
<u>**ಆ) ಬಳಕೆಯಾಗದ ಕೃಷಿ ಯೋಗ್ಯಭೂಮಿ.**</u>
ಇ) ಕೃಷಿಗಾಗಿ ದೊರೆಯದ ಭೂಮಿ.
ಈ) ಪಾಳುಭೂಮಿ,

**7. ಕಾನೂನು ಪ್ರಕಾರ ಅಮಾನ್ಯಗೊಂಡ ಬೇಸಾಯ ಪದ್ದತಿ.**

<u>**ಅ) ವರ್ಗಾವಣೆ ಬೇಸಾಯ**</u>
ಆ) ಸ್ಥಿರ ಬೇಸಾಯ.
ಇ) ಒಣ ಬೇಸಾಯ
ಈ) ಆರ್ದ್ರ ಬೇಸಾಯ

**8. ನೀರಾವರಿ ನೆರವಿಲ್ಲದೇ ಬೆಳೆಯಬಹುದಾದ ಬೇಸಾಯದ ವಿಧಾನ**

ಅ) ವರ್ಗಾವಣೆ ಬೇಸಾಯ
ಆ) ಸ್ಥಿರ ಬೇಸಾಯ.
ಇ) ಒಣ ಬೇಸಾಯ
<u>**ಈ) ಆರ್ದ್ರ ಬೇಸಾಯ**</u>

<u>ಒಂದು ಅಂಕದ ಪ್ರಶ್ನೆಗಳು</u>

**1. ಭೂಬಳಕೆ ಎಂದರೇನು?**

ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.

**2. ನೆಡುತೋಪು ಬೇಸಾಯ ಎಂದರೇನು?**

ವಿಶಾಲವಾದ ತೋಟಗಳಲ್ಲಿ ಹೆಚ್ಚು ಬಂಡವಾಳ ಹೂಡಿ, ವಾಣಿಜ್ಯ ಉದ್ದೇಶದಿಂದ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ 'ನೆಡುತೋಪು ಬೇಸಾಯ' ಎನ್ನುವರು.

**3. ಮುಂಗಾರು ಮತ್ತು ಹಿಂಗಾರು ಬೆಳೆಋತುಗಳು ಎಂದರೇನು?**

ಮಳೆಗಾಲದಲ್ಲಿ ಅಂದರೆ ಜೂನ್– ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ, ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುತ್ತದೆ.

**4. ಪಾನೀಯ ಬೆಳೆಗಳು ಎಂದರೇನು?**
ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು.

**5. ಭಾರತದ ಮುಖ್ಯ ಬೆಳೆ ಋತುಗಳು ಯಾವುವು?**
1) ಮುಂಗಾರು ಬೆಳೆ ಋತು.
2) ಹಿಂಗಾರು ಬೆಳೆ ಋತು ಮತ್ತು
3) ಜ್ಯಾಡ್ ಬೆಳೆ ಋತು.

**6. ಬೆಳೆಯಿಡುವ ಮಾದರಿ ಎಂದರೇನು?**
ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಳೆಯಿಡುವ ಮಾದರಿ' ಎನ್ನುವರು.

**7. ಮಿಶ್ರ ಬೇಸಾಯ ಎಂದರೇನು?**
ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿವಿಧಾನ.

**8. ಜೀವನಾಧಾರ ಬೇಸಾಯ ಎಂದರೇನು?**
ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ 'ಜೀವನಾಧಾರಿತ ಬೇಸಾಯ' ಎನ್ನುವರು.

**9. ತ್ವರಿತ/ ಸಾಂದ್ರ ಬೇಸಾಯ ಎಂದರೇನು?**
ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ ಪದ್ಧತಿಗೆ 'ಸಾಂದ್ರ ಬೇಸಾಯ' ಎನ್ನುವರು.

**10. ಕಬ್ಬು ಯಾವ ಕೈಗಾರಿಕೆಗಳಿಗೆ ಮುಖ್ಯ ಕಚ್ಚಾ ವಸ್ತುವಾಗಿದೆ,**
ಕಬ್ಬು, ಸಕ್ಕರೆ, ಬೆಲ್ಲ ಮತ್ತು ಖಂಡಸಾರಿಗಳ ತಯಾರಿಕೆಗೆ ಮುಖ್ಯ ಕಚ್ಚಾವಸ್ತು.

**11. ವಾಣಿಜ್ಯ ಬೆಳೆ ಎಂದರೇನು?**
ವ್ಯಾಪಾರದ ಉದ್ದೇಶಕ್ಕಾಗಿ ಹಣಗಳಿಕೆಯ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಕೃಷಿವಿಧಾನಕ್ಕೆ 'ವಾಣಿಜ್ಯ ಬೇಸಾಯ' ಎನ್ನುವರು.

**12. ನಾರು ಬೆಳೆ ಎಂದರೇನು?**
ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥ ಪೂರೈಸುವ ಬೆಳೆಗಳಿಗೆ 'ನಾರು ಬೆಳೆಗಳು' ಎನ್ನುವರು.

**13. ಪುಷ್ಪಕೃಷಿ ಎಂದರೇನು?**
ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ 'ಪುಷ್ಪ ಕೃಷಿ' ಎನ್ನುವರು.

**ಎರಡು ಅಂಕದ ಪ್ರಶ್ನೆಗಳು**

**1. ನೆಡುತೋಪು ಬೇಸಾಯ ಎಂದರೇನು? ಉದಾಹರಣೆ ಕೊಡಿ.**
ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ 'ನೆಡುತೋಪು ಬೇಸಾಯ' ಎನ್ನುವರು.
ಚಹ, ಕಾಫಿ, ರಬ್ಬರ್ ಮತ್ತು ತೆಂಗು ಪ್ರಮುಖ ನೆಡುತೋಪು ಬೆಳೆಗಳಾಗಿವೆ.

**2. ಖರೀಫ್ ಮತ್ತು ರಬಿ ಬೆಳೆ ಋತುಗಳ ನಡುವಿನ ವ್ಯತ್ಯಾಸ ತಿಳಿಸಿ.**
**ಮುಂಗಾರು (ಖರೀಫ್) ಬೆಳೆ ಋತು :**
ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.
ಜೂನ್– ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ. ಸೆಪ್ಟೆಂಬರ್– ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುತ್ತದೆ.
ಭತ್ತ, ರಾಗಿ, ಜೋಳ, ಹತ್ತಿ, ನೆಲಕಡಲೆ, ತಂಬಾಕು ಇತ್ಯಾದಿ.
**ಹಿಂಗಾರು (ರಾಬಿ)ಬೆಳೆ ಋತು :**
ಚಳಿಗಾಲದಲ್ಲಿ ಬೆಳೆಯುವ ಬೆಳೆ.
ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಿ, ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದು.
ಗೋಧಿ, ಬಾರ್ಲಿ, ಕಡಲೆ, ನಾರಗಸೆ, ಇತ್ಯಾದಿ.

**3. ಕಬ್ಬು ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?**
ಅಧಿಕ ಉಷ್ಣಾಂಶ 21° ರಿಂದ 26° ಸೆ ಮತ್ತು
ಅಧಿಕ ಮಳೆ 100 ರಿಂದ 150 ಸೆಂಮೀ ಅವಶ್ಯಕ.
ಕಬ್ಬು ಬೆಳೆಗೆ ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣುಗಳು ಸೂಕ್ತವಾದವು.
ನೀರಾವರಿ ಅವಶ್ಯ.

**4. ಭಾರತದಲ್ಲಿ ತೋಟಗಾರಿಕೆಯ ಮಹತ್ವ ಕುರಿತು ವಿವರಿಸಿ.**
- ಸಮರ್ಪಕ ಭೂಬಳಕೆ,
- ನೈಸರ್ಗಿಕ ಸಂಪನ್ಮೂಲಗಳ ಆದರ್ಶದಾಯಕ ಬಳಕೆ
- ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ.
- ಭಾರತದ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ.
- ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ ಮತ್ತು
- ಆಹಾರ ಭದ್ರತೆಗೆ ನೆರವಾಗುತ್ತದೆ.

**5. ಭಾರತದ ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**
ಭೂ ಮೇಲ್ಮೈ ಲಕ್ಷಣ, ವಾಯುಗುಣ, ಮಣ್ಣು, ಜನಸಾಂದ್ರತೆ, ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಅಂಶಗಳು.

**6. ಭಾರತದ ಭೂ ಬಳಕೆಯ ಮಾದರಿಯ ವಿಧಗಳಾವುವು?**
1. ನಿವ್ವಳ ಸಾಗುವಳಿ ಪ್ರದೇಶ.
2. ಅರಣ್ಯ ಪ್ರದೇಶ.
3. ಕೃಷಿಗಾಗಿ ದೊರೆಯದ ಭೂಮಿ.
4. ಪಾಳುಭೂಮಿ,
5. ಬಳಕೆಯಾಗದ ಕೃಷಿ ಯೋಗ್ಯಭೂಮಿ.
6. ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ.
7. ಇತರೆ

**7. "ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬು" ವಿಶ್ಲೇಷಿಸಿ.**
- ಭಾರತವು ಕೃಷಿ ಪ್ರಧಾನವಾದ ದೇಶ.
- ದೇಶದ ಶೇ. 65 ಭಾಗವು ಕೃಷಿ ಆಧರಿಸಿದೆ.
- ದೇಶದ ಆರ್ಥಿಕಾಭಿವೃದ್ಧಿಯೂ ಕೃಷಿಯ ಪ್ರಗತಿಯನ್ನಾಧರಿಸಿದೆ.

- ಭಾರತದಲ್ಲಿ ಕೃಷಿಯು ಜೀವನಾಧಾರಿತ ಪ್ರಮುಖ ಮೂಲವಾಗಿದೆ. ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿ.
- ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
- ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಇದು ಹಲವು ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು. ಉದಾ: ಹತ್ತಿ ಮತ್ತು ಸೆಣಬು ಜವಳಿ, ಸಕ್ಕರೆ ಕೈಗಾರಿಕೆ ಇತ್ಯಾದಿ.
- ಜೊತೆಗೆ ದೇಶದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೂ ಪ್ರಭಾವ ಬೀರುತ್ತದೆ.

**8. ಕೃಷಿಯ ವಿಧಾನಗಳಾವುವು?**

1. ಜೀವನಾಧಾರಿತ ಬೇಸಾಯ

ಅ) ವರ್ಗಾವಣೆ ಬೇಸಾಯ

ಆ) ಸ್ಥಿರ ಜೀವನಾಧಾರಿತ ಬೇಸಾಯ

2. ಸಾಂದ್ರ ಬೇಸಾಯ
3. ವಾಣಿಜ್ಯ ಬೇಸಾಯ
4. ಮಿಶ್ರಣ ಬೇಸಾಯ
5. ನೆಡುತೋಪು ಬೇಸಾಯ
6. ಒಣ ಬೇಸಾಯ
7. ಆರ್ದ್ರಬೇಸಾಯ
8. ನೀರಾವರಿ ಬೇಸಾಯ.

**9. ಭಾರತ ಮುಖ್ಯ ಬೆಳೆ ಋತುಗಳು ಯಾವುವು? ಯಾವುದಾದರೂ ಒಂದನ್ನು ವಿವರಿಸಿ.**

1) ಮುಂಗಾರು ಬೆಳೆ ಋತು.

2) ಹಿಂಗಾರು ಬೆಳೆ ಋತು ಮತ್ತು

3) ಜ್ಯಾಡ್ ಬೆಳೆ ಋತು.

1) ಮುಂಗಾರು ಬೆಳೆ ಋತು–

ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.

ಜೂನ್– ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ. ಸೆಪ್ಟೆಂಬರ್– ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುತ್ತದೆ.

ಭತ್ತ, ರಾಗಿ, ಜೋಳ, ಹತ್ತಿ, ನೆಲಕಡಲೆ, ತಂಬಾಕು ಇತ್ಯಾದಿ.

**10. ಬೆಳೆಯಿಡುವ ಮಾದರಿ ಎಂದರೇನು? ಅದರ ಕಾರಣಗಳೇನು?**

ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಳೆಯಿಡುವ ಮಾದರಿ' ಎನ್ನುವರು.

ಪ್ರಮುಖ ಕಾರಣಗಳೆಂದರೆ– ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಭೂಹಿಡುವಳಿಯ ಗಾತ್ರ, ನೀರಿನ ಪೂರೈಕೆ, ರೈತರ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನ ಇತ್ಯಾದಿ.

**11. ಪುಷ್ಪ ಬೇಸಾಯದ ಮಹತ್ವ ತಿಳಿಸಿ.**

ಇದು ರೈತರ ಆದಾಯ ಗಳಿಕೆ, ಉದ್ಯೋಗ ಅದರಲ್ಲೂ ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ ಹಾಗೂ ದೇಶದ ರಫ್ತು

ವ್ಯಾಪಾರದ ವೃದ್ಧಿಗೆ ನೆರವಾಗುತ್ತದೆ.

**12. ವಾಯುವ್ಯಭಾರತದಲ್ಲಿ ಗೋಧಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ. ಏಕೆ?**

- ಗೋಧಿ ಸಮಶೀತೋಷ್ಣ ವಲಯದ ಬೆಳೆ.
- ಇದರ ಬೇಸಾಯಕ್ಕೆ ಸಾಧಾರಣ ಉಷ್ಣಾಂಶ 10° ರಿಂದ 15° ಸೆ. ಮತ್ತು ವಾರ್ಷಿಕ ಮಳೆಯ ಹಂಚಿಕೆ 50 ರಿಂದ 70 ಸೆಂ.ಮೀ. ಬೇಕಾಗುತ್ತದೆ.
- ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತವಾದವು.
- ಈ ಎಲ್ಲಾ ಸನ್ನಿವೇಶಗಳು ಉತ್ತರ ಭಾರತದಲ್ಲಿದ್ದುದರಿಂದ ಇಲ್ಲಿ ಗೋದಿಯನ್ನು ಹೆಚ್ಚಾಗಿ ಬೆಳೆದು ಹೆಚ್ಚಾಗಿ ಉಪಯೋಗಿಸುತ್ತಾರೆ.

**13. ಬೀಳು ಭೂಮಿಯನ್ನು ವ್ಯವಸಾಯಕ್ಕೆ ಹೇಗೆ ಬಳಸಿಕೊಳ್ಳಬಹುದು?**

- ಬೀಳು ಭೂಮಿಯಲ್ಲಿ ಆಧುನಿಕ ಬೇಸಾಯ ವಿಧಾನಗಳನ್ನು ಉಪಯೋಗಿಸುವ ಮೂಲಕ,
- ನೀರಾವರಿ ಸೌಲಭ್ಯ ಒದಗಿಸುವ ಮೂಲಕ,
- ಉತ್ತಮ ಬೀಜ, ಗೊಬ್ಬರ, ರಾಸಾಯನಿಕ ಕೀಟನಾಶಕಗಳನ್ನು ಉಪಯೋಗಿಸುವ ಮೂಲಕ
- ಉತ್ತಮ ಗುಣಮಟ್ಟದ ಯಂತ್ರದ, ತಂತ್ರಜ್ಞಾನದ ಸಹಾಯದಿಂದ ವ್ಯವಸಾಯಕ್ಕೆ ಬಳಸಿಕೊಳ್ಳಬಹುದು.

**14. ಮಿಶ್ರ ಬೇಸಾಯದ ಲಕ್ಷಣಗಳಾವುವು?**

ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ನಡೆಯುತ್ತದೆ.

ವಾಣಿಜ್ಯ ಉದ್ದೇಶವನ್ನೂ ಕೂಡಾ ರೈತ ಹೊಂದಿರುತ್ತಾನೆ.

**15. ಭಾರತದಲ್ಲಿ ರೈತರು ಹೆಚ್ಚಾಗಿ ಜೂನ್–ಜುಲೈನಲ್ಲಿ ಬಿತ್ತನೆ ಮಾಡಿ, ಅಕ್ಟೋಬರ್ ನಲ್ಲಿ ಇಳುವರಿ ಪಡೆಯುತ್ತಾರೆ. ಏಕೆ?**

ಭಾರತದ ಶೇ 75 ಭಾಗ ಇದೇ ಅವಧಿಯಲ್ಲಿ ಮಳೆ ಪಡೆಯುವುದರಿಂದ ಭಾರತದ ರೈತರು ಹೆಚ್ಚಾಗಿ ಜೂನ್– ಜುಲೈನಲ್ಲಿ ಬಿತ್ತನೆ ಮಾಡಿ, ಅಕ್ಟೋಬರ್ ನಲ್ಲಿ ಇಳುವರಿ ಪಡೆಯುತ್ತಾರೆ.

**ಭಾರತದ ರೇಖಾ ನಕ್ಷೆಯನ್ನು ಬರೆದು ಅದರಲ್ಲಿ ಈ ಪ್ರದೇಶಗಳನ್ನು ಗುರುತಿಸಿ.**

ಹತ್ತಿ ಮತ್ತು ಚಹ ಬೆಳೆಯುವ ಪ್ರದೇಶಗಳು

ಕಬ್ಬು ಮತ್ತು ತಂಬಾಕು

ಬತ್ತ ಮತ್ತು ಗೋದಿ.

## 8. ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**<u>ಬಹುಆಯ್ಕೆ ಪ್ರಶ್ನೆಗಳು:</u>**

**1. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯ**

ಎ)ಕರ್ನಾಟಕ **<u>ಬಿ)ಒಡಿಶಾ</u>**

ಸಿ)ಆಂಧ್ರಪ್ರದೇಶ ಡಿ)ಮಹಾರಾಷ್ಟ್ರ

**2. ಭಾರತದಲ್ಲಿ ಅತ್ಯಧಿಕ ಮ್ಯಾಂಗನೀಸ್ ಅದಿರು ಉತ್ಪಾದಿಸುವ ರಾಜ್ಯ**

ಎ)ಕರ್ನಾಟಕ **<u>ಬಿ)ಒಡಿಶಾ</u>**

ಸಿ)ಆಂಧ್ರಪ್ರದೇಶ ಡಿ)ಮಹಾರಾಷ್ಟ್ರ

**3. ಭಾರತದಲ್ಲಿ ಅತ್ಯಧಿಕ ಬಾಕ್ಸೈಟ್ ಅದಿರು ಉತ್ಪಾದಿಸುವ ರಾಜ್ಯ**

ಎ)ಕರ್ನಾಟಕ <u>ಬಿ)ಒಡಿಶಾ</u>

ಸಿ)ಆಂಧ್ರಪ್ರದೇಶ ಡಿ)ಮಹಾರಾಷ್ಟ್ರ

**4. ಭಾರತದಲ್ಲಿ ಅತ್ಯಧಿಕ ಅಭ್ರಕವನ್ನು ಉತ್ಪಾದಿಸುವ ರಾಜ್ಯ**

ಎ)ಕರ್ನಾಟಕ ಬಿ)ಒಡಿಶಾ

<u>**ಸಿ)ಆಂಧ್ರಪ್ರದೇಶ**</u> ಡಿ)ಮಹಾರಾಷ್ಟ್ರ

**5. ಪ್ರಪಂಚದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ಮತ್ತು ರಫ್ತು ಮಾಡುವ ರಾಷ್ಟ್ರ.**

<u>ಎ) ಭಾರತ</u> **ಬಿ) ಚೀನಾ**

**ಸಿ) ರಷ್ಯಾ** **ಡಿ) ಜಪಾನ್**

**6. ಇತ್ತೀಚೆಗೆ ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆಂದರೆ**

ಎ)ಅಭ್ರಕದ ಉತ್ಪಾದನೆ ಹೆಚ್ಚಾಗಿದೆ

ಬಿ)ಅಭ್ರಕದ ನಿಕ್ಷೇಪಗಳು ಬರಿದಾಗಿವೆ

ಸಿ)ಗುಣಮಟ್ಟದ ಅಭ್ರಕ ಸಿಗುತ್ತಿಲ್ಲ

<u>**ಡಿ)ಹಲವು ರಾಷ್ಟ್ರಗಳು ಕೃತಕ ಅಭ್ರಕವನ್ನು ಉತ್ಪಾದಿಸುತ್ತಿವೆ**</u>

**7. ಭಾರತದ ಪ್ರಥಮ ಪರಮಾಣು ಶಕ್ತಿ ಕೇಂದ್ರ**

**ಎ)** ಕೈಗ **ಬಿ)** ನರೋರ

<u>ಸಿ) ತಾರಾಪುರ</u> **ಡಿ)** ಕಲ್ಪಾಕಂ

**8. ಕರ್ನಾಟಕದ ಪ್ರಮುಖ ಪರಮಾಣು ಶಕ್ತಿ ಕೇಂದ್ರ**

<u>ಎ) ಕೈಗ</u> **ಬಿ)** ನರೋರ

ಸಿ) ತಾರಾಪುರ **ಡಿ)** ಕಲ್ಪಾಕಂ

## <u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>

1. ಖನಿಜ ಎಂದರೇನು?
   ಖನಿಜವು ಒಂದು ನೈಸರ್ಗಿಕ ಅಜೈವಿಕ ಮೂಲಧಾತುವಾಗಿದ್ದು ಅದು ನಿಗದಿತ ರಾಸಾಯನಿಕ ಸಂಯೋಜನೆ ಮತ್ತು ಭೌತಿಕ ಗುಣ ಧರ್ಮಗಳನ್ನು ಹೊಂದಿರುತ್ತದೆ.
2. ಗಣಿಗಾರಿಕೆ ಎಂದರೇನು?
   ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು 'ಗಣಿಗಾರಿಕೆ' ಎನ್ನುವರು
3. ಕರ್ನಾಟಕದಲ್ಲಿ ಕಬ್ಬಿಣದ ನಿಕ್ಷೇಪವು ಎಲ್ಲೆಲ್ಲಿ ಕಂಡು ಬರುತ್ತದೆ?
   ಕೆಮ್ಮಣ್ಣುಗುಂಡಿ, ಹೊಸಪೇಟೆ, ಸೊಂಡೂರು, ಕುದುರೆಮುಖಗಳಲ್ಲಿ ಕಂಡು ಬರುತ್ತದೆ.
4. ಶಕ್ತಿ ಸಂಪನ್ಮೂಲಗಳೆಂದರೇನು?
   ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು' ಎಂದು ಕರೆಯಲಾಗಿದೆ.
5. ಕಲ್ಲಿದ್ದಲು ಹೇಗೆ ನಿರ್ಮಾಣಗೊಂಡಿದೆ?
   ಸಾವಿರಾರು ವರ್ಷಗಳ ಹಿಂದೆ ಭೂಗರ್ಭದಲ್ಲಿ ಹುದುಗಿ ಹೋಗಿದ್ದ ಸಸ್ಯಾವಶೇಷವು ಅಧಿಕ ಉಷ್ಣಾಂಶ ಮತ್ತು ಒತ್ತಡಗಳಿಂದ ಕಲ್ಲಿದ್ದಲಾಗಿ ಪರಿವರ್ತನೆಗೊಂಡಿದೆ.

## <u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>

1. ಮ್ಯಾಂಗನೀಸ್ ಅದಿರಿನ ಉಪಯೋಗಗಳಾವುವು?
   ಉಕ್ಕು ತಯಾರಿಕೆಗೆ ಉಪಯುಕ್ತ
   ಬ್ಯಾಟರಿ ತಯಾರಿಕೆಗೆ ಉಪಯುಕ್ತ
   ಬಣ್ಣ ತಯಾರಿಕೆಗೆ ಉಪಯುಕ್ತ
   ಗಾಜು ತಯಾರಿಕೆಗೆ ಉಪಯುಕ್ತ
   ಪಿಂಗಾಣಿ ವಸ್ತು ತಯಾರಿಕೆಗೆ ಉಪಯುಕ್ತ
   ಕ್ಯಾಲಿಕೊ ಪ್ರಿಂಟಿಂಗ್ಗೆ ಉಪಯುಕ್ತ
2. ಅಭ್ರಕದ ಉಪಯೋಗಗಳನ್ನು ತಿಳಿಸಿ.
   ವಿದ್ಯುದುಪಕರಣ ತಯಾರಿಕೆ
   ಟೆಲಿಫೋನ್ ತಯಾರಿಕೆ
   ವಿಮಾನ ತಯಾರಿಕೆ
   ಸ್ವಚಾಲನಾ ವಾಹನ ತಯಾರಿಕೆ
   ನಿಸ್ತಂತು ಸಂಪರ್ಕ ಮಾಧ್ಯಮಗಳಲ್ಲಿ ಬಳಕೆ
3. ಶಕ್ತಿ ಸಂಪನ್ಮೂಲಗಳ ಮಹತ್ವವನ್ನು ವಿವರಿಸಿ.
   ಆರ್ಥಿಕಾಭಿವೃದ್ಧಿ
   ಜನರ ಜೀವನ ಮಟ್ಟದ ಸುಧಾರಣೆ
   ಕೈಗಾರಿಕೆ ಮತ್ತು ಕೃಷಿ ಪ್ರಗತಿ
   ವಾಣಿಜ್ಯೋದ್ಯಮದ ಪ್ರಗತಿ
   ಸಾರಿಗೆ-ಸಂಪರ್ಕದ ಪ್ರಗತಿ
4. ಕಲ್ಲಿದ್ದಲಿನಿಂದ ದೊರೆಯುವ ಉಪವಸ್ತುಗಳಾವುವು?
   ಅಮೋನಿಯ
   ಕೋಲ್ಟಾರ್
   ಕೋಲ್ಗ್ಯಾಸ್
   ಬೆಂಜಾಲ್
   ನ್ಯಾಪ್ತ
   ಸಲ್ಫರ್ ಇತ್ಯಾದಿ
5. ಪೆಟ್ರೋಲಿಯಂನ ಉಪಯೋಗಗಳನ್ನು ತಿಳಿಸಿ.
   ಸಾರಿಗೆಯಲ್ಲಿ ಬಳಸಲಾಗುತ್ತದೆ
   ಕೃತಕ ರಬ್ಬರ್
   ಕೃತಕ ರೇಷ್ಮೆ
   ಔಷಧಿ
   ರಾಸಾಯನಿಕ ಗೊಬ್ಬರ
   ಬಣ್ಣ ತಯಾರಿಕೆ ಮೊದಲಾದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ಪೂರೈಸುವುದು.
6. ಭಾರತದಲ್ಲಿ ಪೆಟ್ರೋಲಿಯಂ ಹಂಚಿಕೆಯನ್ನು ಕುರಿತು ವಿವರಿಸಿ.
   ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವು ಹೆಚ್ಚಾಗಿ ಬಾಂಬೆ ಹೈ ಹಾಗೂ ಗುಜರಾತ್, ಅಸ್ಸಾಂ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ.
   ಬಾಂಬೆ ಹೈ ಭಾರತದಲ್ಲೇ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಪ್ರದೇಶ.
   ಗುಜರಾತಿನ ತೈಲ ಪ್ರದೇಶಗಳೆಂದರೆ ಅಂಕಲೇಶ್ವರ, ಕ್ಯಾಂಬೆ, ಕಲೋಲ್, ನೌಗಾಂ ಮತ್ತು ಮಹ್ಸೇನ.

ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಅಸ್ಸಾಂನ 'ಮಾಕುಂ' ಎಂಬಲ್ಲಿ ಕಂಡುಹಿಡಿಯಲಾಯಿತು.
ಅಸ್ಸಾಂನ ಮುಖ್ಯ ತೈಲ ಪ್ರದೇಶಗಳೆಂದರೆ ದಿಗ್ಬಾಯಿ, ನಹರ್ಕಾತಿಯ, ಮೊರಾನ್, ಹುಗ್ರಿಜನ್, ಸಿಬ್ಸಾಗರ್ ಮತ್ತು ರುದ್ರಸಾಗರ.

7 .ಭಾರತದಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನಾ ಅಭಿವೃದ್ಧಿ ಅತ್ಯಾವಶ್ಯಕ ಏಕೆ?
ನವೀಕರಿಸಬಲ್ಲದ್ದಾಗಿದೆ
ಅಧಿಕ ಶಾಖ ಮತ್ತು ಶಕ್ತಿ ನೀಡುವಂತಹದು.
ಯಂತ್ರಗಳು ಸ್ವಚ್ಛವಾಗಿರುತ್ತವೆ
ಇದರ ಪ್ರಸರಣವೂ ಸುಲಭ.
ಸಾಕಷ್ಟು ಪಳೆಯುಳಿಕೆ ಇಂಧನಗಳು ಲಭ್ಯವಿಲ್ಲ.
ಜಲವಿದ್ಯುಚ್ಛಕ್ತಿ ಅಭಿವೃದ್ಧಿಗೆ ಅಗತ್ಯವಾದ ಅಂಶಗಳು ಪೂರಕವಾಗಿವೆ.

8. ಭಾರತದ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ.
ತಾರಾಪುರ(ಮಹಾರಾಷ್ಟ್ರ)
ರಾಣಪ್ರತಾಪಸಾಗರ(ರಾಜಸ್ತಾನ)
ಕಲ್ಪಾಕಂ(ತಮಿಳುನಾಡು)
ನರೋರ(ಉತ್ತರ ಪ್ರದೇಶ)
ಕಾಕ್ರಪಾರ(ಗುಜರಾತ್)
ಕೈಗ(ಕರ್ನಾಟಕ)
ಕುಂದನ್ ಕುಲಂ(ತಮಿಳುನಾಡು)

# 9. ಭಾರತದ ಸಾರಿಗೆ

## ಬಹುಆಯ್ಕೆ ಪ್ರಶ್ನೆಗಳು:

**1. ಸುವರ್ಣ ಚತುಷ್ಕೋನ & ಸೂಪರ್ ಹೆದ್ದಾರಿಗಳನ್ನು ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿ ಹೊಂದಿರುವುದು**

ಎ) ಕೇಂದ್ರ ಲೋಕೋಪಯೋಗಿ ಇಲಾಖೆ

ಬಿ) ರಾಜ್ಯದ ಲೋಕೋಪಯೋಗಿ ಇಲಾಖೆ

<u>ಸಿ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ</u>

ಡಿ) ಜಿಲ್ಲಾ ಪಂಚಾಯತ್

**2. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿ ಹೊಂದಿರುವುದು**

**<u>ಎ) ಕೇಂದ್ರ ಲೋಕೋಪಯೋಗಿ ಇಲಾಖೆ</u>**

ಬಿ) ರಾಜ್ಯದ ಲೋಕೋಪಯೋಗಿ ಇಲಾಖೆ

ಸಿ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಡಿ) ಜಿಲ್ಲಾ ಪಂಚಾಯತ್

**3. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿ ಹೊಂದಿರುವುದು**

ಎ) ಕೇಂದ್ರ ಲೋಕೋಪಯೋಗಿ ಇಲಾಖೆ

**<u>ಬಿ) ರಾಜ್ಯದ ಲೋಕೋಪಯೋಗಿ ಇಲಾಖೆ</u>**

ಸಿ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಡಿ) ಜಿಲ್ಲಾ ಪಂಚಾಯತ್

**4. ಭಾರತದಲ್ಲಿ ಗಡಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯು ---------ಕ್ಕೆ ಸೇರಿರುತ್ತದೆ.**

ಎ) ಕೇಂದ್ರ ಲೋಕೋಪಯೋಗಿ ಇಲಾಖೆ

ಬಿ) ರಾಜ್ಯದ ಲೋಕೋಪಯೋಗಿ ಇಲಾಖೆ

ಸಿ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

**<u>ಡಿ) ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ</u>**

**5. ಭಾರತದ ಪ್ರಥಮ ರೈಲು ಮಾರ್ಗವು 1853ರಲ್ಲಿ --ಮತ್ತು ---ಗಳ ನಡುವೆ ನಿರ್ಮಾಣಗೊಂಡಿತು.**

ಎ) ಕೊಲ್ಕತ ಮತ್ತು ರಾಣಿಗಂಜ್

**<u>ಬಿ) ಬಾಂಬೆ ಮತ್ತು ಥಾಣೆ</u>**

ಸಿ) ಮದ್ರಾಸ್ ಮತ್ತು ಅರ್ಕೊನಾಮ್

ಡಿ) ಬೆಂಗಳೂರು ಮತ್ತು ಮೈಸೂರು

**6. ಈ ಕೆಳಗಿನ ಯಾವ ಬಂದರನ್ನು "ಭಾರತದ ಹೆಬ್ಬಾಗಿಲು" ಎಂದು ಕರೆಯಲಾಗಿದೆ.**

<u>ಎ) ಮುಂಬಯಿ</u> ಬಿ) ಕಲ್ಕತ್ತ

ಸಿ) ನವಶೇವಾ ಡಿ) ವಿಶಾಖಪಟ್ಟಣ

**7. 'ಅರಬ್ಬಿ ಸಮುದ್ರದ ರಾಣಿ' ಎಂದು ಕರೆಯಲ್ಪಡುವ ಬಂದರು**

**<u>ಎ) ಕೊಚ್ಚಿ</u>** ಬಿ) ಕಾಂಡ್ಲ

ಸಿ) ಚೆನ್ನೈ ಡಿ) ಎನ್ನೋರ್

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

1. ಸಾರಿಗೆಯನ್ನು ವ್ಯಾಖ್ಯಾನಿಸಿ.
ಸರಕು, ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದನ್ನು 'ಸಾರಿಗೆ' ಎನ್ನುವರು.
2. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮುಖ್ಯ ಉದ್ದೇಶವೇನು?
ಕಚ್ಚಾ ರಸ್ತೆಗಳನ್ನು ಸುಧಾರಿಸುವುದು.
3. ಗಡಿ ರಸ್ತೆಗಳು ಎಂದರೇನು?
ದೇಶದ ಗಡಿಪ್ರದೇಶದಲ್ಲಿ ರಕ್ಷಣಾಪಡೆಯ ಬಳಕೆಗಾಗಿಯೇ ನಿರ್ಮಿಸಿದ ರಸ್ತೆಗಳಿಗೆ ಗಡಿ ರಸ್ತೆಗಳು ಎನ್ನುವರು.

4. ಭಾರತದಲ್ಲಿ ಬ್ರಿಟಿಷರು ರೈಲು ಮಾರ್ಗ ನಿರ್ಮಿಸಿದ್ದರ ಉದ್ದೇಶವೇನು?
   ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವುಗಳನ್ನು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವಾಗಿತ್ತು.
5. ಭಾರತದಲ್ಲಿ ಇಂದು ಒಳನಾಡ ಜಲಸಾರಿಗೆಯ ಮಹತ್ವ ಕಡಿಮೆಯಾಗಿದೆ. ಏಕೆ?
   ಇಂದು ರಸ್ತೆ ಮತ್ತು ರೈಲುಸಾರಿಗೆಗಳ ಪ್ರಗತಿಯಿಂದಾಗಿ ಒಳನಾಡ ಜಲಸಾರಿಗೆಯ ಮಹತ್ವವು ಕಡಿಮೆಯಾಗಿದೆ.
6. ಸಾಗರ ಜಲಸಾರಿಗೆ ಎಂದರೇನು?
   ಸಮುದ್ರ ಮತ್ತು ಸಾಗರಗಳ ಮೂಲಕ ಏರ್ಪಡುವ ನೌಕಾಯಾನವೇ ಸಾಗರ ಜಲಸಾರಿಗೆ.
7. ಬಂದರು ಎಂದರೇನು?
   ಸರಕು ತುಂಬಲು ಮತ್ತು ಇಳಿಸುವುದಕ್ಕಾಗಿ ಹಡಗು ತಂಗುವ ಸ್ಥಳವೇ ಬಂದರು.
8. ಸಂಪರ್ಕ ಮಾಧ್ಯಮ ಎಂದರೇನು?
   ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.
9. ಭಾರತದ ಅತ್ಯಂತ ಹಳೆಯದೂ ಮತ್ತು ಈಗಲೂ ಅಸ್ತಿತ್ವ ಕಾಯ್ದುಕೊಂಡಿರುವ ವೃತ್ತಪತ್ರಿಕೆ ಯಾವುದು?
   ಬಾಂಬೆ ಸಮಾಚಾರ

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

1. ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.
   ಪ್ರಥಮ, ದ್ವಿತೀಯ ಮತ್ತು ತೃತೀಯ ಕ್ಷೇತ್ರದಅಭಿವೃದ್ಧಿ
   ಸುಲಭ ದರದ ಸಾರಿಗೆ ಸೌಲಭ್ಯ
   ಕೃಷಿಯ ಅಭಿವೃದ್ಧಿ
   ಕೈಗಾರಿಕಾ ಪ್ರಗತಿಗೆ ಉತ್ತೇಜನ
   ಮಾರುಕಟ್ಟೆಯ ವಿಸ್ತರಣೆ
   ದೇಶೀಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ
   ಉದ್ಯೋಗ ಸೃಷ್ಟಿ
   ಜನರ ಆದಾಯ ಮತ್ತು ಜೀವನ ಮಟ್ಟದ ಸುಧಾರಣೆ
   ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ
   ರಕ್ಷಣಾ ಪಡೆಗೂ ನೆರವಾಗುತ್ತದೆ.
2. ಸಾರಿಗೆಯ ವಿವಿಧ ಪ್ರಕಾರಗಳನ್ನು ಹೆಸರಿಸಿ.

ಭೂ ಸಾರಿಗೆ
   ರಸ್ತೆ ಸಾರಿಗೆ
   ರೈಲು ಸಾರಿಗೆ
   ಕೊಳವೆ ಮಾರ್ಗ

ಜಲಸಾರಿಗೆ
   ಒಳನಾಡಿನ ಜಲಸಾರಿಗೆ
   ಸಾಗರ ಜಲಸಾರಿಗೆ

ವಾಯು ಸಾರಿಗೆ
   ರಾಷ್ಟ್ರೀಯ ವಾಯುಸಾರಿಗೆ
   ಅಂತರರಾಷ್ಟ್ರೀಯ ವಾಯುಸಾರಿಗೆ

3. ರಸ್ತೆ ಸಾರಿಗೆಯ ಪ್ರಯೋಜನಗಳಾವುವು? ವಿವರಿಸಿ.
   ಬಹುಪ್ರಾಚೀನ & ಸಾರ್ವತ್ರಿಕವಾದ ಸಾರಿಗೆ ಮಾಧ್ಯಮ.
   ಕೃಷಿ & ಗ್ರಾಮೀಣ ಕೈಗಾರಿಕೆಗಳ ಪ್ರಗತಿಗಾಗಿ ಅಗತ್ಯ.
   ಪಟ್ಟಣ ಮತ್ತು ನಗರಗಳೊಂದಿಗೆ ಸಂಪರ್ಕ ಕಲ್ಪಿಸುತ್ತವೆ.
   ಮನೆಮನೆಗೆ ಸೇವೆ ಕಲ್ಪಿಸುತ್ತವೆ.
   ರೈಲು ಸಂಚಾರ, ಬಂದರು & ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.
   ಪ್ರವಾಸೋದ್ಯಮ ಸಹಕಾರಿಯಾಗಿವೆ.
   ವ್ಯಾಪಾರ ಮತ್ತು ವಾಣಿಜ್ಯಾಭಿವೃದ್ಧಿಗೆ ನೆರವಾಗುತ್ತವೆ.
   ಉದ್ಯೋಗಾವಕಾಶ ಕಲ್ಪಿಸುತ್ತವೆ.
   ಗಡಿಪ್ರದೇಶಗಳಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.
4. ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಆಧರಿಸಿ ರಸ್ತೆಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.
   ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು
   ರಾಷ್ಟ್ರೀಯ ಹೆದ್ದಾರಿಗಳು
   ರಾಜ್ಯ ಹೆದ್ದಾರಿಗಳು
   ಜಿಲ್ಲಾ ರಸ್ತೆಗಳು
   ಗ್ರಾಮೀಣ ರಸ್ತೆಗಳು
6. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳನ್ನು ಕುರಿತು ವಿವರಿಸಿ.
   ಸುವರ್ಣ ಚತುಷ್ಕೋನ ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆ.
   ಈ ಯೋಜನೆ 1999ರಲ್ಲಿ ಆರಂಭವಾಯಿತು.
   ದೇಶದ ಪ್ರಮುಖ ನಗರ, ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ.
   ಸೂಪರ್ ಹೆದ್ದಾರಿಯನ್ನು ಉತ್ತರ ದಕ್ಷಿಣ ಕಾರಿಡಾರ್ ಮತ್ತು ಪೂರ್ವ ಪಶ್ಚಿಮ ಕಾರಿಡಾರ್ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.
   ಇವು ಅನೇಕ ಪ್ರಮುಖ ನಗರ, ಕೈಗಾರಿಕಾ ಕೇಂದ್ರಗಳು ಮತ್ತು ಬಂದರುಗಳನ್ನು ಸಂಪರ್ಕಿಸುತ್ತವೆ.
   ಈಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯವು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೇರಿರುತ್ತದೆ.
7. ಕೊಳವೆ ಮಾರ್ಗಗಳ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.
   ಇದು ಹೊಸ ಭೂಸಾರಿಗೆ ವಿಧಾನ.
   ಕೊಳವೆ ಮಾರ್ಗಗಳನ್ನು ನೆಲದೊಳಗೆ ಹಾಸಲಾಗಿರುತ್ತದೆ.
   ಕಚ್ಚಾ ತೈಲ, ನೈಸರ್ಗಿಕ ಅನಿಲ & ಕೆಸರು ರೂಪದಲ್ಲಿ ಖನಿಜಗಳನ್ನು ಸಾಗಿಸಲು ಬಳಸಲಾಗುವುದು.
   ಭಾರತದಲ್ಲಿ ಒಟ್ಟು 35,676 ಕಿ.ಮೀ. ಉದ್ದದ ಕೊಳವೆ ಮಾರ್ಗಗಳಿವೆ.
8. ಭಾರತದಲ್ಲಿರುವ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ.

ಪಶ್ಚಿಮ ತೀರದ ಪ್ರಮುಖ ಬಂದರುಗಳೆಂದರೆ ಕಾಂಡ್ಲಾ, ಮುಂಬಯಿ, ನವಶೇವ, ಮರ್ಮಗೋವ, ನವ ಮಂಗಳೂರು ಮತ್ತು ಕೊಚ್ಚಿ.
ಪೂರ್ವ ತೀರದ ಪ್ರಮುಖ ಬಂದರುಗಳೆಂದರೆ ಕಲ್ಕತ್ತ, ಹಾಲ್ದಿಯಾ, ಪಾರಾದೀಪ, ವಿಶಾಖಪಟ್ಟಣ, ಚೆನ್ನೈ, ಎನ್ನೋರ್, ತುತುಕುಡಿ ಮತ್ತು ಪೋರ್ಟ್ ಬ್ಲೇರ್.

9. ಭಾರತದ ಪ್ರಮುಖ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೆಸರಿಸಿ.
ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ದೆಹಲಿ.
ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬಯಿ.
ನೇತಾಜಿ ಸುಭಾಷ್ಚಂದ್ರಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಕೊಲ್ಕತ.
ಅಣ್ಣಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಚೆನ್ನೈ.
ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು.
ರಾಜೀವ್ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಹೈದರಾಬಾದ್.

10. ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆಯನ್ನು ವಿವರಿಸಿ.
ಸರ್ಕಾರದ ನೀತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅರಿವು ಮೂಡಿಸುವುದು.
ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣ ಮುನ್ಸೂಚನೆಗಳನ್ನು ತಿಳಿಯಲು ಸಹಾಯವಾಗುವುದು.
ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿಗಳ ಅಭಿವೃದ್ಧಿಗೆ ನೆರವಾಗುವುದು.
ಮನರಂಜನೆ, ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ.
ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ.

# 10. ಭಾರತದ ಕೈಗಾರಿಕೆಗಳು

## ಬಹುಆಯ್ಕೆ ಪ್ರಶ್ನೆಗಳು:

**1. ಯಾವ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ.**

**ಎ) ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ**

ಬಿ) ಹತ್ತಿ ಬಟ್ಟೆ ಕೈಗಾರಿಕೆ

ಸಿ) ಸಕ್ಕರೆ ಕೈಗಾರಿಕೆ

ಡಿ) ಅಲ್ಯುಮಿನಿಯಂ ಕೈಗಾರಿಕೆ

**2. ಬಾಕ್ಸೈಟ್ ಅದಿರು ------ ಕೈಗಾರಿಕೆಯ ಪ್ರಮುಖ ಕಚ್ಚಾ ವಸ್ತು.**

ಎ) ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ

ಬಿ) ಹತ್ತಿ ಬಟ್ಟೆ ಕೈಗಾರಿಕೆ

ಸಿ) ಸಕ್ಕರ ಕೈಗಾರಿಕೆ

**ಡಿ) ಅಲ್ಯುಮಿನಿಯಂ ಕೈಗಾರಿಕೆ**

**3. ಅಲ್ಯೂಮಿನಿಯಂ ಕೈಗಾರಿಕೆ ಮೊದಲಿಗೆ ಪಶ್ಚಿಮ ಬಂಗಾಳದ--------------ನಗರದಲ್ಲಿ 1942ರಲ್ಲಿ ಆರಂಭಗೊಂಡಿತು**

ಎ) ಜೇಮ್ ಶೆಡಪುರ

ಬಿ) ಕುಲ್ಟಿ

ಸಿ) ಬರ್ನಪುರ

**ಡಿ) ಜಯಕಾಯ್**

**4. ಭಾರತದ ಮ್ಯಾಂಚೆಸ್ಟರ್ ಎಂದು ------ನಗರವನ್ನು ಕರೆಯುತ್ತಾರೆ.**

ಎ)ಬೆಂಗಳೂರು ಬಿ)ಕಲ್ಕತ್ತ

**ಸಿ)ಮುಂಬಯಿ** ಡಿ)ಸೂರತ್

**5. ಭಾರತದ ಅರಣ್ಯ ಆಧಾರಿತ ಕೈಗಾರಿಕೆ ------ ಆಗಿದೆ.**

ಎ) ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ

ಬಿ) ಹತ್ತಿ ಬಟ್ಟೆ ಕೈಗಾರಿಕೆ

**ಸಿ) ಕಾಗದ ಕೈಗಾರಿಕೆ**

ಡಿ) ಅಲ್ಯುಮಿನಿಯಂ ಕೈಗಾರಿಕೆ

**6. ಭಾರತದ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು 1832ರಲ್ಲಿ ----- ಎಂಬಲ್ಲಿ ಸ್ಥಾಪನೆಗೊಂಡಿತು.**

ಎ) ಜೇಮ್ ಶೆಡಪುರ

**ಬಿ) ಸೆರಾಂಪುರ**

ಸಿ) ಬರ್ನಪುರ

ಡಿ) ಜಯಕಾಯ್

**7. ಮೊದಮೊದಲು ಭಾರತದ ಕಾಗದ ಕೈಗಾರಿಕೆಯು ಪಶ್ಚಿಮ ಬಂಗಾಳದ ------- ನದಿ ಬಯಲಿನಲ್ಲಿ ಅಭಿವೃದ್ಧಿಗೊಂಡಿತ್ತು.**

ಎ) ಗಂಗಾ ಬಿ) ಯಮುನಾ

**ಸಿ) ಹೂಗ್ಲಿ** ಡಿ) ಚಂಬಲ್

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

1. ಕೈಗಾರಿಕೆ ಎಂದರೇನು?
ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು.

2. ಕೈಗಾರಿಕಾ ಪ್ರದೇಶ ಎಂದರೇನು?
ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶವನ್ನು ಕೈಗಾರಿಕಾ ಪ್ರದೇಶ ಎನ್ನುವರು.

3. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ. ಏಕೆ?

ಎಂಜನೀಯರಿಂಗ್, ರೈಲ್ವೆ ಎಂಜಿನ್, ಯಂತ್ರೋಪಕರಣ, ಸ್ವಚಾಲಿತ ವಾಹನ, ಕೃಷಿ ಉಪಕರಣ ಮೊದಲಾದ ಕೈಗಾರಿಕೆಗಳು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯನ್ನು ಆಧರಿಸಿರುತ್ತವೆ.

4. ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಪ್ರಾರಂಭಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಆರಂಭಿಸಿದ ಕೀರ್ತಿ ಜೆ.ಎನ್. ಟಾಟಾರವರಿಗೆ ಸಲ್ಲುತ್ತದೆ.

5. ಭಾರತದ ಪ್ರಥಮ ಹತ್ತಿಬಟ್ಟೆ ಕೈಗಾರಿಕೆಯು ಎಲ್ಲಿ ಪ್ರಾರಂಭವಾಯಿತು?

ಭಾರತದ ಪ್ರಥಮ ಹತ್ತಿಬಟ್ಟೆ ಕೈಗಾರಿಕೆಯು 1854ರಲ್ಲಿ ಮುಂಬಯಿಯಲ್ಲಿ ಪ್ರಾರಂಭವಾಯಿತು.

6. ಮುಂಬಯಿಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ. ಏಕೆ?

ಮುಂಬಯಿಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆಗಳು ಹೆಚ್ಚಾಗಿ ಕಂಡು ಬರುವುದರಿಂದ ಮುಂಬಯಿಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ.

7. ಭಾರತದ ಕಾಟನೊಪೊಲೀಸ್ ಎಂದು ಪ್ರಸಿದ್ಧವಾಗಿರುವ ನಗರ ಯಾವುದು?

ಮುಂಬಯಿ ಭಾರತದ ಕಾಟನೊಪೊಲೀಸ್ ಎಂದು ಪ್ರಸಿದ್ಧಿ ಪಡೆದಿದೆ.

## <u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>

1. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಮಹತ್ವವನ್ನು ವಿವರಿಸಿ.
   ಪ್ರಾಥಮಿಕ ಸರಕುಗಳ ಕಡಿಮೆ ಅವಲಂಬನೆ
   ಕಡಿಮೆ ಆಮದು
   ರಾಷ್ಟ್ರಾದಾಯ ಮತ್ತು ತಲಾದಾಯ ಹೆಚ್ಚಳ
   ವಿದೇಶೀ ವಿನಿಮಯ ಗಳಿಕೆಯಲ್ಲಿ ವೃದ್ಧಿ
   ಉದ್ಯೋಗಾವಕಾಶಗಳ ಹೆಚ್ಚಳ
   ಜಿಡಿಪಿ ಮತ್ತು ಜನರ ಜೀವನ ಮಟ್ಟದಲ್ಲಿ ಸುಧಾರಣೆ
2. ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
   ಕಚ್ಚಾ ವಸ್ತುಗಳ ಸರಬರಾಜು
   ಶಕ್ತಿ ಸಂಪನ್ಮೂಲಗಳ ಪೂರೈಕೆ
   ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ
   ಮಾರುಕಟ್ಟೆ ಸೌಲಭ್ಯ
   ಬಂಡವಾಳ
   ಕಾರ್ಮಿಕರು ಮತ್ತು ನೀರು ದೊರೆಯುವಿಕೆ
   ಸೂಕ್ತ ವಾಯುಗುಣ
   ಸರ್ಕಾರದ ನೀತಿ ನಿಯಮಗಳು
3. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿ ಮಾಡಿರಿ.
   ಹೂಗ್ಲಿ–ಕೊಲ್ಕತ ಪ್ರದೇಶ
   ಮುಂಬಯಿ–ಪುಣೆ ಪ್ರದೇಶ
   ಅಹ್ಮದಾಬಾದ್–ವಡೋದರ ಪ್ರದೇಶ
   ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ
   ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ
   ದೆಹಲಿ–ಮೀರತ್ ಪ್ರದೇಶ
   ವಿಶಾಖಪಟ್ಟಣ–ಗುಂಟೂರು ಪ್ರದೇಶ
   ಕೊಲ್ಲಂ–ತಿರುವನಂತಪುರ ಪ್ರದೇಶ
4. ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಬೆಳವಣಿಗೆಯನ್ನು ವಿವರಿಸಿ.
   ಮೊಟ್ಟಮೊದಲಿಗೆ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು 1874ರಲ್ಲಿ ಪಶ್ಚಿಮ ಬಂಗಾಳದ ಕುಲ್ಟಿ ಎಂಬಲ್ಲಿ ಸ್ಥಾಪನೆಗೊಂಡಿತು.
   ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಆರಂಭದ ಕೀರ್ತಿ ಜೆ.ಎನ್. ಟಾಟಾರವರಿಗೆ ಸಲ್ಲುತ್ತದೆ.
   ಇವರು 1907ರಲ್ಲಿ ಜಾರ್ಖಂಡ್ ರಾಜ್ಯದ ಸಾಕ್ಚಿ (ಜೆಂಷೆಡ್ಪುರ)ಯ ಬಳಿ ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿಯ ಕಾರ್ಖಾನೆಯನ್ನು ಸ್ಥಾಪಿಸಿದರು.
   ಈ ಕೈಗಾರಿಕೆಯ ಪ್ರಗತಿಗಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಯಿತು.
   ಇಂದು ಭಾರತದಲ್ಲಿ 14 ಸಮಗ್ರ ಕಬ್ಬಿಣ ಮತ್ತು ಉಕ್ಕು ಸ್ಥಾವರಗಳಿವೆ.
   ಅವುಗಳಲ್ಲಿ 4 ಖಾಸಗಿ ವಲಯ ಮತ್ತು ಉಳಿದ 10 ಸರಕಾರಿ ವಲಯಕ್ಕೆ ಸೇರಿವೆ.
5. ಭಾರತದಲ್ಲಿ ಸರ್ಕಾರಿ ವಲಯದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ.
   ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ. ಬರ್ನ್ಪುರ, ಪಶ್ಚಿಮ ಬಂಗಾಳ
   ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ. ಭದ್ರಾವತಿ, ಕರ್ನಾಟಕ
   ಹಿಂದೂಸ್ತಾನ್ ಉಕ್ಕುಲಿಮಿಟೆಡ್, ಬಿಲಾಯಿ, ಛತ್ತೀಸ್ಗರ್
   ಹಿಂದೂಸ್ತಾನ್ ಉಕ್ಕು ಲಿಮಿಟೆಡ್, ರೂರ್ಕೆಲ, ಒಡಿಶಾ
   ಹಿಂದೂಸ್ತಾನ್ ಉಕ್ಕು ಲಿಮಿಟೆಡ್, ದುರ್ಗಾಪುರ, ಪಶ್ಚಿಮ ಬಂಗಾಳ.
   ಬೊಕಾರೊ ಉಕ್ಕು ಸ್ಥಾವರ, ಬೊಕಾರೊ, ಜಾರ್ಖಂಡ್.
   ಸೇಲಂ ಉಕ್ಕು ಸ್ಥಾವರ, ಸೇಲಂ, ತಮಿಳುನಾಡು.
   ವಿಶಾಖಪಟ್ಟಣಂ ಉಕ್ಕು ಸ್ಥಾವರ,ವಿಶಾಖಪಟ್ಟಣ, ಆಂಧ್ರ.
   ದಾಯಿತರಿ ಉಕ್ಕು ಸ್ಥಾವರ, ಪಾರಾದೀಪ, ಒಡಿಶಾ.
   ಟಾಟಾ ಉಕ್ಕು ಸ್ಥಾವರ, ಕಳಿಂಗ ನಗರ, ಒಡಿಶಾ.
6. ಅಲ್ಯೂಮಿನಿಯಂ ಲೋಹದ ಉಪಯೋಗಗಳನ್ನು ತಿಳಿಸಿ.
   ವಿಮಾನ ತಯಾರಿಕೆ
   ಸ್ವಯಂಚಾಲಿತ ವಾಹನ
   ರೈಲುಸಾರಿಗೆ
   ಹಡಗು ತಯಾರಿಕೆ
   ಬಣ್ಣ ತಯಾರಿಕೆ
   ಗೃಹಬಳಕೆ ವಸ್ತುಗಳ ತಯಾರಿಕೆ
   ವಿದ್ಯುತ್ ಕೇಬಲ್ ತಯಾರಿಕೆ
   ಪ್ಯಾಕಿಂಗ್ ಮಾಡುವುದು

# 11. ಭಾರತದ ನೈಸರ್ಗಿಕ ವಿಪತ್ತುಗಳು

## ಬಹು ಆಯ್ಕೆ ಪ್ರಶ್ನೆಗಳು:

**1. ಭಾರತದಲ್ಲಿ ಉಷ್ಣವಲಯದ ಆವರ್ತಮಾರುತಗಳು ಬಹುವಾಗಿ ----------- ಸಂಭವಿಸುತ್ತವೆ.**

ಎ) ಬಂಗಾಳಕೊಲ್ಲಿಯಲ್ಲಿ

ಬಿ) ಅರಬ್ಬಿ ಸಮುದ್ರದಲ್ಲಿ

ಸಿ) ಹಿಂಧೂ ಮಹಾಸಾಗರದಲ್ಲಿ

ಡಿ) ಗಂಗಾನದಿಯಲ್ಲಿ

**2. ಈ ಕೆಳಗಿನವುಗಳಲ್ಲಿ ಸಮುದ್ರ ಸವೆತಕ್ಕೆ ಕಾರಣವಾಗುವ ಮಾನವ ಕೃತ್ಯ ಯಾವುದು?**

ಎ) ನೈಋುತ್ಯ ಮಾನ್ಸೂನ್ ಮಾರುತಗಳು

ಬಿ) ಉಷ್ಣವಲಯದ ಆವರ್ತಮಾರುತಗಳು

ಸಿ) ಸುನಾಮಿ

ಡಿ) ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ

**3. ಭಾರತದಲ್ಲಿ ಈವರೆಗೆ ಸಂಭವಿಸಿರುವ ಭೂಕಂಪನಗಳಲ್ಲಿ ಬಹಳಷ್ಟು ----- ಕಾರಣದಿಂದ ಸಂಭವಿಸಿದವು.**

ಎ) ಜಲಾಶಯಗಳ ನೀರಿನ ಭಾರ

ಬಿ) ಅಂತರ್ಗುಹೆ ಮೇಲ್ಭಾವಣಿಯ ಕುಸಿತ

ಸಿ) ಭೂಫಲಕಗಳ ಚಲನೆ

ಡಿ) ಶಿಲಾಸ್ತರಗಳ ಭಂಗ ಮತ್ತು ಮಡಿಕೆ

**4. ಇತ್ತೀಚಿಗೆ ಈ ವಲಯವನ್ನು `ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ.**

ಎ) ಹಿಮಾಲಯ ವಲಯ

ಬಿ) ಸಿಂಧೂ-ಗಂಗ ವಲಯ

ಸಿ) ಪರ್ಯಾಯ ದ್ವೀಪವಲಯ

ಡಿ) ಈಶಾನ್ಯ ರಾಜ್ಯಗಳ ವಲಯ

## ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:

1. ನೈಸರ್ಗಿಕ ವಿಪತ್ತುಗಳೆಂದರೇನು?
   ನೈಸರ್ಗಿಕ ಅನಾಹುತಗಳಿಂದಾಗುವ ವ್ಯಾಪಕ ವಿನಾಶದ ಫಲವೇ ನೈಸರ್ಗಿಕ ವಿಪತ್ತುಗಳು.
2. ಆವರ್ತ ಮಾರುತಗಳೆಂದರೇನು?
   ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತಮಾರುತ.
3. ಭಾರತದಲ್ಲಿ ಸಾಮಾನ್ಯವಾಗಿ ಆವರ್ತ ಮಾರುತಗಳ ದಾಳಿಗೆ ಒಳಗಾಗುವ ರಾಜ್ಯಗಳಾವುವು?
   ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳ.
4. ಪ್ರವಾಹಗಳೆಂದರೇನು?
   ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತಗೊಳ್ಳುತ್ತವೆ. ಇದನ್ನು ನದಿ ಪ್ರವಾಹ ಎನ್ನುವರು.
5. ಭೂಕುಸಿತವನ್ನು ಅರ್ಥೈಸಿರಿ.
   ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ ಭೂಕುಸಿತ ಎನ್ನುವರು.
6. ಸಮುದ್ರದ ಕೊರೆತ ಎಂದರೇನು?
   ಸಮುದ್ರ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತುಗಳ ಒಯ್ಯುವಿಕೆಗೆ ಸಮುದ್ರದ ಕೊರೆತ ಎನ್ನುವರು.
7. ಭೂಕಂಪನ ಎಂದರೇನು?
   ಭೂಚಿಪ್ಪಿನಲ್ಲಾಗುವ ರಭಸವಾದ ಕಂಪನವನ್ನು ಭೂಕಂಪವೆನ್ನುವರು.
8. ಉಷ್ಣವಲಯದ ಆವರ್ತಮಾರುತಗಳಿಂದ ಸಮುದ್ರ ಸವೆತಕ್ಕೆ ಒಳಗಾಗುವ ರಾಜ್ಯಗಳಾವುವು?
   ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ತೀರಗಳು ಸವೆತಕ್ಕೊಳಗಾಗುವವು.
9. ಇತ್ತೀಚಿಗೆ ಪರ್ಯಾಯ ದ್ವೀಪ ವಲಯವನ್ನು 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ. ಏಕೆ?
   ಭಾರತದ ಪರ್ಯಾಯ ದ್ವೀಪವು ಅಚಲವಾದ ಭೂಭಾಗವೆಂದು ಪರಿಗಣಿಸಲಾಗಿದ್ದು, ಈ ವಲಯದಲ್ಲಿ ಭೂಕಂಪಗಳು ಸಂಭವಿಸುವುದು ಕಡಿಮೆ. ಹೀಗಾಗಿ ಇತ್ತೀಚಿಗೆ ಈ ವಲಯವನ್ನು 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ.

## ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

1. ಉಷ್ಣವಲಯದ ಆವರ್ತಮಾರುತಗಳ ಉಗಮಕ್ಕೆ ಕಾರಣ ವಾಗುವ ಅಂಶಗಳಾವುವು?
   ಅಧಿಕ ಉಷ್ಣಾಂಶ
   ಪ್ರಶಾಂತ ವಾಯು
   ಹೆಚ್ಚು ತೇವಾಂಶ ಭರಿತ ವಾಯು
2. ಆವರ್ತ ಮಾರುತಗಳನ್ನು ಎದುರಿಸಲು ನೀವು ಸೂಚಿಸುವ ಮುನ್ನೆಚ್ಚರಿಕಾ ಕ್ರಮಗಳಾವುವು?
   ಸಂಪರ್ಕ ಮಾಧ್ಯಮಗಳಲ್ಲಿ ಮಾಹಿತಿ ಭಿತ್ತರಿಸುವುದು.
   ಆವರ್ತಮಾರುತಗಳು ಸಂಭವಿಸಿದ ಸಂದರ್ಭಗಳಲ್ಲಿ ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಬೇಕು.
   ಆವರ್ತಮಾರುತಗಳ ಹೊಡೆತ ಮತ್ತು ಕಡಲಕೊರೆತಗಳನ್ನು ನಿಯಂತ್ರಿಸುವುದು.
   ಮ್ಯಾಂಗ್ರೋವ್ ಕಾಡುಗಳನ್ನು ಸಮುದ್ರ ತೀರದಲ್ಲಿ ಬೆಳೆಸುವುದು.
3. ಪ್ರವಾಹಗಳುಂಟಾಗುವುದಕ್ಕೆ ನೈಸರ್ಗಿಕ ಕಾರಣ ತಿಳಿಸಿ.

ಅತ್ಯಧಿಕ ಮಳೆ
ಹಿಮಕರಗುವಿಕೆ
ಆವರ್ತಮಾರುತ
ಮೇಘಸ್ಫೋಟ
ನದಿಸರಾಗವಾಗಿ ಹರಿಯಲಾರದಷ್ಟು ಅಡಚಣೆ
ನದಿ ಪಾತ್ರದಲ್ಲಿ ಹೂಳುತುಂಬುವಿಕೆ

4. ಮಾನವನ ಕೃತ್ಯಗಳೂ ಸಹ ಪ್ರವಾಹಕ್ಕೆ ಹೇಗೆ ಕಾರಣವಾಗುತ್ತವೆ? / ಪ್ರವಾಹಗಳಿಗೆ ಕಾರಣವಾಗುವ ಮಾನವ ಕೃತ್ಯಗಳಾವುವು?
ಅರಣ್ಯನಾಶ
ಅವೈಜ್ಞಾನಿಕ ನೀರಾವರಿ ಮತ್ತು ಕೃಷಿ ಪದ್ಧತಿ
ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದು
ಶೀಘ್ರಗತಿಯ ನಗರೀಕರಣ

5. ಭಾರತದಲ್ಲಿ ಪ್ರವಾಹ ಪೀಡಿತ ಪ್ರದೇಶಗಳಾವುವು?
ಗಂಗ ಮತ್ತು ಬ್ರಹ್ಮಪುತ್ರ ನದಿ ಬಯಲುಗಳು
ಸಟ್ಲೇಜ್, ಬಿಯಾಸ್, ರಾವಿ ಮತ್ತು ಚೇನಾಬ್ ಬಯಲುಗಳು
ಪರ್ಯಾಯ ಪ್ರಸ್ಥಭೂಮಿ, ನದಿಮುಖಜ ಭೂಮಿಗಳು
ನರ್ಮದಾ ಮತ್ತು ತಪತಿ ನದಿಗಳ ತಗ್ಗು ಭಾಗಗಳು

6. ಪ್ರವಾಹ ನಿಯಂತ್ರಣ ಕ್ರಮಗಳನ್ನು ವಿವರಿಸಿ.
ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು
ವೇಗವಾದ ನೀರಿನ ಹರಿವು ನಿಯಂತ್ರಣ
ಅಣೆಕಟ್ಟುಗಳನ್ನು ನಿರ್ಮಿಸುವುದು
ಒಡ್ಡುಗಳ ನಿರ್ಮಾಣ
ಮುನ್ಸೂಚನೆ ಮತ್ತು ಸಕಾಲಿಕ ಮುನ್ನೆಚ್ಚರಿಕೆ ನೀಡುವುದು

7. ಭೂಕುಸಿತಗಳು ಉಂಟಾಗುವ ಬಗೆಯನ್ನು ವಿವರಿಸಿ.
ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ "ಭೂಕುಸಿತ" ಎನ್ನುವರು.
ಇದು ಭೂ ಗುರುತ್ವಾಶಕ್ತಿಯಿಂದ ಮಣ್ಣು, ಕಲ್ಲು ಮತ್ತು ಭಗ್ನಾವಿಶೇಷಗಳು ಕೆಳಗೆ ಬೀಳುವ ಅಥವಾ ಜರುಗುವ ಕ್ರಿಯೆಯನ್ನೊಳಗೊಂಡಿದೆ.

8. ಭೂಕುಸಿತಕ್ಕೆ ಕಾರಣಗಳನ್ನು ಪಟ್ಟಿ ಮಾಡಿರಿ.
ನೈಸರ್ಗಿಕ ಕಾರಣಗಳು
ಸಮುದ್ರ ಅಲೆಗಳು ಸವೆತ ಕಾರ್ಯ
ಅತ್ಯಧಿಕ ಮಳೆ
ಭೂಕಂಪಗಳು
ಮಾನವ ಕೃತ್ಯಗಳು
ಅರಣ್ಯನಾಶ
ರೈಲು ಮತ್ತು ರಸ್ತೆಗಳ ನಿರ್ಮಾಣ
ಅಣೆಕಟ್ಟು & ಜಲವಿದ್ಯುತ್ ಯೋಜನೆಗಳ ನಿರ್ಮಾಣ
ತೀವ್ರಗತಿಯ ಗಣಿಗಾರಿಕೆ
ಕಲ್ಲುಗಣಿಗಾರಿಕೆ

9. ಭಾರತದಲ್ಲಿ ಸಮುದ್ರದ ತೀರ ಸವೆತಕ್ಕೆ ಕಾರಣಗಳೇನು?
ನೈಋತ್ಯ ಮಾನ್ಸೂನ್ ಮಾರುತಗಳು
ಉಷ್ಣವಲಯದ ಆವರ್ತಮಾರುತಗಳು
ಸುನಾಮಿ

10. ಸಮುದ್ರ ತೀರ ಸವೆತದ ಪರಿಣಾಮಗಳೇನು?
ಕಟ್ಟಡ ಮತ್ತು ಮರಗಳು ಕೊಚ್ಚಿಹೋಗುವುದು.
ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ.
ಜನರಿಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ.

11. ಸಮುದ್ರ ತೀರ ಸವೆತವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳಾವುವು?
ಸಮುದ್ರ ಗೋಡೆ, ತಡೆಗಟ್ಟು ಮತ್ತು ಅಲೆತಡೆಗಳ ನಿರ್ಮಾಣ
ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆಗಳ ನಿಷೇದ
ಮ್ಯಾಂಗ್ರೋವ್ ಕಾಡುಗಳನ್ನು ಬೆಳೆಸುವುದು

# 12. ಭಾರತದ ಜನಸಂಖ್ಯೆ

## <u>ಬಹುಆಯ್ಕೆ ಪ್ರಶ್ನೆಗಳು:</u>

**1. 2011 ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ**

ಎ)84ಕೋಟಿ ಬಿ)101ಕೋಟಿ
ಸಿ)110ಕೋಟಿ **<u>ಡಿ)121ಕೋಟಿ</u>**

**2. ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ**

**<u>ಎ)ಉತ್ತರ ಪ್ರದೇಶ</u>** ಬಿ)ಮಧ್ಯಪ್ರದೇಶ
ಸಿ)ಸಿಕ್ಕಿಂ ಡಿ)ಆಂಧ್ರಪ್ರದೇಶ

**3. ಭಾರತದಲ್ಲಿ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯ**

ಎ)ಉತ್ತರ ಪ್ರದೇಶ ಬಿ)ಮಧ್ಯಪ್ರದೇಶ
**<u>ಸಿ)ಸಿಕ್ಕಿಂ</u>** ಡಿ)ಆಂಧ್ರಪ್ರದೇಶ

**4. ಭಾರತದಲ್ಲಿ ಅತ್ಯಧಿಕ ಜನಸಂಖ್ಯೆಯುಳ್ಳ ಕೇಂದ್ರಾಡಳಿ ಪ್ರದೇಶ**

**<u>ಎ)ದೆಹಲಿ</u>** ಬಿ)ಚಂಢೀಗರ್
ಸಿ)ಲಕ್ಷದ್ವೀಪ ಡಿ)ಅಂಡಮಾನ್ ನಿಕೋಬಾರ್

**5. ಭಾರತದಲ್ಲಿ ಅತಿ ಕಡಿಮೆ ಜನಸಂಖ್ಯೆಯುಳ್ಳ ಕೇಂದ್ರಾಡಳಿ ಪ್ರದೇಶ**

ಎ)ದೆಹಲಿ ಬಿ)ಚಂಢೀಗರ್
**<u>ಸಿ)ಲಕ್ಷದ್ವೀಪ</u>** ಡಿ)ಅಂಡಮಾನ್ ನಿಕೋಬಾರ್

**6. 2011ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಜನಸಾಂದ್ರತೆ**

ಎ)77 ಬಿ)267
ಸಿ)324 **<u>ಡಿ)382</u>**

## <u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>

1. ಜನಸಂಖ್ಯೆ ಎಂದರೇನು?
ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಗೆ ಜನಸಂಖ್ಯೆ ಎನ್ನುವರು.

2. 1901 ರಿಂದ 1921ರವರೆಗೆ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನದ ಗತಿಯಲ್ಲಿತ್ತು. ಏಕೆ?
ಮಾರಣಾಂತಿಕ ಕಾಯಿಲೆ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ ಮರಣದರ ಹೆಚ್ಚಾಗಿತ್ತು.

3. 1921–1951ರ ಅವಧಿಯನ್ನು ಸಾಧಾರಣ ಜನಸಂಖ್ಯೆ ಬೆಳವಣಿಗೆ ಕಾಲವೆಂದು ಪರಿಗಣಿಸಲಾಗಿದೆ. ಏಕೆ?
ಭಯಂಕರ ಪಿಡುಗುಗಳ ನಿಯಂತ್ರಣ, ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ ಹಾಗೂ ನೈರ್ಮಲ್ಯೀಕರಣ ನಿರ್ವಹಣೆಗಳಿಂದಾಗಿ ಮರಣ ದರಲ್ಲಿ ಇಳಿಕೆಯಾಯಿತು.
4. 1951–1991ರ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಗಿತ್ತು. ಏಕೆ?
ಮರಣ ದರದ ಇಳಿತ, ಪ್ರತಿಯಾಗಿ ಜನನ ದರದ ಹೆಚ್ಚಳ
5. ಜನಸಾಂದ್ರತೆ ಎಂದರೇನು?
ಪ್ರತಿ ಚದರಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆಗೆ ಜನಸಾಂದ್ರತೆ ಎಂದು ಕರೆಯಲಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

1. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳನ್ನು ತಿಳಿಸಿ.
ಅಧಿಕ ಜನನ ದರ
ಕಡಿಮೆ ಮರಣ ದರ
2. ಭಾರತದಲ್ಲಿ ಅಧಿಕ ಜನ ದರಕ್ಕೆ ಕಾರಣಗಳೇನು?
ಬಾಲ್ಯವಿವಾಹ
ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು
ಬಹುಪತ್ನಿತ್ವ
ಬಡತನ
ಅನಕ್ಷರತೆ
ಉಷ್ಣವಲಯದ ವಾಯುಗುಣ
3. ಭಾರತದಲ್ಲಿ ಕಡಿಮೆ ಮರಣ ದರಕ್ಕೆ ಕಾರಣಗಳೇನು?
ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ
ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ
ಶಿಶು ಮರಣದಲ್ಲಿ ಕುಸಿತ
ಶಿಕ್ಷಣದ ಪ್ರಗತಿ
4. ಭಾರತದಲ್ಲಿ ಜನಸಂಖ್ಯೆ ಬೆಳವಣಿಗೆ ಪರಿಣಾಮಗಳನ್ನು ವಿವರಿಸಿ./ಜನಸಂಖ್ಯಾಸ್ಫೋಟವು ಹಲವಾರು ಸಮಸ್ಯೆಗಳ ಉಗಮಕ್ಕೆ ಹೇಗೆ ಕಾರಣವಾಗುತ್ತದೆ?
ನಿರುದ್ಯೋಗ
ಬಡತನ
ಆಹಾರದ ಕೊರತೆ ಮತ್ತು ಅಪೌಷ್ಠಿಕತೆ
ಮೂಲ ಸೌಲಭ್ಯಗಳ ಕೊರತೆ
ಕಡಿಮೆ ತಲಾದಾಯ
ನಿಧಾನ ಗತಿಯ ಆರ್ಥಿಕಾಭಿವೃದ್ಧಿ
ಜೀವನ ಮಟ್ಟದಲ್ಲಿ ಕುಸಿತ
ಪರಿಸರ ಮಾಲಿನ್ಯ
ರಾಜಕೀಯ ಆರಾಜಕತೆ
5. ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳನ್ನು ವಿಶ್ಲೇಷಿಸಿ.
ಕುಟುಂಬ ಯೋಜನೆ
ಮಹಿಳಾ ಕಲ್ಯಾಣ ಯೋಜನೆಗಳು
ಪ್ರಚಾರ ಮತ್ತು ಜಾಹಿರಾತು
ಜನರಲ್ಲಿ ಅರಿವು ಮೂಡಿಸುವುದು
6. ಭಾರತದಲ್ಲಿ ಜನಸಾಂದ್ರತೆಯ ವಲಯಗಳನ್ನು ವಿವರಿಸಿ.
ಅಧಿಕ ಜನಸಾಂದ್ರತೆ ಪ್ರದೇಶಗಳು: ಇವು ಪ್ರತಿ ಚ.ಕಿ.ಮೀಗೆ 501ಕ್ಕೂ ಹೆಚ್ಚು ಜನರು ವಾಸಿಸುವ ಪ್ರದೇಶಗಳನ್ನೊಳಗೊಂಡಿವೆ. ಉದಾ:–ಬಿಹಾರ, ಪಶ್ಚಿಮ ಬಂಗಾಳ, ಕೇರಳ ಮೊದಲಾದ ರಾಜ್ಯಗಳು.
ಸಾಧಾರಣ ಜನಸಾಂದ್ರತೆ ಪ್ರದೇಶಗಳು: ಇವು ಪ್ರತಿ ಚ.ಕಿ.ಮೀ.ಗೆ 251–500 ಜನರು ವಾಸಿಸುವ ಭಾಗಗಳನ್ನೊಳಗೊಂಡಿವೆ. ಉದಾ:– ಜಾರ್ಖಂಡ್, ಅಸ್ಸಾಂ, ಗೋವಾ ಮೊದಲಾದ ರಾಜ್ಯಗಳು
ಕಡಿಮೆ ಜನ ಸಾಂದ್ರತೆ ಪ್ರದೇಶಗಳು: ಪ್ರತಿ ಚ.ಕಿ.ಮೀ.ಗೆ 250 ಕ್ಕೂ ಕಡಿಮೆ ಜನರು ವಾಸಿಸುವ ಭಾಗಗಳು ಈ ವಲಯಕ್ಕೆ ಸೇರುತ್ತವೆ. ಉದಾ:– ಮಧ್ಯಪ್ರದೇಶ, ರಾಜಸ್ತಾನ, ಉತ್ತರಾಖಂಡ ಮೊದಲಾದ ರಾಜ್ಯಗಳು
7. ಭಾರತದಲ್ಲಿ ಕೆಲವು ಪ್ರದೇಶಗಳು ಅಧಿಕ ಜನಸಾಂದ್ರತೆಯನ್ನು ಹೊಂದಿರಲು ಕಾರಣಗಳೇನು?
ಫಲವತ್ತಾದ ಮಣ್ಣು
ನೀರಾವರಿ
ಸಾರಿಗೆ–ಸಂಪರ್ಕಗಳ ಅಭಿವೃದ್ಧಿ
8. ಭಾರತದ ಕೆಲವು ಭಾಗಗಳ ಕಡಿಮೆ ಜನ ಸಾಂದ್ರತೆಗೆ ಕಾರಣಗಳನ್ನು ಕುರಿತು ವಿವರಿಸಿ.
ಪರ್ವತ
ಬೆಟ್ಟ ಗುಡ್ಡಗಳ ಭಾಗಗಳು
ಅರಣ್ಯ ಪ್ರದೇಶ
ಕನಿಷ್ಠ ಉಷ್ಣಾಂಶವುಳ್ಳ ವಾಯುಗುಣ
ಅರೆಮರುಭೂಮಿ ವಾಯುಗುಣ

# ಅರ್ಥಶಾಸ್ತ್ರ

## 1. ಅಭಿವೃದ್ಧಿ

**ಕೊಟ್ಟಿರುವ ಹೇಳಿಕೆಗೆ ಹೆಚ್ಚು ಸೂಕ್ತ ಆಯ್ಕೆಯನ್ನು ಆರಿಸಿ ಬರೆಯಿರಿ:**

**1. "ಒಂದು ರಾಷ್ಟದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ" ಎಂದು ಹೇಳಿದವರು**
a) ಪ್ರೊ. ಕೋಲಿನ್ ಕ್ಲಾರ್ಕ್
b) ಅಮರ್ತ್ಯ ಸೇನ್
**c) ಪ್ರೊ. ಮೇಯರ್ ಮತ್ತು ಬಾಲ್ಡವಿನ್**
d) ಮಹಬೂಬ್ ಉಲ್ ಹಕ್
**2. ಆರ್ಥಿಕ ಅಭಿವೃದ್ಧಿ ಒಂದು**
a) ಪ್ರತಿಕ್ರಿಯೆ
b) ಕೌಶಲ
c) ಸೂಚ್ಯಂಕ
**d) ಪ್ರಕ್ರಿಯೆ**
**3. ಉತ್ಪಾದನಾಂಗಗಳ ಪೂರೈಕೆಯು ಈ ಕಾರಣದಿಂದಾಗಿ ಬದಲಾವಣೆಯಾಗುತ್ತದೆ**
**a) ಜನಸಂಖ್ಯಾ ಬೆಳವಣಿಗೆ ಮತ್ತು ತಾಂತ್ರಿಕತೆ**

b) ಜನಸಂಖ್ಯಾ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ

c) ವರಮಾನದ ಮಟ್ಟ ಮತ್ತು ಅದರ ಹಂಚಿಕೆಯಲ್ಲಿನ ಬದಲಾವಣೆ

d) ಜನರ ಅಭಿರುಚಿಗಳಲ್ಲಿನ ಬದಲಾವಣೆ

**4. ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು-ಸೇವೆಗಳ ಒಟ್ಟು ಮೌಲ್ಯ**

a) ತಲಾ ವರಮಾನ

b) ರಾಷ್ಟ್ರೀಯ ವರಮಾನ

**c) <u>ನೈಜ ರಾಷ್ಟ್ರೀಯ ವರಮಾನ</u>**

d) ನೈಜ ತಲಾ ವರಮಾನ

**5. ನೈಜ ರಾಷ್ಟ್ರೀಯ ವರಮಾನದಲ್ಲಿ 'ನೈಜ' ಎಂಬ ಪದ ಬಿಂಬಿಸುವುದು**

a) ಸರಕು-ಸೇವೆಗಳ ಮೌಲ್ಯವನ್ನು

**b) <u>ಜನರ ಕೊಳ್ಳುವ ಶಕ್ತಿಯನ್ನು</u>**

c) ಸರಕು-ಸೇವೆಗಳ ಪೂರೈಕೆಯನ್ನು

d) ಜನರ ಬೇಡಿಕೆಯನ್ನು

**6. ಆರ್ಥಿಕ ಅಭಿವೃದ್ಧಿಯು ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ಹೇಳಿದವರು**

a) ಪ್ರೊ. ಮೆಯರ್ ಮತ್ತು ಬಾಲ್ಡವಿನ್

b) ಅಮರ್ತ್ಯ ಸೇನ್

**c) <u>ಪ್ರೊ. ಕೋಲಿನ್ ಕ್ಲಾರ್ಕ್</u>**

d) ಮಹಬೂಬ್ ಉಲ್ ಹಕ್

**7. "ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ". ಇಲ್ಲಿ ದೀರ್ಘಾವಧಿಯೆಂದರೆ**

a) 10 ವರ್ಷಗಳು ಅಥವಾ ಅದಕ್ಕಿಂತ ಕಡಿಮೆ

b) 5 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು

c) 5 ವರ್ಷಗಳು ಅಥವಾ ಅದಕ್ಕಿಂತ ಕಡಿಮೆ

**d) <u>10 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು</u>**

**8. ಅಭಿವೃದ್ಧಿಯ ಉದ್ದೇಶಗಳಲ್ಲೊಂದು**

a) ಅಸಮಾನತೆಯ ಹೆಚ್ಚಳ

**b) <u>ವರಮಾನದ ಹೆಚ್ಚಳ</u>**

c) ಬಡತನದ ಹೆಚ್ಚಳ

d) ನಿರುದ್ಯೋಗದ ಹೆಚ್ಚಳ

**9. 1950ಕ್ಕಿಂತ ಮೊದಲೇ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಗುರುತಿಸಿಕೊಂಡ ರಾಷ್ಟ್ರಗಳು ಗುಂಪು**

a) ಅಮೇರಿಕ, ಕೆನಡಾ, ಸಿಂಗಪುರ, ಭಾರತ

b) ಅಮೇರಿಕ, ಆಸ್ಟ್ರೇಲಿಯಾ, ಮಲೇಷ್ಯಾ, ಚೀನಾ

**c) <u>ಅಮೇರಿಕ, ಕೆನಡಾ, ಜಪಾನ್, ಜರ್ಮನಿ</u>**

d) ಅಮೇರಿಕ, ಇಂಗ್ಲೆಂಡ್, ಜಪಾನ್, ಹಾಂಗ್ ಕಾಂಗ್

**10. 1950ರ ನಂತರದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಗುರುತಿಸಿಕೊಂಡ ರಾಷ್ಟ್ರಗಳು ಗುಂಪು**

a) ಸಿಂಗಪುರ, ಮಲೇಷ್ಯಾ, ಚೀನಾ, ಭಾರತ

b) ಆಸ್ಟ್ರೇಲಿಯಾ, ಮಲೇಷ್ಯಾ, ಚೀನಾ, ಭಾರತ

**c) <u>ಸಿಂಗಪುರ, ಹಾಂಗ್ ಕಾಂಗ್, ಮಲೇಷ್ಯಾ, ಚೀನಾ</u>**

d) ಹಾಂಗ್ ಕಾಂಗ್, ಭಾರತ, ಜರ್ಮನಿ, ಚೀನಾ

**11. ಸಂಯುಕ್ತ ರಾಷ್ಟ್ರದ ಪ್ರಕಾರ ಈ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾ ವರಮಾನ ಹೊಂದಿರುವ ರಾಷ್ಟ್ರಗಳೇ ಅನಾಭಿವೃದ್ಧಿ ರಾಷ್ಟ್ರಗಳು**

**a) <u>ಅಮೇರಿಕ, ಕೆನಡಾ, ಆಸ್ಟ್ರೇಲಿಯಾ</u>**

b) ಅಮೇರಿಕ, ಕೆನಡಾ, ಸಿಂಗಪುರ

c) ಸಿಂಗಪುರ, ಹಾಂಗ್ ಕಾಂಗ್, ಮಲೇಷ್ಯಾ

d) ಭಾರತ, ಚೀನಾ, ಇಂಗ್ಲೆಂಡ್

**12. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಒಂದು ಉತ್ತಮ ಉದಾಹರಣೆ**

**a) <u>ಭಾರತ</u>**

b) ಅಮೇರಿಕ

c) ಆಸ್ಟ್ರೇಲಿಯಾ

d) ಕೆನಡಾ

**13. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಒಂದು ಲಕ್ಷಣವೆಂದರೆ**

a) ಕಡಿಮೆ ಉತ್ಪಾದನೆ

**b) <u>ಕಡಿಮೆ ನಿರುದ್ಯೋಗ</u>**

c) ಕಡಿಮೆ ತಲಾ ವರಮಾನ

d) ಮೂಲಭೂತ ಸೌಲಭ್ಯಗಳ ಕೊರತೆ

**14. ಅನಾಭಿವೃದ್ಧಿ ರಾಷ್ಟ್ರಗಳಲ್ಲಿ ಪ್ರಮುಖವಾಗಿ ...... ಕಡಿಮೆ ಇರುವುದು.**

a) ನಿರುದ್ಯೋಗ

b) ಬಡತನ

**c) <u>ತಲಾ ವರಮಾನ</u>**

d) ಅನಕ್ಷರತೆ

**15. ಪ್ರಪಂಚದ ರಾಷ್ಟ್ರಗಳನ್ನು ಅಧಿಕ, ಮಧ್ಯಮ ಮತ್ತು ಕಡಿಮೆ ವರಮಾನ ಹೊಂದಿದ ರಾಷ್ಟ್ರಗಳೆಂದು ವರ್ಗೀಕರಿಸಿದ ಸಂಸ್ಥೆ**

**a) <u>ವಿಶ್ವ ಬ್ಯಾಂಕು</u>**

b) ರಿಜರ್ವ್ ಬ್ಯಾಂಕು

c) ವಿಶ್ವ ಸಂಸ್ಥೆ

d) ಐ.ಎಂ.ಎಫ್.

**16. ಇವುಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದರೆ**

a) ಅಧಿಕ ಮತ್ತು ಕಡಿಮೆ ವರಮಾನದ ರಾಷ್ಟ್ರಗಳು

**b) <u>ಮಧ್ಯಮ ಮತ್ತು ಕಡಿಮೆ ವರಮಾನದ ರಾಷ್ಟ್ರಗಳು</u>**

c) ಮಧ್ಯಮ ಮತ್ತು ಅಧಿಕ ವರಮಾನದ ರಾಷ್ಟ್ರಗಳು

d) ಅಧಿಕ, ಮಧ್ಯಮ ಮತ್ತು ಕಡಿಮೆ ವರಮಾನದ ರಾಷ್ಟ್ರಗಳು

**17.ಮಾನವ ಅಭಿವೃದ್ಧಿಯು ಇವುಗಳ ವಿಸ್ತರಣೆಯನ್ನು ಸೂಚಿಸುತ್ತದೆ**

**a) <u>ಮಾನವನ ಸಾಮರ್ಥ್ಯಗಳು</u>**

b) ಮಾನವನ ಚಟುವಟಿಕೆಗಳು

c) ಮಾನವನ ಆಲೋಚನೆಗಳು

d) ಮಾನವನ ಸಾಧನೆಗಳು

**18. ಜಾಗತಿಕ ಮಾನವ ಅಭಿವೃದ್ಧಿ ಹೊಣೆ ಹೊತ್ತಿರುವ ಸಂಸ್ಥೆ**

a) ವಿಶ್ವ ಬ್ಯಾಂಕು

b) ರಿಜರ್ವ್ ಬ್ಯಾಂಕು

**c) <u>ವಿಶ್ವ ಸಂಸ್ಥೆ</u>**

d) ಐ.ಎಂ.ಎಫ್.

**19. ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ದೊರಕುವ ಸಂಖ್ಯೆಯು ಇದಾಗಿರುತ್ತದೆ.**

a) ದೇಶದ ಒಟ್ಟು ಜನಸಂಖ್ಯೆ

**b) <u>ನೈಜ ರಾಷ್ಟ್ರೀಯ ವರಮಾನ</u>**

c) ತಲಾ ವರಮಾನ

d) ಲಿಂಗಾನುಪಾತ

**20. ಆರ್ಥಿಕ ಅಭಿವೃದ್ಧಿಯನ್ನು ಸೂಕ್ತವಾಗಿ ಅಳೆಯಬಹುದಾದಂಥ ಮಾಪನವೆಂದರೆ**

a) ತಲಾ ವರಮಾನ

b) ರಾಷ್ಟ್ರೀಯ ವರಮಾನ

c) ಜಾಗತಿಕ ಅಭಿವೃದ್ಧಿ ವರದಿ

**d) <u>ಮಾನವ ಅಭಿವೃದ್ಧಿ ಸೂಚ್ಯಂಕ</u>**

**21. ಇವರ ಪ್ರಕಾರ ಮಾನವನ ಸಾಮರ್ಥ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿಯಾಗಿದೆ**

a) ಪ್ರೊ. ಕೋಲಿನ್ ಕ್ಲಾರ್ಕ್

b) ಪ್ರೊ. ಮೆಯರ್ ಮತ್ತು ಬಾಲ್ಡವಿನ್

c) ಮಹಬೂಬ್ ಉಲ್ ಹಕ್

**d) ಅಮರ್ತ್ಯ ಸೇನ್**

**22. ಆರ್ಥಿಕ ಪ್ರಗತಿಯ ಮುಖ್ಯ ಉದ್ದೇಶ**

a) ತಲಾ ವರಮಾನವನ್ನು ಹೆಚ್ಚಿಸುವುದು

b) ರಾಷ್ಟ್ರೀಯ ವರಮಾನವನ್ನು ಹೆಚ್ಚಿಸುವುದು

**c) ಜನರ ಕಲ್ಯಾಣವನ್ನು ಹೆಚ್ಚಿಸುವುದು**

d) ಉತ್ಪಾದನೆಯನ್ನು ಹೆಚ್ಚಿಸುವುದು

**23. ರಾಷ್ಟ್ರಗಳ ಆರ್ಥಿಕ ಪ್ರಗತಿಯನ್ನು ಮಾಪನ ಮಾಡಲು 'ಮಾನವ ಅಭಿವೃದ್ಧಿ ಸೂಚ್ಯಂಕ'ವನ್ನು ರಚಿಸಿದವರು**

a) ವಿಶ್ವಬ್ಯಾಂಕಿನ ಜಾಗತಿಕ ಅಭಿವೃದ್ಧಿ ವರದಿ

**b) ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವಿಭಾಗ**

c) ಪ್ರೊ. ಮೆಯರ್ ಮತ್ತು ಬಾಲ್ಡವಿನ್

d) ಅಮರ್ತ್ಯ ಸೇನ್

**24. ರಾಷ್ಟ್ರದ ಶಿಕ್ಷಣದ ಸಾಧನೆಯನ್ನು .... ವರ್ಷದ ಮಕ್ಕಳು ಪಡೆಯಬಹುದಾದ ಶಿಕ್ಷಣದ ಅವಧಿಯನ್ನು ಬಳಸಿ ಮಾಪನ ಮಾಡಲಾಗುತ್ತದೆ.**

**a) 5**

b) 10

c) 15

d) 25

**25. 2014ರಲ್ಲಿದ್ದಂತೆ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ**

a) 0.568

**b) 0.586**

c) 0.856

d) 0.865

**26. 2014ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಂತೆ ಭಾರತದ ಸ್ಥಾನ**

a) 153

b) 187

**c) 135**

d) 178

**27. 2011ರ ಜನಗಣತಿಯ ಪ್ರಕಾರ ಬಾರತದಲ್ಲಿನ ಲಿಂಗಾನುಪಾತ**

a) 954

**b) 945**

c) 594

d) 1000

**28. 2011ರ ಜನಗಣತಿ ಪ್ರಕಾರ ಭಾರತದ ಮಹಿಳಾ ಸಾಕ್ಷರತಾ ಪ್ರಮಾಣ**

a) 56.46%

b) 64.56%

**c) 65.46%**

d) 46.65%

**29. 2011ರ ಜನಗಣತಿ ಪ್ರಕಾರ ಭಾರತದ ಪುರುಷರ ಸಾಕ್ಷರತಾ ಪ್ರಮಾಣ**

a) 84.21%

b) 81.24%

c) 41.82%

**d) 82.14%**

**30. ಈ ಮೂರು ಸೂಚಿಗಳ ಸರಾಸರಿಯೇ ಮಾನವ ಅಭಿವೃದ್ಧಿ ಸೂಚ್ಯಂಕವಾಗಿದೆ.**

a) ರಾಷ್ಟ್ರೀಯ ವರಮಾನ, ತಲಾ ವರಮಾನ, ನಿರೀಕ್ಷಿತ ಜೀವಿತಾವಧಿ

b) ತಲಾ ವರಮಾನ, ಸಾಮಾಜಿಕ ಭದ್ರತೆ, ಶಿಕ್ಷಣದ ಮಟ್ಟ

c) ಶಿಕ್ಷಣದ ಮಟ್ಟ, ನಿರೀಕ್ಷಿತ ಜೀವಿತಾವಧಿ, ಸಾಮಾಜಿಕ ಭದ್ರತೆ

**d) ನಿರೀಕ್ಷಿತ ಜೀವಿತಾವಧಿ, ಶಿಕ್ಷಣದ ಮಟ್ಟ, ತಲಾ ವರಮಾನ**

**ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಆರ್ಥಿಕ ಅಭಿವೃದ್ಧಿಯು ಒಂದು ________ (ಪ್ರಕ್ರಿಯೆ)
2. ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು-ಸೇವೆಗಳ ಮೌಲ್ಯವನ್ನು ________ ಎನ್ನುವರು. (ರಾಷ್ಟ್ರೀಯ ವರಮಾನ)
3. ಅನಾಭಿವೃದ್ಧಿ ರಾಷ್ಟ್ರದಲ್ಲಿ ಪ್ರಮುಖವಾಗಿ ________ ಕಡಿಮೆ ಇರುವುದು. (ತಲಾವರಮಾನ)
4. ಮಾನವ ಅಭಿವೃದ್ಧಿಯು ________ ಗಳ ವಿಸ್ತರಣೆಯನ್ನು ಸೂಚಿಸುತ್ತದೆ. (ಕನಿಷ್ಠ ಅವಶ್ಯಕತೆ)
5. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ________ (ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ)
6. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ________ ನೆಯ ಸ್ಥಾನ ಹೊಂದಿತ್ತು. (135)
7. 2011ನೇ ಸಾಲಿನಲ್ಲಿ ಭಾರತದಲ್ಲಿ ಲಿಂಗ ಅನುಪಾತವು ________ ಇತ್ತು.(945)

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ರಾಷ್ಟ್ರೀಯ ವರಮಾನ ಎಂದರೇನು?

ರಾಷ್ಟ್ರೀಯ ವರಮಾನವು ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು-ಸೇವೆಗಳ ಒಟ್ಟು ಮೌಲ್ಯವಾಗಿದೆ.

2. ಅನಾಭಿವೃದ್ಧಿ ಎಂದರೇನು?

ದೇಶದ ಒಟ್ಟು ಉತ್ಪಾದನೆ ಕಡಿಮೆ ಇದ್ದು, ಜನಸಂಖ್ಯೆ ಹೆಚ್ಚಾಗಿ, ತಲಾ ವರಮಾನ ಕಡಿಮೆ ಇರುವ ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಅನಾಭಿವೃದ್ಧಿ ಎನ್ನಬಹುದು.

3. ತಲಾ ವರಮಾನವನ್ನು ಹೇಗೆ ಕಂಡು ಹಿಡಿಯಲಾಗುತ್ತದೆ?

ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ತಲಾ ವರಮಾನ ಲಭ್ಯವಾಗುತ್ತದೆ.

4. ಅಭಿವೃದ್ಧಿ ಎಂದರೇನು?

ಒಂದು ಸಮುದಾಯದ ಆಶೋತ್ತರಗಳನ್ನು ಈಡೇರಿಸುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯುತ್ತೇವೆ.

5. ಆರ್ಥಿಕ ಅಭಿವೃದ್ಧಿ ಎಂದರೇನು?

ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸುವುದರ ಜೊತೆಗೆ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು.

6. ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರು ಆರ್ಥಿಕ ಅಭಿವೃದ್ಧಿಯನ್ನು ಹೇಗೆ ವ್ಯಾಖ್ಯಾನಿಸಿದ್ದಾರೆ?

"ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ.

7. ಪ್ರಕ್ರಿಯೆ ಎಂದರೇನು?

ಅಭಿವೃದ್ಧಿಯ ಅರ್ಥೈಸುವಲ್ಲಿ ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುವುದೇ ಪ್ರಕ್ರಿಯೆ.

8. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎಂದರೇನು?
ತೀವ್ರತರ ಪ್ರಯತ್ನಗಳ ಮೂಲಕ ಅಭಿವೃದ್ಧಿ ಹೊಂದುವ ಸಾಮರ್ಥ್ಯವನ್ನು ಮತ್ತು ಆ ದೆಸೆಯಲ್ಲಿ ಅವುಗಳ ಪ್ರಯತ್ನಗಳನ್ನು ಗಮನಿಸಿ ಅವುಗಳನ್ನು 'ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು' ಎಂದು ಕರೆಯಲಾಗುತ್ತಿದೆ.

9. ಸಂಯುಕ್ತ ರಾಷ್ಟ್ರ ಸಂಘದ ಪ್ರಕಾರ ಅನಾಭಿವೃದ್ಧಿ ರಾಷ್ಟ್ರಗಳು ಎಂದರೇನು?
ಸಂಯುಕ್ತ ರಾಷ್ಟ್ರದ ಪ್ರಕಾರ "ಅಮೇರಿಕ, ಕೆನಡಾ, ಆಸ್ಟ್ರೇಲಿಯ ಮತ್ತು ಪಶ್ಚಿಮ ಯುರೋಪ್‌ನ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾ ವರಮಾನ ಹೊಂದಿರುವ ರಾಷ್ಟ್ರಗಳೇ ಅನಾಭಿವೃದ್ಧಿ ರಾಷ್ಟ್ರಗಳು".

10. ಮಾನವ ಅಭಿವೃದ್ಧಿ ಸೂಚಿಗಳು ಎಂದರೇನು?
ಮಾನವ ಅಭಿವೃದ್ಧಿ ಸೂಚ್ಯಂಕವು ಮಾನವನ ಅಭಿವೃದ್ಧಿಯನ್ನು ಮಾಪನ ಮಾಡುವ ಹೊಸ ಮಾನದಂಡವಾಗಿದೆ.

11. ಲಿಂಗ ಅನುಪಾತ ಎಂದರೇನು?
ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗ ಅನುಪಾತ ಎನ್ನುವರು.

12. 2011ರ ಜನಗಣತಿಯ ಅನುಸಾರ, ಈ ಲಿಂಗ ಅನುಪಾತವು ಎಷ್ಟಿತ್ತು?
945

13. 2011ರ ಜನಗಣತಿಯ ಪ್ರಕಾರ ಪುರುಷರು ಮತ್ತು ಮಹಿಳೆಯರ ಸಾಕ್ಷರತಾ ದರವು ಎಷ್ಟಿತ್ತು?
2011ರ ಜನಗಣತಿಯ ಪ್ರಕಾರ ಮಹಿಳೆಯರ ಸಾಕ್ಷರತಾ ದರವು ಶೇ. 65.46 ಇದ್ದರೆ, ಪುರುಷರ ಸಾಕ್ಷರತಾ ದರವು ಶೇ. 82.14 ಇದ್ದಿತು.

14. ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ. ಏಕೆ?
ಜನರ ಅಜ್ಞಾನ, ಅನಕ್ಷರತೆ, ಬಡತನ, ತಾಯಂದಿರ ಮರಣ, ಶಿಶುಗಳ ಮರಣ ಅಧಿಕವಾಗಿರುತ್ತದೆ. ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯೆಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ.

15. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?
ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

16. ಇಂದು ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ ಹೇಗೆ ಹೇಳುವಿರಿ?
ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿವೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ. ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

17. ಮಹಿಳಾ ಸಬಲೀಕರಣ ಎಂದರೇನು?
ಸಬಲೀಕರಣವನ್ನು ಈ ಹಿಂದೆ ಅವರಿಗೆ ನಿರಾಕರಿಸಲಾದ ಜೀವನದ ಮಹತ್ವದ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಬಹುದು.

18. ತಲಾ ವರಮಾನ ಎಂದರೇನು?
ತಲಾ ವರಮಾನವು ಒಂದು ದೇಶದ ಜನರ ಸರಾಸರಿ ವರಮಾನವಾಗಿದ್ದು, ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ದೊರಕುವ ಅಂಕಿಯಾಗಿದೆ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.
ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ "ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ. ಇದರಲ್ಲಿ ಬರುವ ಪ್ರಕ್ರಿಯೆ ಎಂದರೇ ಉತ್ಪಾದನಾಂಗಗಳ ಪೂರೈಕೆಯಲ್ಲಿನ ಹೊಸತನ ಮತ್ತು ಜನರ ಸರಕುಗಳ ಬೇಡಿಕೆಯಲ್ಲಿನ ಬದಲಾವಣೆಯನ್ನು ತಿಳಿಸುತ್ತದೆ.

2. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?
ಮುಂದುವರೆದ ರಾಷ್ಟ್ರಗಳಿಗೆ ಹೋಲಿಸಿದಂತೆ ತಲಾ ವರಮಾನದ ಕಡಿಮೆ ಇರುವುದೇ ಅನಾಭಿವೃದ್ಧಿಯಾಗಿದೆ.
ಅನಾಭಿವೃದ್ಧಿಗೆ ಪ್ರಮುಖ ಕಾರಣಗಳೆಂದರೆ
ಕಡಿಮೆ ಉತ್ಪಾದನೆ
ಅಪಾರ ಜನಸಂಖ್ಯೆ
ಕಡಿಮೆ ತಲಾ ವರಮಾನ.

3. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?
ಮಾನವ ಅಭಿವೃದ್ಧಿ ಸೂಚ್ಯಂಕವು ಮಾನವನ ಅಭಿವೃದ್ಧಿಯನ್ನು ಮಾಪನ ಮಾಡುವ ಹೊಸ ಮಾನದಂಡವಾಗಿದೆ.
ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಮಟ್ಟ ಮತ್ತು ತಲಾ ವರಮಾನ ಈ ಮೂರು ಅಂಶಗಳ ಸರಾಸರಿ ಆಧಾರದ ಮೇಲೆ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕ ಹಾಕಲಾಗುತ್ತದೆ.

4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.
ಬಡತನ ಮತ್ತು ನಿರುದ್ಯೋಗ
ಕಡಿಮೆ ತಲಾ ವರಮಾನ
ಮೂಲ ಸೌಕರ್ಯಗಳ ಕೊರತೆ
ಆರ್ಥಿಕ ಅಸಮಾನತೆ
ಕೃಷಿ ಹಿಂದುಳಿದಿರುವಿಕೆ

5. ಲಿಂಗ ಸಮಾನತೆಯನ್ನು ಹೇಗೆ ಸಾಧಿಸಬಹುದಾಗಿದೆ?
ಕಾನೂನು ಜಾರಿಗೊಳಿಸುವುದು
ಸಮಾನ ವೇತನ ಜಾರಿಗೆ ತರವುದು
ಶಿಕ್ಷಣ ನೀಡುವುದು
ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿ ನೀಡುವುದು
ಸಬಲೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು

## 2. ಗ್ರಾಮೀಣ ಅಭಿವೃದ್ಧಿ

**ಕೊಟ್ಟಿರುವ ಹೇಳಿಕೆಗೆ ಹೆಚ್ಚು ಸೂಕ್ತ ಆಯ್ಕೆಯನ್ನು ಆರಿಸಿ ಬರೆಯಿರಿ:**

**1. ಭಾರತ ಒಂದು**

a) ಪಟ್ಟಣಗಳ ದೇಶ
b) ನಗರಗಳ ದೇಶ
c) ಹಟ್ಟಿಗಳ ದೇಶ
**d) ಹಳ್ಳಿಗಳ ದೇಶ**

**2. ಭಾರತದಲ್ಲಿ 2011ರ ಜನಗಣತಿ ಪ್ರಕಾರ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರ ಪ್ರಮಾಣ**

**a) 68.84%**
b) 86.84%
c) 84.68%
d) 88.64%

**3. "ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ" ಎಂದು ಹೇಳಿದವರು**

a) ಅಮರ್ತ್ಯ ಸೇನ್

**b) <u>ಮಹಾತ್ಮಾ ಗಾಂಧಿಜೀ</u>**

c) ಜವಹರಲಾಲ್ ನೆಹರು

d) ಸರ್. ಎಂ. ವಿಶ್ವೇಶ್ವರಯ್ಯ

**4. ಪ್ರಸ್ತುತ ಭಾರತದಲ್ಲಿ ಸುಮಾರು .......... ರಷ್ಟು ಗ್ರಾಮೀಣ ಜನರು ಕಡು ಬಡತನದಿಂದ ಬಳಲುತ್ತಿದ್ದಾರೆ.**

**a) <u>ಮೂರನೆಯ ಒಂದರಷ್ಟು</u>**

b) ಎರಡನೆಯ ಒಂದರಷ್ಟು

c) ಮೂರನೆಯ ಎರಡರಷ್ಟು

d) ನಾಲ್ಕನೆಯ ಮೂರರಷ್ಟು

**5. ಭಾರತದಲ್ಲಿ ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿರುವ ಜನರ ಪ್ರಮಾಣ**

a) ಶೇ. 48

**b) <u>ಶೇ. 60</u>**

c) ಶೇ. 68

d) ಶೇ.64

**6. ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಪ್ರಮುಖ ಕಾರಣವೆಂದರೆ**

a) ದುಶ್ಚಟಗಳ ವ್ಯಾಮೋಹ

b) ಸಾಕ್ಷರತೆಯ ಹೆಚ್ಚಳ

**c) <u>ಕೃಷಿಯ ಸ್ಥಗಿತತೆ</u>**

d) ಕೈಗಾರಿಕೆಗಳ ಬೆಳವಣಿಗೆ

**7. ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ಹೀಗೆಂದು ಕರೆಯುತ್ತಾರೆ**

a) ಗ್ರಾಮೀಣಾಭಿವೃದ್ಧಿ

b) ಕೇಂದ್ರೀಕರಣ

**c) <u>ವಿಕೇಂದ್ರೀಕರಣ</u>**

d) ನಗರೀಕರಣ

**8. ಸಂವಿಧಾನದ ............ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು.**

**a) <u>73ನೆಯ ತಿದ್ದುಪಡಿ</u>**

b) 74 ನೆಯ ತಿದ್ದುಪಡಿ

c) 78 ನೆಯ ತಿದ್ದುಪಡಿ

d) 86 ನೆಯ ತಿದ್ದುಪಡಿ

**9. ಸಂವಿಧಾನಕ್ಕೆ 73ನೆಯ ತಿದ್ದುಪಡಿಯಾದ ವರ್ಷ**

a) 1990

b) 1991

c) 1992

**d) <u>1993</u>**

**10. ಸಂವಿಧಾನದ 73ನೆಯ ತಿದ್ದುಪಡಿಯ ಪ್ರಕಾರ ...... ಹಂತದ ಪಂಚಾಯತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ**

a) ಎರಡು

**b) <u>ಮೂರು</u>**

c) ನಾಲ್ಕು

d) ಐದು

**11. 73ನೆಯ ತಿದ್ದುಪಡಿ ಪ್ರಕಾರ ಅಸ್ತಿತ್ವಕ್ಕೆ ಬಂದ ಮೂರು ಹಂತದ ಪಂಚಾಯತ್ ವ್ಯವಸ್ಥೆಗಳಲ್ಲೊಂದು**

a) ನಗರಸಭೆ

b) ಪಟ್ಟಣ ಪಂಚಾಯತಿ

**c) <u>ಜಿಲ್ಲಾ ಪಂಚಾಯತಿ</u>**

d) ಮಹಾನಗರ ಪಾಲಿಕೆ

**12. ಇದು ಪಂಚಾಯತ್ ರಾಜ್ ವ್ಯವಸ್ಥೆಯ ತಳಹದಿಯಾಗಿದೆ**

a) ತಾಲ್ಲೂಕು ಪಂಚಾಯತಿ

b) ಜಿಲ್ಲಾ ಪಂಚಾಯತಿ

c) ಪುರಸಭೆ

**d) <u>ಗ್ರಾಮ ಸಭೆ</u>**

**13. ಅನಿವಾರ್ಯ ಕಾರಣಗಳಿಂದ ವಿಸರ್ಜನೆಗೊಂಡ ಪಂಚಾಯತಿಯ ಚುನಾವಣೆಯನ್ನು ......... ತಿಂಗಳುಗಳ ಒಳಗೇ ಕಡ್ಡಾಯವಾಗಿ ನಡೆಸಬೇಕು**

a) ಮೂರು

**b) <u>ಆರು</u>**

c) ಒಂಬತ್ತು

d) ಹನ್ನೆರಡು

**14. ಕರ್ನಾಟಕದಲ್ಲಿರುವ ಒಟ್ಟು ಜಿಲ್ಲಾ ಪಂಚಾಯತಿಗಳ ಸಂಖ್ಯೆ**

a) 28

b) 29

**c) <u>30</u>**

d) 32

**15. ಕರ್ನಾಟಕದಲ್ಲಿರುವ ಒಟ್ಟು ತಾಲ್ಲೂಕು ಪಂಚಾಯತಿಗಳ ಸಂಖ್ಯೆ**

a) 172

b) 174

c) 175

**d) <u>176</u>**

**16. ಕರ್ನಾಟಕದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ**

a) 6220

b) 6202

**c) <u>6022</u>**

d) 6032

**17. ಪಂಚಾಯತ್ ರಾಜ್ಯ ಸಂಸ್ಥೆಗಳು ಇವುಗಳ ಮೇಲ್ವಿಚಾರಣರ ಮತ್ತು ಅಭಿವೃದ್ಧಿಯ ಜವಾಬ್ದಾರಿ ಹೊಂದಿವೆ**

**a) <u>ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ</u>**

b) ಕಾಲೇಜು ಶಿಕ್ಷಣ

c) ವೈದ್ಯಕೀಯ ಶಿಕ್ಷಣ

d) ತಾಂತ್ರಿಕ ಶಿಕ್ಷಣ

**18. ಗ್ರಾಮ ಪಂಚಾಯತಿಯಲ್ಲಿನ ಅತ್ಯಂತ ಮಹತ್ವದ ಸಂಸ್ಥೆಯೆಂದರೆ**

a) ಮಕ್ಕಳ ಸಭೆ

b) ತಾಯಂದಿರ ಸಭೆ

c) ಪೋಷಕರ ಸಭೆ

**d) <u>ಗ್ರಾಮ ಸಭೆ</u>**

**19. ಇವರು ಗ್ರಾಮ ಸಭೆಯ ಸದಸ್ಯರಾಗಿರುತ್ತಾರೆ**

a) ಸಭೆಗೆ ಬಂದಿರುವ ಮತದಾರರು ಮಾತ್ರ

b) ಗ್ರಾಮ ಪಂಚಾಯತಿಯ ಸದಸ್ಯರು ಮಾತ್ರ

**c) <u>ಗ್ರಾಮದ ಎಲ್ಲ ಮತದಾರರು</u>**

d) ಗ್ರಾಮದ ಎಲ್ಲ ಜನರು

**20. ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಸರ್ಕಾರ ಜಾರಿಗೆ ತಂದಿರುವ ಯೋಜನೆ**

**a) <u>ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ</u>**

b) ಪ್ರಧಾನಮಂತ್ರಿ ಆವಾಸ್ ಯೋಜನೆ

c) ಅಂಬೇಡ್ಕರ್ – ವಾಲ್ಮೀಕಿ ವಸತಿ ಯೋಜನೆ

d) ಆಶ್ರಯ ಯೋಜನೆ

**21. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ......... ಅಸ್ಥಿತ್ವಕ್ಕೆ ತರಲಾಗಿದೆ.**

a) ಗ್ರಾಮ ಪಂಚಾಯತಿ

b) ಗೃಹ ಕೈಗಾರಿಕೆ

c) ಮಹಿಳಾ ಆಂದೋಲನ

**d) ಮಹಿಳಾ ಸ್ವಸಹಾಯ ಸಂಘ**

**22. ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳನ್ನು ಸಮರ್ಪಕವಾಗಿ ವಿತರಿಸಲು ಜಾರಿಗೆ ತಂದ ವ್ಯವಸ್ಥೆ**

a) ಸಾರಿಗೆ ವ್ಯವಸ್ಥೆ

b) ಮಾರುಕಟ್ಟೆ ವ್ಯವಸ್ಥೆ

**c) ಪಡಿತರ ವ್ಯವಸ್ಥೆ**

d) ಪಂಚಾಯತ್ ರಾಜ್ಯ ವ್ಯವಸ್ಥೆ

**23. "ಗ್ರಾಮ ಸ್ವರಾಜ್ಯ"ದ ಕಲ್ಪನೆ ಇವರ ಕೂಸು**

a) ಸರ್. ಎಂ. ವಿಶ್ವೇಶ್ವರಯ್ಯ

b) ಅಮರ್ತ್ಯ ಸೇನ್

**c) ಮಹಾತ್ಮಾ ಗಾಂಧಿಜೀ**

d) ಜವಹರಲಾಲ್ ನೆಹರು

**24. ವಿಕೇಂದ್ರೀಕರಣದಿಂದ ಇವುಗಳು ಹೆಚ್ಚಾಗುತ್ತವೆ**

a) ಶೋಷಣೆಗಳು

**b) ಮಾನವೀಯ ಮೌಲ್ಯಗಳು**

c) ದುಶ್ಚಟಗಳು

d) ಸಾಮಾಜಿಕ ಪಿಡುಗುಗಳು

**25. ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಗ್ರಾಮೀಣ ಮಹಿಳೆಯೂ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾರಣವಾಗಿರುವ ಪ್ರಮುಖಾಂಶ**

**a) ಮಹಿಳಾ ಮೀಸಲಾತಿ**

b) ಮಹಿಳಾ ಶಿಕ್ಷಣ

c) ಮಹಿಳಾ ಸ್ವಸಹಾಯ ಸಂಘ

d) ಮಹಿಳಾ ಕಾನೂನು

**26. ಪಂಚಾಯತ್ ರಾಜ್ಯ ಸಂಸ್ಥೆಗಳ ಒಂದು ಮಹತ್ವದ ಕಾರ್ಯವೆಂದರೆ**

a) ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು

b) ಪೌರಸಂಸ್ಥೆಗಳ ಮೇಲ್ವಿಚಾರಣೆ ಮಾಡುವುದು

**c) ಸ್ಥಳೀಯ ಯೋಜನೆಗಳನ್ನು ಸಿದ್ಧಪಡಿಸುವುದು**

d) ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವುದು

**27. ಗ್ರಾಮೀಣ ಭಾಗದಲ್ಲಿ 'ಮಹಿಳಾ ಸ್ವಸಹಾಯ ಸಂಘ'ಗಳನ್ನು ಸ್ಥಾಪಿಸುವ ಉದ್ದೇಶ**

**a) ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಭಿಗಳನ್ನಾಗಿಸುವುದು**

b) ಮಹಿಳೆಯರನ್ನು ರಾಜಕೀಯವಾಗಿ ಸ್ವಾವಲಂಭಿಗಳನ್ನಾಗಿಸುವುದು

c) ಸರ್ಕಾರದಿಂದ ಸಾಲ ಪಡೆಯುವುದು

d) ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದು

**28. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಉದ್ದೇಶ**

a) ಸಂವಿಧಾನಕ್ಕೆ 73ನೇ ತಿದ್ದುಪಡಿ ತರುವುದು

**b) ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದು**

c) ಲಿಂಗಾನುಪಾತ ಹೆಚ್ಚಿಸುವುದು

d) ಮಹಿಳೆಯರನ್ನು ರಾಜಕೀಯವಾಗಿ ಸ್ವಾವಲಂಭಿಗಳನ್ನಾಗಿಸುವುದು

**29. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಕಾರಣ**

a) ನಾಗರೀಕ ಸೇವಾ ಪದ್ಧತಿ ಜಾರಿಗೆ ಬಂದಿತು

b) ಮೀಸಲಾತಿ ಪದ್ಧತಿ ಜಾರಿಗೆ ಬಂದಿತು

c) ಸಂಸತ್ತಿನ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲಾಯಿತು

**d) ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ಥಿತ್ವಕ್ಕೆ ಬಂದವು**

**೩೦. ಇದು ಪಂಚಾಯತ್ ರಾಜ್ಯ ಸಂಸ್ಥೆಗಳ ಕಾರ್ಯವಲ್ಲ**

**a) ಅಣೆಕಟ್ಟುಗಳ ನಿರ್ಮಾಣ**

b) ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

c) ಕೆರೆ ಕಟ್ಟೆಗಳ ನಿರ್ಮಾಣ

d) ಕಿರು ನೀರಾವರಿ ಯೋಜನೆಗಳ ನಿರ್ವಹಣೆ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು________ (ಮಹಾತ್ಮ ಗಾಂಧೀಜಿ)
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ ________ ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ. (ಮೂರು)
3. ಪಂಚಾಯತ್ ಸಂಸ್ಥೆಗಳು ______ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. (ವಿಕೇಂದ್ರೀಕರಣ)
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ______ ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. (ಮಹಿಳಾ ಸ್ವಸಹಾಯ ಸಂಘ).

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.

ಗ್ರಾಮೀಣ ಅಭಿವೃದ್ಧಿಯು ಗ್ರಾಮಗಳ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ಸಾಧಿಸುವ ಒಂದು ಪ್ರಕ್ರಿಯೆ ಎಂದು ಅರ್ಥೈಸಬಹುದು.

2. ವಿಕೇಂದ್ರೀಕರಣ ಎಂದರೇನು?

ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ.

3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.

ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ

4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.

ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್–ವಾಲ್ಮೀಕಿ ಯೋಜನೆ, ಆಶ್ರಯ ಯೋಜನೆ.

5. 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮದ ಅಭಿವೃದ್ಧಿ' ಎಂದವರು ಯಾರು?

ಮಹಾತ್ಮ ಗಾಂಧೀಜಿ.

6. 2011ರ ಜನಗಣತಿಯ ಪ್ರಕಾರ ಎಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ?

ಶೇ.68.84ರಷ್ಟು

7. ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವೇನು?

ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಅತ್ಯಂತ ಪ್ರಮುಖ ಕಾರಣವಾಗಿದೆ.

8. ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಯಾವುದನ್ನು ಕರೆದರು?

ಅಧಿಕಾರದ ವಿಕೇಂದ್ರೀಕರಣ ಮತ್ತು ಸ್ವಯಂ ಗ್ರಾಮ ಸ್ಥಳೀಯ ಸರಕಾರಗಳನ್ನು ಹಾಗೂ ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯನ್ನು ಗಾಂಧೀಜಿ ಗ್ರಾಮ ಸ್ವರಾಜ್ಯ ಎಂದರು.

9. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಪುನರುಜ್ಜೀವನ ಮಾಡಲಾಗಿದೆ?
ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪುನರುಜ್ಜೀವನ ಮಾಡಲಾಗಿದೆ.

10. ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಯಾವಾಗ ಅಸ್ಥಿತ್ವಕ್ಕೆ ಬಂದವು?
1993

11. ಸಂವಿಧಾನದ ಯಾವ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಯಿತು?
73ನೆ ತಿದ್ದುಪಡಿ.

12. ಕರ್ನಾಟಕದಲ್ಲಿ ಎಷ್ಟು ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳಿವೆ?
ಕರ್ನಾಟಕದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಮತ್ತು 6,022 ಗ್ರಾಮ ಪಂಚಾಯತಿಗಳಿವೆ.

**III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
ಕೃಷಿ & ಹೈನುಗಾರಿಕೆಗೆ ಪ್ರಾಶಸ್ತ್ಯ
ನಶಿಸುತ್ತಿರುವ ಗೃಹ & ಸಣ್ಣ ಕೈಗಾರಿಕೆಗಳು
ಬಡತನ
ನಿರುದ್ಯೋಗ
ನೈರ್ಮಲ್ಯದ ಕೊರತೆ
ಅನಕ್ಷರತೆ & ಮೌಢ್ಯತೆ
ಮೂಲಭೂತ ಸೌಕರ್ಯಗಳ ಕೊರತೆ.

2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿ
ಅಧಿಕ ಕೃಷಿ ವರಮಾನ
ಔದ್ಯಮಿಕ ಸರಕು–ಸೇವೆಗಳಿಗೆ ಬೇಡಿಕೆ ಹೆಚ್ಚಳ
ಅಧಿಕ ಉದ್ಯೋಗ ಸೃಷ್ಟಿ
ಶಿಕ್ಷಣ ಮತ್ತು ಕೌಶಲಗಳಿಂದಾಗಿ ಹೆಚ್ಚಿನ ಉತ್ಪಾದಕತೆ
ರಾಷ್ಟ್ರೀಯ ಉತ್ಪನ್ನ ಹೆಚ್ಚಳ
ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ
ಬಡತನದ ಇಳಿಕೆ.

3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.
ಗ್ರಾಮದ ಆಡಳಿತಾಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ.
ಇದರಿಂದ ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆಯೂ ಹೆಚ್ಚಳವಾಗುತ್ತದೆ.
ಇದು ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯಾಗಿದೆ.
ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ.
ಮಾನವನ ಸ್ವಾತಂತ್ರ್ಯ & ಘನತೆಯನ್ನು ಸಂರಕ್ಷಿಸುತ್ತದೆ.
ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.

4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?
ಮೂಲಭೂತ ಸೌಕರ್ಯ ಕಲ್ಪಿಸುವುದು
ಉದ್ಯೋಗಾವಕಾಶಗಳನ್ನು ಒದಗಿಸುವುದು
ಕೃಷಿಗೆ ನೀರಾವರಿ ವಿಸ್ತರಣೆ
ಗೃಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು
ಬಡತನ, ನಿರುದ್ಯೋಗದ ನಿವಾರಣೆ
ಗ್ರಾಮೀಣ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು
ಅರ್ಹರಿಗೆ ಸರ್ಕಾರದ ಸೌಲಭ್ಯ ಒದಗಿಸುವುದು

5. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳು ಯಾವುವು?
ಮಾನವ ಸಂಪನ್ಮೂಲ ಅಭಿವೃದ್ಧಿ
ಮಹಿಳಾ ಸಾಕ್ಷರತೆ, ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ
ನೈರ್ಮಲ್ಯ & ಸಾರ್ವಜನಿಕ ಆರೋಗ್ಯದ ಸುಧಾರಣೆ
ಭೂ ಸುಧಾರಣೆ
ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ
ಮೂಲಭೂತ ಸೌಕರ್ಯಗಳ ಅಭಿವೃದ್ಧಿ
ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು

6. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು?
ಮೂರು ಹಂತದ ಪಂಚಾಯತಿ ವ್ಯವಸ್ಥೆ
ನೇರ ಹಾಗೂ ನಿಯಮಿತ ಚುನಾವಣೆಗಳು
ವಿವಿಧ ವರ್ಗಗಳಿಗೆ ಮೀಸಲಾತಿ
ಹಣಕಾಸು, ಆಡಳಿತಾತ್ಮಕ, ಮೊದಲಾದ ಜವಾಬ್ದಾರಿಗಳು
ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ
ಪಂಚಾಯತ್ ವಿಸರ್ಜನೆಗೆ ಕಟ್ಟು ನಿಟ್ಟಿನ ಕ್ರಮಗಳು
ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೇ ಕಡ್ಡಾಯ ಚುನಾವಣೆ

7. ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.
ಗ್ರಾಮೀಣ ಮಹಿಳೆಯರ ಸಬಲೀಕರಣ
ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆ
ಗ್ರಾಮೀಣ ಮಹಿಳೆಯರಲ್ಲಿ ಉಳಿತಾಯಕ್ಕೆ ಪ್ರೋತ್ಸಾಹ
ಉತ್ಪಾದಕ ಚಟುವಟಿಗೆ ಸಾಲ ನೀಡುವುದು
ಕುಡಿತ, ಜೂಜು ಮೊದಲಾದ ದುಶ್ಚಟಗಳ ನಿಯಂತ್ರಣ
ಬಾಲ್ಯವಿವಾಹ, ಜಾತಿ ಪದ್ಧತಿ ಮೊದಲಾದ ಸಾಮಾಜಿಕ

# 3. ಹಣ ಮತ್ತು ಸಾಲ

**ಕೊಟ್ಟಿರುವ ಹೇಳಿಕೆಗೆ ಹೆಚ್ಚು ಸೂಕ್ತ ಆಯ್ಕೆಯನ್ನು ಆರಿಸಿ ಬರೆಯಿರಿ:**

1. ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಗಳು ----- ಪ್ರಕಾರದ ಹಣಕ್ಕೆ ಉದಾಹರಣೆಗಳಾಗಿವೆ.
ಎ) ವಸ್ತುರೂಪದ ಹಣ ಬಿ) ಕಾಗದದ ಹಣ
ಸಿ) ಬ್ಯಾಂಕ್ ಹಣ **ಡಿ) ಪ್ಲಾಸ್ಟಿಕ್ ಹಣ**
2. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು --ರಲ್ಲಿ ರಾಷ್ಟ್ರೀಕರಿಸಿತು.
ಎ) 1935 ಬಿ) 1949 **ಸಿ) 1969** ಡಿ) 1980
3. ಭಾರತ ಸರ್ಕಾರ 6 ವಾಣಿಜ್ಯ ಬ್ಯಾಂಕುಗಳನ್ನು --ರಲ್ಲಿ ರಾಷ್ಟ್ರೀಕರಿಸಿತು.
ಎ) 1935 ಬಿ) 1949 ಸಿ) 1969 **ಡಿ) 1980**
4. ಭಾರತೀಯ ರಿಜರ್ವ್ ಬ್ಯಾಂಕು ಸ್ಥಾಪನೆಯಾದ ವರ್ಷ
**ಎ) 1935** ಬಿ) 1949 ಸಿ) 1969 ಡಿ) 1980

**ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ:**

1. ಸಾಟಿ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ ________ ವಿನಿಮಯ ಮಾಡಲಾಗುತ್ತಿತ್ತು.(ವಸ್ತು)
2. ಚೆಕ್‌ಗಳು .............. ಹಣದ ಸಾಧನವಾಗಿವೆ.(ಬ್ಯಾಂಕ್)

3. ಭಾರತೀಯ ರಿಜರ್ವ್ ಬ್ಯಾಂಕು ಸ್ಥಾಪನೆಯಾದ ವರ್ಷ __________(1935)
4. ಜಪಾನ್ ದೇಶದ ಹಣವನ್ನು ______ ಎಂದು ಕರೆಯುತ್ತೇವೆ. (ಯೆನ್)
5. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು ............... ರಲ್ಲಿ ರಾಷ್ಟ್ರೀಕರಿಸಿತು. (1969)
6. ಕಿರಿದಾದ ಹಣದ ಪೂರೈಕೆಯನ್ನು _____ ಮತ್ತು _____ ಮೂಲಕ ಅಳೆಯುತ್ತೇವೆ.
7. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ _____ ಇದ್ದಾಗ ಸಂಭವಿಸುತ್ತದೆ. (ಜಾಸ್ತಿ).

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಹಣ ಎಂದರೇನು?

"ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ".

2. ಸಾಟಿ ವಿನಿಮಯ ಪದ್ಧತಿ ಎಂದರೇನು?

ಹಣವನ್ನು ಬಳಸದೆ ಸರಕುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದೇ ಸಾಟಿ ಮಿನಿಮಯ ಪದ್ಧತಿ.

3. ವಸ್ತು ರೂಪದ ಹಣಕ್ಕೆ ಉದಾಹರಣೆ ಕೊಡಿ.

ಗ್ರೀಸ್‌ನಲ್ಲಿ ಜಾನುವಾರುಗಳು; ರೋಮ್‌ನಲ್ಲಿ ಕುರಿಗಳು, ಚೀನಾದಲ್ಲಿ ಹಲ್ಲುಗಳು,

4. ಕಾಗದದ ಹಣಕ್ಕೆ ಉದಾಹರಣೆ ಕೊಡಿ.

ಭಾರತದಲ್ಲಿ ರೂಪಾಯಿ, ಅಮೇರಿಕದಲ್ಲಿ ಡಾಲರ್, ಇಂಗ್ಲೆಂಡಿನಲ್ಲಿ ಪೌಂಡ್, ಜಪಾನ್‌ನಲ್ಲಿ ಯೆನ್, ಚೀನಾದಲ್ಲಿ ಯುವಾನ್.

5. ಬ್ಯಾಂಕ್ ಹಣಕ್ಕೆ ಉದಾಹರಣೆ ಕೊಡಿ.

ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ

6. ಪ್ಲಾಸ್ಟಿಕ್ ಹಣಕ್ಕೆ ಉದಾಹರಣೆ ಕೊಡಿ.

ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್.

7. 'ಬ್ಯಾಂಕಿಂಗ್' ಎಂದರೇನು?

'ಬ್ಯಾಂಕಿಂಗ್' ಎಂದರೆ "ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದಲ್ಲದೇ, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದವುಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆಯೇ ಬ್ಯಾಂಕಿಂಗ್ ಆಗಿರುತ್ತದೆ".

8. ಭಾರತೀಯ ರಿಜರ್ವ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು?

1935ರ ಎಪ್ರಿಲ್ 1.

9. ಭಾರತೀಯ ರಿಜರ್ವ್ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣ ಮಾಡಲಾಯಿತು?

ಜನವರಿ 1, 1949.

10. ಭಾರತದಲ್ಲಿ ಒಂದು ರೂಪಾಯಿಯ ನೋಟನ್ನು ಯಾರು ಮುದ್ರಿಸಿ ಚಲಾಯಿಸುತ್ತಾರೆ?

ಒಂದು ರೂಪಾಯಿಯ ನೋಟನ್ನು ಸರ್ಕಾರದ ಪರವಾಗಿ ಆರ್‌ಬಿಐ ಮುದ್ರಿಸಿ ಚಲಾಯಿಸುತ್ತದೆ.

11. 'ಹಣಕಾಸು ನೀತಿ' ಎಂದರೇನು?

ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಒಟ್ಟಾಗಿ 'ಹಣಕಾಸು ನೀತಿ' ಎಂದು ಕರೆಯುತ್ತೇವೆ.

12. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ ನಾಲ್ಕು ಪರಿಕಲ್ಪನೆಗಳು ಯಾವುವು?

ಭಾರತದಲ್ಲಿ ಹಣ ಪೂರೈಕೆಯ M1, M2, M3 ಮತ್ತು M4 ಎಂಬ ನಾಲ್ಕು ಪರಿಕಲ್ಪನೆಗಳನ್ನು ಬಳಸಲಾಗುತ್ತದೆ.

– M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಉಳಿತಾಯ ಠೇವಣಿಗಳು
– M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು
– M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು
– M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು.

13. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M1 ಎಂದರೇನು?

ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಉಳಿತಾಯ ಠೇವಣಿಗಳು

14. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M2 ಎಂದರೇನು?

M1 (ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಉಳಿತಾಯ ಠೇವಣಿಗಳು) + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು.

15. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M3 ಎಂದರೇನು?

M1 (ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಉಳಿತಾಯ ಠೇವಣಿಗಳು) + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು;

16. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M4 ಎಂದರೇನು?

M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು.

17. ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದರೇನು?

ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಅಥವಾ ಬೇಡಿಕೆಯಾಧಾರದ ಮೇಲೆ ಹೊರ ತೆಗೆಯಬಹುದಾದ್ದರಿಂದ ಇವುಗಳನ್ನು ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದೂ ಕರೆಯುತ್ತಾರೆ.

**III. ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ**

1. ಹಣದ ಅರ್ಥ ಮತ್ತು ಕಾರ್ಯಗಳನ್ನು ವಿವರಿಸಿ.

ವಾಣಿಜ್ಯಿಕ ವ್ಯವಹಾರದಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ.

ಪ್ರಾಥಮಿಕ/ಮುಖ್ಯ ಕಾರ್ಯಗಳು

ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನ
ಮೌಲ್ಯ ನಿರ್ಣಯ

ಪೂರಕ ಕಾರ್ಯಗಳು

ವಿಳಂಬಿತ ಸಂದಾಯದ ಪ್ರಮಾಣ
ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ
ಮೌಲ್ಯ ಅಥವಾ ಖರೀದಿ ಶಕ್ತಿಯ ವರ್ಗಾವಣೆ

2. ಬ್ಯಾಂಕುಗಳ ಮಹತ್ವವನ್ನು ವಿವರಿಸಿ.

ಬಂಡವಾಳ ಸಂಗ್ರಹಣೆ ಮತ್ತು ಸಂಚಯನ
ಹಣಸಂದಾಯದ ಅನುಕೂಲಕರ
ನಿರ್ದಿಷ್ಟ ಅವಧಿ ಠೇವಣಿಗಳಿಗೆ ಅಧಿಕ ಬಡ್ಡಿ ದರ ನೀಡಿಕೆ
ವಿವಿಧ ವಲಯಗಳ ಅಭಿವೃದ್ಧಿಗಾಗಿ ಸಾಲ ನೀಡಿಕೆ
ಹುಂಡಿಗಳನ್ನು ವಟ್ಟಾಯಿಸುವುದು

ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನು ನೀಡುವುದು.

3. ಆರ್‌ಬಿಐನ ಕಾರ್ಯಗಳು ಯಾವುವು?
ನೋಟು ಚಲಾವಣೆಯ ಏಕಸ್ವಾಮ್ಯ
ಸರ್ಕಾರದ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ
ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ
ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ
ಸಾಲ ಪ್ರಮಾಣದ ನಿಯಂತ್ರಕ
ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ
ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ

4. ಆರ್‌ಬಿಐ ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ.
ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು
- ಬ್ಯಾಂಕ್ ದರ
- ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
- ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು

ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು
- ಮಾರ್ಜಿನ್ ಪ್ರಮಾಣದ ಬದಲಾವಣೆ
- ಸಾಲದ ಗರಿಷ್ಠ ಮಿತಿ ನಿಗದಿ / ಸಾಲದ ಪಡಿತರ
- ನೈತಿಕ ಒತ್ತಡ
- ನೇರ ಕ್ರಮ

## 4. ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

**ಬಹುಆಯ್ಕೆ ಪ್ರಶ್ನೆಗಳು:**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು ---- ನೀತಿಯ ಮೂಲಕ ನಿರ್ವಹಿಸುತ್ತದೆ.
ಎ) ಯೋಜನಾ ನೀತಿ ಬಿ) ಆಯವ್ಯಯ ನೀತಿ
**ಸಿ) ಕೋಶೀಯ ನೀತಿ** ಡಿ) ಪ್ರಗತಿಪರ ನೀತಿ
2. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ --- ಮಂಡಿಸುತ್ತಾರೆ.
ಎ) ಪ್ರಧಾನ ಮಂತ್ರಿ **ಬಿ) ಹಣಕಾಸು ಮಂತ್ರಿ**
ಸಿ) ರಕ್ಷಣಾ ಮಂತ್ರಿ ಡಿ) ರಾಷ್ಟ್ರಪತಿ
3. ಆಯ-ವ್ಯಯದಲ್ಲಿ ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ----- ಎಂದು ಕರೆಯುತ್ತಾರೆ.
**ಎ) ಉಳಿತಾಯ ಆಯವ್ಯಯ**
ಬಿ) ಸಮತೋಲನ ಆಯವ್ಯಯ
ಸಿ) ಕೊರತೆಯ ಆಯವ್ಯಯ
ಡಿ) ಆಯವ್ಯಯ ಕೊರತೆ
4. ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳ ಸರ್ಕಾರಗಳು ದೇಶದ ಅಭಿವೃದ್ಧಿಯ ದೃಷ್ಟಿಯಿಂದ --------- ಆಯವ್ಯಯವನ್ನು ಮಂಡಿಸುತ್ತವೆ.
ಎ) ಉಳಿತಾಯ ಆಯವ್ಯಯ
ಬಿ) ಸಮತೋಲನ ಆಯವ್ಯಯ
**ಸಿ) ಕೊರತೆಯ ಆಯವ್ಯಯ**
ಡಿ) ಆಯವ್ಯಯ ಕೊರತೆ
5. ಜಿಎಸ್ಟಿ ---- ದಿನಾಂಕದಿಂದ ಜಾರಿಗೆ ಬಂದಿದೆ.
ಎ) ಜೂನ್ 1, 2016 ಬಿ) ಜುಲೈ 1, 2016
**ಸಿ) ಜುಲೈ 1, 2017** ಡಿ) ಜೂನ್ 1, 2017

**ಒಂದು ವಾಕ್ಯದಲ್ಲಿ ಉತ್ತರಿಸಿ.**

1. 'ವೈಯಕ್ತಿಕ ಹಣಕಾಸು' ಎಂದರೇನು?
ವ್ಯಕ್ತಿ ಅಥವಾ ಕುಟುಂಬದ ವರಮಾನ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು 'ವೈಯಕ್ತಿಕ ಹಣಕಾಸು' ಎನ್ನುತ್ತೇವೆ.

2. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.
ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು.

3. ಕೋಶೀಯ ನೀತಿ ಅಥವಾ ವಿತ್ತೀಯ ನೀತಿ ಎಂದರೇನು?
ಸರ್ಕಾರವು ತನ್ನ ವರಮಾನ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ ಅಥವಾ ವಿತ್ತೀಯ ನೀತಿ ಎನ್ನುತ್ತಾರೆ.

4. ಭಾರತದಲ್ಲಿ ಹಣಕಾಸು ವರ್ಷವು ಯಾವಾಗ ಆರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ?
ಭಾರತದಲ್ಲಿ ಹಣಕಾಸು ವರ್ಷವು ಏಪ್ರಿಲ್ 1ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31ಕ್ಕೆ ಮುಕ್ತಾಯವಾಗುತ್ತದೆ.

5. ಆಯವ್ಯಯ ಎಂದರೇನು?
ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ-ವ್ಯಯ ಪತ್ರ/ಮುಂಗಡ ಪತ್ರ ಎಂದು ಕರೆಯುತ್ತಾರೆ.

6. ಭಾರತದಲ್ಲಿ ಆಯ-ವ್ಯಯವನ್ನು ಮಂಡಿಸುವವರು ಯಾರು?
ಕೇಂದ್ರ ಹಣಕಾಸು ಸಚಿವರು.

7. ಆಯ-ವ್ಯಯ ಪತ್ರದ ಮೂರು ವಿಧಗಳು ಯಾವುವು?
ಉಳಿತಾಯ ಆಯವ್ಯಯ-
ಕೊರತೆಯ ಆಯವ್ಯಯ-
ಸಮತೋಲನ ಆಯವ್ಯಯ.

8. ಸಾರ್ವಜನಿಕ ವೆಚ್ಚ ಎಂದರೇನು?
ಸರ್ಕಾರವು ತನ್ನ ಪ್ರಜೆಗಳ ಹಿತದೃಷ್ಟಿಯಿಂದ ಮಾಡುವ ವೆಚ್ಚವೇ ಸಾರ್ವಜನಿಕ ವೆಚ್ಚ.

9. ಕಂದಾಯ ವರಮಾನ ಎಂದರೇನು?
ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ವರಮಾನವನ್ನು ಕಂದಾಯ ವರಮಾನ ಎಂದು ಕರೆಯುತ್ತಾರೆ.

10. ತೆರಿಗೆ ಎಂದರೇನು?
ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯನ್ನು ತೆರಿಗೆ ಎನ್ನುತ್ತೇವೆ.

11. ಪ್ರಗತಿಪರ ತೆರಿಗೆ ನೀತಿ ಎಂದರೇನು?
ಶ್ರೀಮಂತರು ಬಳಸುವ ಸರಕು-ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು-ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುವಲ್ಲಿ ಸರ್ಕಾರ ಅನುಸರಿಸುವ ಈ ನೀತಿಯನ್ನು ಪ್ರಗತಿಪರ ತೆರಿಗೆ ನೀತಿ ಎನ್ನುತ್ತಾರೆ.

12. ಪ್ರತ್ಯಕ್ಷ ತೆರಿಗೆ ಎಂದರೇನು?
ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ತೆರಿಗೆಯನ್ನು ಪಾವತಿಸಿದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ.

13. ಪರೋಕ್ಷ ತೆರಿಗೆ ಎಂದರೇನು?
ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ.

14. ಒಂದೇ ಸರಕು ಮತ್ತು ಸೇವಾ ತೆರಿಗೆ (GST) ಯಾವಾಗ ಜಾರಿಗೆ ಬಂದಿತು?

15. ಹೂಡಿಕೆ ಹಿಂತೆಗೆತ ಎಂದರೇನು?
ಸರ್ಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುವುದನ್ನೇ ಹೂಡಿಕೆ ಹಿಂತೆಗೆತ ಎನ್ನುತ್ತಾರೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳನ್ನು ವಿವರಿಸಿ
ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು
-ಉದ್ಯಮ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು
-ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು
-ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು
-ಸಂಪೂರ್ಣ ಉದ್ಯೋಗ ಸಾಧಿಸುವುದು
-ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು
-ಸಾಮಾಜಿಕ-ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು.

2. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ. ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳು ಯಾವುವು?
ಭಾರತೀಯ ರಿಜರ್ವ್ ಬ್ಯಾಂಕು ಗಳಿಸುವ ಲಾಭ
-ಭಾರತೀಯ ರೈಲ್ವೆ ಗಳಿಸುವ ಲಾಭ
-ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ
-ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ
-ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ
-ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

3. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ
ದೇಶದ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುತ್ತದೆ.
-ಆದಾಯವು ಎಲ್ಲಾ ಪ್ರಜೆಗಳಲ್ಲಿ ಸಮಾನವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳುತ್ತದೆ.
-ಆದ್ಯತಾ ವಲಯಗಳಲ್ಲಿ ಬಂಡವಾಳ ಹೂಡಿಕೆಯು ಹೆಚ್ಚುವಂತೆ ಮಾಡುತ್ತದೆ.
-ಆರ್ಥಿಕ ಏರಿಳಿತ &ಹಣದುಬ್ಬರ ಮೊದಲಾದವುಗಳನ್ನು ನಿಯಂತ್ರಿಸುತ್ತದೆ.
-ಬಡತನ ಮತ್ತು ನಿರುದ್ಯೋಗದಂತಹ ಸಮಸ್ಯೆಗಳನ್ನು ಹೋಗಲಾಡಿಸಲು ಪ್ರಯತ್ನಿಸುತ್ತದೆ.
-ಅರ್ಥವ್ಯವಸ್ಥೆಯ ಎಲ್ಲಾ ಕ್ಷೇತ್ರಗಳು ಅಭಿವೃದ್ಧಿ ಹೊಂದುವಂತೆ ಮಾಡಲು ಪ್ರಯತ್ನಿಸುತ್ತದೆ.

4. ಆಯ-ವ್ಯಯ ಪತ್ರದ ವಿಧಗಳನ್ನು ವಿವರಿಸಿ.
ಉಳಿತಾಯ ಆಯವ್ಯಯ- ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ.
- ಕೊರತೆಯ ಆಯವ್ಯಯ- ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿರುತ್ತದೆ.
-ಸಮತೋಲನ ಆಯವ್ಯಯ- ವರಮಾನ ಮತ್ತು ವೆಚ್ಚಗಳೆರಡೂ ಸಮನಾಗಿರುತ್ತವೆ.

# ವ್ಯವಹಾರ ಅಧ್ಯಯನ

## 1. ಬ್ಯಾಂಕು ವ್ಯವಹಾರ

**ಬಹುಆಯ್ಕೆ ಪ್ರಶ್ನೆಗಳು:**

**1. ಬ್ಯಾಂಕ್ ಎಂಬ ಪದವು ಫ್ರೆಂಚಿನ ---- ಶಬ್ದದಿಂದ ಬಂದಿದೆ.**

**ಎ) ಬ್ಯಾಂಕ್** ಬಿ) ಬ್ಯಾಂಕೊ ಸಿ) ಬೆಂಚು ಡಿ) ಬ್ಯಾಂಕಿಂಗ್

**2. ಬ್ಯಾಂಕೊ ಎಂಬ ಪದವು -------- ಭಾಷೆಯ ಪದವಾಗಿದೆ.**

ಎ) ಫ್ರೆಂಚ್ ಬಿ) ಲ್ಯಾಟೀನ್ ಸಿ) ಗ್ರೀಕ್ **ಡಿ) ಇಟಾಲಿಯನ್**

**3. ಬ್ಯಾಂಕುಗಳ ಬ್ಯಾಂಕ್ ಎಂದು ಕರೆಯಲ್ಪಡುವ ಬ್ಯಾಂಕ್**

ಎ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್

ಬಿ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

**ಸಿ) ಭಾರತೀಯ ರಿಜರ್ವ್ ಬ್ಯಾಂಕ್**

ಡಿ) ಸಹಕಾರಿ ಬ್ಯಾಂಕ್

**4. ಬ್ಯಾಂಕ್ ಉದ್ಯಮದಲ್ಲಿನ ಇತ್ತೀಚಿನ ಬೆಳವಣಿಗೆ ಎಂದರೆ**

ಎ) ಬ್ಯಾಂಕುಗಳ ಖಾಸಗೀಕರಣ

ಬಿ) ಬ್ಯಾಂಕುಗಳ ರಾಷ್ಟ್ರೀಕರಣ

ಸಿ) ಎಲ್ಲಾ ಬ್ಯಾಂಕುಗಳ ಮೇಲೆ ಆರ್.ಬಿ.ಐ ನಿಯಂತ್ರಣ

**ಡಿ) ಅಂಚೆ ಕಛೇರಿಗಳನ್ನು ಸೇರಿಸಿರುವಿಕೆ**

**5. ಕಿಸಾನ್ ವಿಕಾಸ ಪತ್ರಗಳನ್ನು ನೀಡುವ ಸಂಸ್ಥೆ**

ಎ) ಭೂ ಅಭಿವೃದ್ಧಿ ಬ್ಯಾಂಕ್ ಬಿ) ಸಹಕಾರಿ ಬ್ಯಾಂಕ್

ಸಿ) ರಿಜರ್ವ್ ಬ್ಯಾಂಕ್ ಡಿ**) ಅಂಚೆ ಕಛೇರಿ**

**6. ದಿನವೊಂದಕ್ಕೆ ಎಷ್ಟು ಬಾರಿಯಾದರು ವ್ಯವಹರಿಸ ಬಹುದಾದ ಖಾತೆ**

ಎ) ಉಳಿತಾಯ ಖಾತೆ ಬಿ) ಆವರ್ತ ಠೇವಣಿ ಖಾತೆ

**ಸಿ) ಚಾಲ್ತಿ ಖಾತೆ** ಡಿ) ನಿಶ್ಚಿತ ಠೇವಣಿ ಖಾತೆ

**7. ಮದುವೆ, ಗೃಹ ನಿರ್ಮಾಣ, ಆಸ್ತಿ ಖರೀದಿ ಮೊದಲಾದ ಭವಿಷ್ಯದ ಅವಶ್ಯಕತೆಗಾಗಿ ಈ ಖಾತೆಯನ್ನು ತೆರೆಯಬಹುದು**

ಎ) ಉಳಿತಾಯ ಖಾತೆ ಬಿ**) ಆವರ್ತ ಠೇವಣಿ ಖಾತೆ**

ಸಿ) ಚಾಲ್ತಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:**

1. 'ಬ್ಯಾಂಕು ಠೇವಣಿದಾರ ಮತ್ತು ಸಾಲಗಾರರ ನಡುವೆ ಸಂಬಂಧ ಕಲ್ಪಿಸುವ ಕೊಂಡಿಯಾಗಿದೆ'. ಈ ಹೇಳಿಕೆಯನ್ನು ಸಮರ್ಥಿಸಿ
- ಬ್ಯಾಂಕು ಗ್ರಾಹಕರ ಉಳಿಕೆ ಹಣವನ್ನು ಠೇವಣಿಗಳ ಮೂಲಕ ಸಂಗ್ರಹಿಸಿ ಇದನ್ನು ಯಾರಿಗೆ ಅವಶ್ಯಕವಿದೆಯೋ ಅವರಿಗೆ ಸಾಲ ರೂಪದಲ್ಲಿ ಕೊಡುತ್ತದೆ.

2. ಬ್ಯಾಂಕು ವ್ಯವಹಾರಗಳೆಂದರೇನು?
- ಯಾವುದೇ ಒಂದು ಬ್ಯಾಂಕಿನ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳು ಎನ್ನುತ್ತಾರೆ.

3. ಬ್ಯಾಂಕ್ ಸಾಲ ಎಂದರೇನು?

- ಬ್ಯಾಂಕುಗಳು ಗ್ರಾಹಕರಿಂದ ಸ್ವೀಕರಿಸಿದ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ.

4. ಭಾರತದ ರಿಸರ್ವ್ ಬ್ಯಾಂಕನ್ನು 'ಬ್ಯಾಂಕುಗಳ ತಾಯಿ'/ 'ಬ್ಯಾಂಕುಗಳ ಬ್ಯಾಂಕು' ಎಂದು ಏಕೆ ಕರೆಯುತ್ತಾರೆ?
- ಭಾರತದ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

5. ಭಾರತೀಯ ಬ್ಯಾಂಕು ಉದ್ಯಮದಲ್ಲಿನ ಇತ್ತೀಚಿನ ಪ್ರಮುಖ ಬೆಳವಣಿಗೆ ಏನು?
- ಅಂಚೆ ಕಛೇರಿಗಳನ್ನು ಬ್ಯಾಂಕು ವ್ಯವಹಾರಗಳ ಅಂಕಿತದೊಳಕ್ಕೆ ತಂದಿರುವುದು.

6. ವಿದ್ಯಾರ್ಥಿಗಳು, ಹಿರಿಯ ನಾಗರೀಕರು ಮತ್ತು ಪಿಂಚಣಿದಾರರಿಗೆ ಸಾಮಾನ್ಯವಾಗಿ ಉಳಿತಾಯ ಖಾತೆ ಸೂಕ್ತವಾದುದು. ಏಕೆ?
- ಇವರು ಸಾಮಾನ್ಯವಾಗಿ ನಿಯಮಿತ ಆದಾಯ / ವೇತನ ಪಡೆಯುವ ಜನರಾಗಿರುವುದರಿಂದ ಇವರಿಗೆ ಉಳಿತಾಯ ಖಾತೆಯು ಸೂಕ್ತವಾಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

1. ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.
- ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
- ಒಬ್ಬ ವ್ಯಕ್ತಿ/ಒಂದು ಸಂಸ್ಥೆ/ಕಂಪನಿ ಆಗಿರಬಹುದು.
- ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತವೆ.
- ಬ್ಯಾಂಕುಗಳು ಸಾಲವನ್ನು ನೀಡುತ್ತವೆ.
- ಗ್ರಾಹಕರಿಗೆ ಉಪಯುಕ್ತ ಸೇವೆಗಳನ್ನು ಒದಗಿಸುತ್ತದೆ.
- ಠೇವಣಿದಾರ & ಸಾಲಗಾರರ ಮಧ್ಯೆ ಕೊಂಡಿಯಾಗಿದೆ.
- ಹೆಸರಿನೊಂದಿಗೆ ಬ್ಯಾಂಕ್ ಎಂಬ ಪದವಿರುತ್ತದೆ.
- ಚೆಕ್/ಹುಂಡಿಗಳ ಮೂಲಕ ಹಣವನ್ನು ಪಾವತಿಸುತ್ತವೆ.

2. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?
- ಠೇವಣಿಗಳನ್ನು ಅಂಗೀಕರಿಸುವುದು.
- ಸಾಲ ಕೊಡುವುದು.
- ಹಣವನ್ನು ವರ್ಗಾಯಿಸುವುದು.
- ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲಿ.
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ವಿದೇಶಿ ವಿನಿಮಯದ ವ್ಯವಹಾರಗಳ ನಿರ್ವಹಣೆ.

3. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ವಿವರಿಸಿ.
- ಬ್ಯಾಂಕ್ & ಗ್ರಾಹಕರಿಗೂ ಇರುವ ಸಂಬಂಧಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸಬಹುದಾಗಿದೆ.
- ಸಾಮಾನ್ಯ ಸಂಬಂಧ:-ಇದರಲ್ಲಿ ಮೂರು ಪ್ರಕಾರಗಳಿವೆ

1.ಪ್ರಾಥಮಿಕ ಸಂಬಂಧ
2.ಸಹಾಯಕ ಸಂಬಂಧ
3.ಕಾರುಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ

- ವಿಶೇಷ ಸಂಬಂಧ:- ಇದರಲ್ಲಿ ಎರಡು ಪ್ರಕಾರಗಳಿವೆ.

1.ಚೆಕ್ಕುಗಳನ್ನು ಮನ್ನಣೆ ಮಾಡುವುದು.
2.ಗ್ರಾಹಕರ ಲೆಕ್ಕಗಳ ಗೌಪ್ಯತೆ ಕಾಪಾಡುವುದು.

4. ಅಂಚೆಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನ ಸಹ ಕೈಗೊಳ್ಳುತ್ತಿವೆ. ಸಮರ್ಥಿಸಿ.
- ರಾಷ್ಟ್ರೀಯ ಉಳಿತಾಯ ಪತ್ರ
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರ
- ಆವರ್ತ ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿ ವೇತನ
- ಹಣದ ವರ್ಗಾವಣೆ

5. ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ.
- ಬ್ಯಾಂಕ್ ಖಾತೆಯನ್ನು ನಿರ್ಧರಿಸುವುದು
- ಬ್ಯಾಂಕ್ ಅಧಿಕಾರಿಯನ್ನು ಸಂಪರ್ಕಿಸುವುದು
- ಪ್ರಸ್ತಾವನೆ ಅರ್ಜಿಯನ್ನು ತುಂಬುವುದು
- ಪರಿಚಿತರ ಉಲ್ಲೇಖನವನ್ನು ಕೊಡುವುದು
- ಅರ್ಜಿಯನ್ನು ಅಧಿಕಾರಿಗೆ ಒಪ್ಪಿಸುವುದು
- ಅಧಿಕಾರಿಯ ಒಪ್ಪಿಗೆ
- ಆರಂಭಿಕ ಠೇವಣಿ

6. ಬ್ಯಾಂಕ್ ಖಾತೆ ತೆರೆಯುವುದರಿಂದ ಆಗುವ ಅನುಕೂಲಗಳಾವುವು?
- ಹಣದ ಭದ್ರತೆ ಕಾಪಾಡುತ್ತದೆ.
- ಹಣದ ಪಾವತಿಗಳನ್ನುಮಾಡಲು ಸಹಾಯಕವಾಗಿದೆ.
- ಹಣವನ್ನು ವಸೂಲಿ ಮಾಡಲು ಸಹಾಯ ಮಾಡುತ್ತದೆ.
- ಸಾಲ ಪಡೆಯಲು ಸಾಧ್ಯವಾಗುತ್ತದೆ.
- ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ.
- ಭದ್ರತಾ ಕಪಾಟುಗಳನ್ನು ಪಡೆಯಬಹುದು.

7. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಿಗಿರು ವ್ಯತ್ಯಾಸಗಳೇನು?

ಉಳಿತಾಯ ಖಾತೆ
- ವೇತನ ಪಡೆಯುವವರು/ನಿಯಮಿತ ಆದಾಯ ಹೊಂದಿರುವ ಜನರು ಈ ಖಾತೆಯನ್ನು ತೆರೆಯುತ್ತಾರೆ.
- ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
- ಈ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ

ಚಾಲ್ತಿ ಖಾತೆ
- ವ್ಯಾಪಾರಸ್ಥರು, ವಾಣಿಜ್ಯ & ಔದ್ಯೋಗಿಕ ಸಂಸ್ಥೆಗಳು ಈ ಖಾತೆಯನ್ನು ತೆರೆಯುತ್ತಾರೆ.
- ಮರು ಪಾವತಿ, ಬೇಡಿಕೆ ಠೇವಣಿಗಳು ಮತ್ತು ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
- ಈ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ.

8. ಬ್ಯಾಂಕ್ ಒದಗಿಸುವ ವಿವಿಧ ಸೇವೆಗಳನ್ನು ಪಟ್ಟಿ ಮಾಡಿ.
- ಜಮಾ ಕಾರ್ಡುಗಳನ್ನು ಕೊಡುವುದು.
- ಮನೆಕಟ್ಟಲು, ವಾಹನ ಖರೀದಿಗೆ ಸಾಲ ನೀಡುವುದು.
- ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
- ಭದ್ರತಾ/ರಕ್ಷಣಾ ಕಪಾಟುಗಳನ್ನು ಕೊಡುವುದು.
- ಭರವಸೆಯ ಸೇವೆಗಳು
- ಸಹಿಗಳಿಗೆ ಜವಾಬ್ದಾರಿ ಹಾಕುವುದು.

9. ಬ್ಯಾಂಕುಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.
- ಕೇಂದ್ರ ಬ್ಯಾಂಕು ಅಥವಾ ರಿಜರ್ವ್ ಬ್ಯಾಂಕು
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

# 2. ಉದ್ಯಮಗಾರಿಕೆ

**ಬಹುಆಯ್ಕೆ ಪ್ರಶ್ನೆಗಳು:**

**1. ಅಪೋಲೋ ವೈದ್ಯ ಶಾಲೆಗಳನ್ನು ಸ್ಥಾಪಿಸಿದವರು**

**ಎ) ಡಾ. ಪ್ರತಾಪರೆಡ್ಡಿ** ಬಿ) ನರೇಶ್ ಗೋಯಲ್

ಸಿ) ನಾರಾಯಣ ಮೂರ್ತಿ ಡಿ) ವರ್ಗಿಸ್ ಕುರಿಯನ್

**2. ಜೆಟ್ ಏರ್ ವೇಸ್‌ನ ಸ್ಥಾಪಕರು**

ಎ) ಡಾ. ಪ್ರತಾಪರೆಡ್ಡಿ **ಬಿ) ನರೇಶ್ ಗೋಯಲ್**

ಸಿ) ನಾರಾಯಣ ಮೂರ್ತಿ ಡಿ) ವರ್ಗಿಸ್ ಕುರಿಯನ್

**3. ವಿಶ್ವವಿಖ್ಯಾತ ಇನ್ಫೋಸಿಸ್ ತಂತ್ರಜ್ಞಾನ ನಿಗಮದ ಸ್ಥಾಪಕರು**

ಎ) ಡಾ. ಪ್ರತಾಪರೆಡ್ಡಿ ಬಿ) ನರೇಶ್ ಗೋಯಲ್

**ಸಿ) ನಾರಾಯಣ ಮೂರ್ತಿ** ಡಿ) ವರ್ಗೀಸ್ ಕುರಿಯನ್

**4. ಭಾರತದ 'ಬಿಳಿಕ್ರಾಂತಿಯ ಪಿತಾಮಹಾ' ಎಂದು ಕರೆಯಲ್ಪಟ್ಟವರು**

ಎ) ಡಾ. ಪ್ರತಾಪರೆಡ್ಡಿ ಬಿ) ನರೇಶ್ ಗೋಯಲ್

ಸಿ) ನಾರಾಯಣ ಮೂರ್ತಿ **ಡಿ) ವರ್ಗೀಸ್ ಕುರಿಯನ್**

**5. ಪ್ರಖ್ಯಾತ ರಿಲಯನ್ಸ್ ಕಂಪನಿಯ ಸ್ಥಾಪಕರು**

**ಎ) ಧೀರುಭಾಯಿ ಅಂಬಾನಿ** ಬಿ) ವರ್ಗೀಸ್ ಕುರಿಯನ್

ಸಿ) ಕಿರಣ್ ಮುಜುಮ್‌ದಾರ್ ಷಾ ಡಿ) ಏಕ್ತಾ ಕಪೂರ್

**6. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು**

**ಎ) ಅಜೀಮ್ ಪ್ರೇಮ್‌ಜಿ** ಬಿ) ವರ್ಗೀಸ್ ಕುರಿಯನ್

ಸಿ) ಕಿರಣ್ ಮುಜುಮ್‌ದಾರ್ ಷಾ ಡಿ) ಏಕ್ತಾ ಕಪೂರ್

**7. ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ" ಎಂದೇ ಹೆಸರಾದವರು**

ಎ) ಅಜೀಮ್ ಪ್ರೇಮ್‌ಜಿ ಬಿ) ವರ್ಗೀಸ್ ಕುರಿಯನ್

ಸಿ) ಕಿರಣ್ ಮುಜುಮ್‌ದಾರ್ ಷಾ **ಡಿ) ಏಕ್ತಾ ಕಪೂರ್**

**8. ಇವರು ಬಯೋಕಾನ್ ನಿಗಮ ಅಧ್ಯಕ್ಷರು**

ಎ) ಅಜೀಮ್ ಪ್ರೇಮ್‌ಜಿ ಬಿ) ವರ್ಗೀಸ್ ಕುರಿಯನ್

**ಸಿ) ಕಿರಣ್ ಮುಜುಮ್‌ದಾರ್ ಷಾ** ಡಿ) ಏಕ್ತಾ ಕಪೂರ್

**9. ಧೀರುಭಾಯಿ ಅಂಬಾನಿ ಸ್ಥಾಪಿಸಿದ ಸಂಸ್ಥೆ**

ಎ) ಬಯೋಕಾನ್ **ಬಿ) ರಿಲಯನ್ಸ್**

ಸಿ) ಇನ್ಫೋಸಿಸ್ ಡಿ) ಜೆಟ್ ಏರ್ ವೇಸ್

**10. 2001 ರಲ್ಲಿ ವರ್ಷದ ಶ್ರೇಷ್ಠ ಉದ್ಯಮಿ ಪ್ರಶಸ್ತಿಯನ್ನು ಪಡೆದ ಯುವ ಉದ್ಯಮಿ**

ಎ) ಅಜೀಮ್ ಪ್ರೇಮ್‌ಜಿ ಬಿ) ವರ್ಗೀಸ್ ಕುರಿಯನ್

ಸಿ) ಕಿರಣ್ ಮುಜುಮ್‌ದಾರ್ ಷಾ **ಡಿ) ಏಕ್ತಾ ಕಪೂರ್**

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:**

1. ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಉದ್ಯಮಗಳ ಪಾತ್ರ ಮಹತ್ವದ್ದಾಗಿದೆ. ಏಕೆ?
- ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
2. ಉದ್ಯಮಿ ಎಂದರೆ ಯಾರು?
- ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನೇ ಉದ್ಯಮಿ.
3. ಉದ್ಯಮಗಾರಿಕೆ ಎಂದರೇನು?
- ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನತ್ತೇವೆ.
4. ಉದ್ಯಮಿಯು ದೇಶವೊಂದರ ಸಂಪತ್ತು ಹೇಗೆ?
- ಉದ್ಯಮಿಗಳು ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿರುವುದರಿಂದ ಅವರು ದೇಶದ ಸಂಪತ್ತಾಗಿದ್ದಾರೆ.
5. ಉದ್ಯಮಿಗಳು ಬಂಡವಾಳವನ್ನು ಹೇಗೆ ಸಂಗ್ರಹಿಸುತ್ತಾರೆ?
- ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ.
6. ಉದ್ಯಮಿಗಳು ದೇಶವೊಂದರ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತಾರೆ. ಹೇಗೆ?
- ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:**

1. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ ಹೇಗೆ? \ಉದ್ಯಮಗಾರಿಕೆಯು ಸೃಜನಾತ್ಮಕ ಚಟುವಟಿಕೆಯಾಗಿದೆ. ಏಕೆ?
- ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆ ಆಗಿದೆ.
- ಇದು ಶೂನ್ಯದಿಂದ ಏನಾದರೊಂದನ್ನು ಸೃಷ್ಟಿಸುವ ಸಾಮರ್ಥ್ಯವಾಗಿದೆ.
- ಬೇರೆಯವರಿಂದ ಕಷ್ಟಸಾಧ್ಯವಾದ ಅವಕಾಶವನ್ನು ಗುರುತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ.
2. ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ವಿವರಿಸಿ
- ಸೃಜನಾತ್ಮಕ
- ಕ್ರಿಯಾತ್ಮಕ
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನಬದ್ಧತೆ
- ನಾಯಕತ್ವ
- ಗುರಿ ಮುಟ್ಟುವಿಕೆ
- ಗುಂಪು ಕಟ್ಟುವುದು
3. ಉದ್ಯಮಿಯ ಕಾರ್ಯಗಳಾವುವು?
- ವ್ಯಾಪಾರ ಚಟುವಟಿಕೆಗಳನ್ನು ಪ್ರಾರಂಭಿಸುವುದು
- ಉತ್ಪಾದನಾಂಗಗಳನ್ನು ಸಂಯೋಜಿಸುವುದು
- ನಿರ್ಧಾರಗಳನ್ನು ಕೈಗೊಳ್ಳುವುದು
- ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುವುದು
- ಹಣಕಾಸಿನ ಆಯವ್ಯಯ ನಿರ್ವಹಿಸುವುದು
- ಕಷ್ಟ-ನಷ್ಟಗಳನ್ನು & ಅನಿಶ್ಚಿತೆಗಳನ್ನು ಎದುರಿಸುವುದು
- ಸೂಕ್ತ ಮಾರ್ಗದರ್ಶನ ನೀಡುವುದು
4. ಆರ್ಥಿಕಾಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವನ್ನು ವಿವರಿಸಿ. / 'ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಯ ಪಾತ್ರ ಮಹತ್ವದ್ದಾಗಿದೆ' ಈ ಹೇಳಿಕೆಯನ್ನು ವಿಮರ್ಶಿಸಿ. / ಆರ್ಥಿಕಾಭಿವೃದ್ಧಿಯಲ್ಲಿ ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.
- ಬಂಡವಾಳ ನಿರ್ಮಾಣ
- ಅಧಿಕ ಪ್ರಮಾಣದ ಉದ್ಯೋಗಾವಕಾಶ
- ಜಿಡಿಪಿ ಮತ್ತು ತಲಾದಾಯದ ಹೆಚ್ಚಳ
- ಪ್ರಾಂತೀಯ ತಾರತಮ್ಯ ನಿವಾರಣೆ
- ರಫ್ತು ವ್ಯಾಪಾರ ಹೆಚ್ಚಳ
- ಮಾರುಕಟ್ಟೆ ಅಭಿವೃದ್ಧಿ
- ಜೀವನಮಟ್ಟ ಸುಧಾರಣೆ
- ಆದಾಯ ಮತ್ತು ಸಂಪತ್ತಿನ ವಿಕೇಂದ್ರೀಕರಣ
5. ಉದ್ಯಮ ಪ್ರವರ್ತಕ ಸಂಸ್ಥೆಗಳನ್ನು ಯಾವ ಉದ್ದೇಶದಿಂದ ಸ್ಥಾಪಿಸಲಾಗಿದೆ?
- ಈ ಸಂಸ್ಥೆಗಳು ಉದ್ದಿಮೆಗಳನ್ನು ಹುಟ್ಟು ಹಾಕಲು ಮತ್ತು ಸ್ಥಾಪಿಸಲು ಸಹಾಯ ಮಾಡುತ್ತದೆ.
- ಉದ್ಯಮಿಗಳಿಗೆ ಬೇಕಾದ ಹಣಕಾಸು, ತರಬೇತಿ, ಮಾರುಕಟ್ಟೆ ಮುಂತಾದವುಗಳಿಗೆ ನೆರವು ನೀಡುತ್ತದೆ.
6. ಯಾರೇ ಒಬ್ಬ ಮನುಷ್ಯನಾಗಲಿ ಸ್ವ ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಸಲಹೆ ಸೌಕರ್ಯಗಳಿಗೆ ಆರಿಸಿಕೊಳ್ಳಬೇಕಾದ ಸಂಸ್ಥೆಗಳು ಯಾವುವು?
- ಜಾಹಿರಾತು ಸೇವಾಸಂಸ್ಥೆಗಳು
- ಮಾರುಕಟ್ಟೆ ಸಲಹಾ ಸಂಸ್ಥೆಗಳು
- ಕೈಗಾರಿಕಾ ಸಲಹಾ ಕೇಂದ್ರ
- ಛಾಯಾಪ್ರತಿ ತೆಗೆಯುವ ಕೇಂದ್ರಗಳು
- ದೂರದರ್ಶನ ಜಾಲ ಬಂಧದ ಸೇವಾಕ್ಷೇತ್ರಗಳು
- ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು
- ಅಂತರ್ಜಾಲ ಮತ್ತು ಸಂವಹನ ಅಂಗಡಿಗಳು
7. ಭಾರತದಲ್ಲಿರುವ ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.

- ಜಿಲ್ಲಾ ಕೈಗಾರಿಕಾ ಕೇಂದ್ರಗಳು
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
- ಕೈಗಾರಿಕಾ ಪ್ರದೇಶಗಳು
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ
- ತಾಂತ್ರಿಕ ಸಲಹಾ ಸಂಸ್ಥೆಗಳು

8. ಭಾರತದಲ್ಲಿ ಉದ್ಯಮಿಗಳ ಸ್ವಯಂ ಉದ್ಯೋಗ ಅಭಿವೃದ್ಧಿಗೆ ಹಣಕಾಸಿನ ನೆರವು ನೀಡುತ್ತಿರುವ ಸಂಸ್ಥೆಗಳನ್ನು ಪಟ್ಟಿ ಮಾಡಿರಿ.

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ & ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಕೈಗಾರಿಕಾ ಹಣಕಾಸು ನಿಗಮ
- ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ರಾಜ್ಯ ಹಣಕಾಸು ನಿಗಮ
- ಭಾರತೀಯ ಜೀವ ವಿಮಾ ನಿಗಮ

9. ವರ್ಗಿಸ್ ಕುರಿಯನ್‌ರವರ ಸಾಧನೆಯನ್ನು ವಿವರಿಸಿ.

- ವರ್ಗಿಸ್ ಕುರಿಯನ್‌ರವರನ್ನು ಭಾರತದ 'ಶ್ವೇತ ಕ್ರಾಂತಿ'ಯ ಪಿತಾಮಹಾನೆಂದು ಕರೆಯಲಾಗಿದೆ.
- ಅಮುಲ್ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆಯಾಗಿದೆ.
- ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಹೈನುಗಾರಿಕೆಯನ್ನು ಸಣ್ಣ ಪ್ರಮಾಣದಲ್ಲಿ ಆರಂಭಿಸಿ ಬೃಹತ್ತಾಗಿ ಭಾರತದಲ್ಲೇ ದೊಡ್ಡ ಹೈನುಗಾರಿಕೆಯಾಗಿ ಅಭಿವೃದ್ಧಿ ಸಾಧಿಸಿದರು.

10. ಅಜೀಮ್ ಪ್ರೇಮ್‌ಜಿ ಬಗ್ಗೆ ಟಿಪ್ಪಣಿ ಬರೆಯಿರಿ.

- ಅಜೀಮ್ ಪ್ರೇಮ್‌ಜಿ ವಿಪ್ರೋ ಸಂಸ್ಥೆಯ ಈಗಿನ ಅಧ್ಯಕ್ಷರಾಗಿದ್ದಾರೆ.
- ಇದೊಂದು ಭಾರತದ ಪ್ರತಿಷ್ಠಿತ ಸಾಫ್ಟವೇರ್ ಕಂಪನಿಯಾಗಿದೆ.
- ವಿಶ್ವದ ಅನೇಕ ರಾಷ್ಟ್ರಗಳಲ್ಲಿ ತನ್ನ ವ್ಯವಹಾರಗಳನ್ನು ನಡೆಸುತ್ತಿದೆ.

11. ಇನ್‌ಫೋಸಿಸ್ ಸಂಸ್ಥೆಯ ಟಿಪ್ಪಣಿ ಬರೆಯಿರಿ.

- ನಾರಾಯಣ ಮೂರ್ತಿಯವರು 1999ರಲ್ಲಿ ಇನ್‌ಫೋಸಿಸ್ ಸಂಸ್ಥೆಯನ್ನು ಪ್ರಾರಂಭಿಸಿದರು.
- ಇನ್‌ಫೋಸಿಸ್ ನಾಸ್‌ಡಾಕ್‌ನಲ್ಲಿ ನೋಂದಾಯಿತ ಭಾರತದ ಪ್ರಥಮ ತಂತ್ರಜ್ಞಾನ ಸಂಸ್ಥೆಯಾಗಿದೆ.

12. ಕಿರಣ್ ಮುಜುಮ್‌ದಾರ್ ಷಾ ಬಗ್ಗೆ ಟಿಪ್ಪಣಿ ಬರೆಯಿರಿ.

- ಕಿರಣ್ ಮುಜುಮ್‌ದಾರ್ ಷಾರವರು ಬಯೋಕಾನ್ ನಿಗಮದ ಅಧ್ಯಕ್ಷರು & ಆಡಳಿತ ನಿರ್ದೇಶಕರಾಗಿದ್ದಾರೆ.
- ಈ ನಿಗಮವು ಭಾರತದ ಅತಿ ದೊಡ್ಡ ಜೀವವಿಜ್ಞಾನ ತಂತ್ರಜ್ಞಾನದ ಸಂಸ್ಥೆಯಾಗಿದೆ.
- 1978ರಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಕ್ಷೇತ್ರ ಮಹಿಳೆಯರಿಗೆ ಹೊಸದಾಗಿತ್ತು.

# 3. ವ್ಯವಹಾರ ಜಾಗತೀಕರಣ

## <u>ಬಹು ಆಯ್ಕೆ ಪ್ರಶ್ನೆಗಳು:</u>

**1. ಜಾಗತೀಕರಣವು ತೀವ್ರ ಪ್ರಗತಿ ಸಾಧಿಸಿದ್ದು**

ಎ) 1870 ರಲ್ಲಿ　　ಬಿ) 1913ರಲ್ಲಿ

ಸಿ) 1950 ರಲ್ಲಿ　　**<u>ಡಿ) 1980 ರಲ್ಲಿ</u>**

**2. ಭಾರತದ ಮಾರುಕಟ್ಟೆಯಲ್ಲಿ ಬೇರೆ ಬೇರೆ ದೇಶಗಳ ವಸ್ತುಗಳು ದೊರೆಯುತ್ತವೆ. ಇದಕ್ಕೆ ಕಾರಣ**

**<u>ಎ) ಜಾಗತೀಕರಣ</u>**　　ಬಿ) ಔದ್ಯೋಗಿಕರಣ

ಸಿ) ಖಾಸಗೀಕರಣ　　ಡಿ) ನಗರೀಕರಣ

**3. ವಿಶ್ವ ವ್ಯಾಪಾರ ಸಂಘಟನೆಯು ಸ್ಥಾಪನೆಯಾದುದು**

**<u>ಎ) 1995 ಜನವರಿ 1</u>**　　ಬಿ) 1995 ಜನವರಿ 10

ಸಿ) 1985 ಜೂನ್ 1　　ಡಿ) 1980 ಜನವರಿ 01

**4. ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಇರುವುದು**

ಎ)ರೋಮ್　　**<u>ಬಿ)ಜಿನೇವಾ</u>**

ಸಿ)ಪ್ಯಾರಿಸ್　　ಡಿ)ನ್ಯೂಯಾರ್ಕ್

## <u>ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:</u>

1. ಜಾಗತೀಕರಣ ಎಂದರೇನು?

- ಭಾರತದ ಅರ್ಥವ್ಯವಸ್ಥೆಯನ್ನು ವಿಶ್ವದ ಅರ್ಥವ್ಯವಸ್ಥೆಯ ಜೊತೆಗೆ ಒಗ್ಗೂಡಿಸುವ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುತ್ತೇವೆ.

2. ಪ್ರಪಂಚದ ವ್ಯವಹಾರ ಮಾರುಕಟ್ಟೆ ಹೇಗೆ ವಿಶ್ವವ್ಯಾಪಿಯಾಗಿದೆ?

- ಜಾಗತೀಕರಣದಿಂದ ಪ್ರಪಂಚದ ದೇಶಗಳ ಮಧ್ಯೆ ನಿಕಟ ಸಂಬಂಧ ಮತ್ತು ಪರಸ್ಪರ ಅನ್ಯೋನ್ಯತೆ ಉಂಟಾಗಿ ವ್ಯವಹಾರ ಮತ್ತು ಮಾರುಕಟ್ಟೆಯು ವಿಶ್ವವ್ಯಾಪಿಯಾಗಿದೆ.

3. ಜಾಗತೀಕರಣವು ಮುಕ್ತ ವ್ಯಾಪಾರ ವಲಯವನ್ನು ಸೃಷ್ಟಿಸುತ್ತದೆ. ಹೇಗೆ?

- ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನೆ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುತ್ತದೆ.

4. ಸಮುದ್ರಯಾನದಲ್ಲಿ ಯಾವ ಸೇವೆಯಿಂದ ಸಾರಿಗೆ ವೆಚ್ಚವನ್ನು ಕಡಿಮೆ ಮಾಡಬಹುದು?

- ಸಮುದ್ರಯಾನದಲ್ಲಿ ಕಂಟೈನರ್ ಸೇವೆಯಿಂದ ಸಾರಿಗೆ ವೆಚ್ಚವನ್ನು ಕಡಿಮೆ ಮಾಡಬಹುದು.

5. ಜಾಗತೀಕರಣವು ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಹೇಗೆ ಸಹಕರಿಸುತ್ತದೆ?

- ಜಾಗತೀಕರಣ ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ ಮತ್ತು ಸಾಂಸ್ಕೃತಿಕ ಪದ್ಧತಿಗಳ ಹರಡುವಿಕೆಗೆ ಕಾರಣವಾಗುವುದರಿಂದ ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.

6. ಜಾಗತೀಕರಣದಿಂದಾಗಿ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಉಂಟಾಗಿದೆ ಎಂದು ಹೇಗೆ ಹೇಳುವಿರಿ?

- ಜಾಗತೀಕರಣದಿಂದಾಗಿ ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವುದರಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.

7. ಜಾಗತೀಕರಣದಿಂದ ವಸ್ತುಗಳ ಬೆಲೆ ಕಡಿಮೆಯಾಗುತ್ತದೆ ಹೇಗೆ?

- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆಯಾಗುತ್ತವೆ.

8. 'ಜಾಗತೀಕರಣದಿಂದ ಉತ್ತಮ ಗುಣಮಟ್ಟದ ವಸ್ತುಗಳ ಉತ್ಪಾದನೆಯು ಸಾಧ್ಯವಾಗಿದೆ'. ಈ ಹೇಳಿಕೆಯನ್ನು ಸಮರ್ಥಿಸಿ.

- ಜಾಗತೀಕರಣವು ಸರಕುಗಳ ಉತ್ಪಾದನೆಯಲ್ಲಿ ಪ್ರಾವೀಣ್ಯತೆಯನ್ನು ಸೃಷ್ಟಿಸಿ ಉತ್ತಮ ಗುಣಮಟ್ಟದ ವಸ್ತುಗಳ ಉತ್ಪಾದನೆಗೆ ಕಾರಣವಾಗುತ್ತದೆ.

## <u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>

1. ಜಾಗತೀಕರಣದ ಲಕ್ಷಣಗಳನ್ನು ತಿಳಿಸಿ.

- ಅಂತರರಾಷ್ಟ್ರೀಯ ವ್ಯಾಪಾರದ ಹೆಚ್ಚಳ
- ಬಂಡವಾಳದ ಹರಿವು & ಹೂಡಿಕೆಯ ಹೆಚ್ಚಳ
- ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳ ಸೃಷ್ಟಿ
- ಐ.ಎಂ.ಎಫ್ ಮತ್ತು ಡಬ್ಲ್ಯು.ಟಿ.ಓ.ಗಳ ಪಾತ್ರ ಹೆಚ್ಚಳ
- ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ

2. ಜಾಗತೀಕರಣದ ಅನುಕೂಲಗಳನ್ನು ಪಟ್ಟಿ ಮಾಡಿರಿ.

- ತಂತ್ರಜ್ಞಾನ & ಬಂಡವಾಳದ ಒಳಹರಿವಿಗೆ ಅವಕಾಶ
- ಉತ್ಪಾದನೆಯಲ್ಲಿ ದಕ್ಷತೆ ಮತ್ತು ಗುಣಮಟ್ಟದ ಹೆಚ್ಚಳ
- ದೇಶೀಯ ರಾಷ್ಟ್ರೀಯ ಉತ್ಪನ್ನದ ಹೆಚ್ಚಳ
- ದೇಶದ ಜನರ ಆದಾಯದಲ್ಲಿ ಹೆಚ್ಚಳ
- ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ

3. ಜಾಗತೀಕರಣದಿಂದ ಪ್ರಪಂಚದ ದೇಶಗಳ ನಡುವೆ ನಿಕಟ ಸಂಬಂಧ ಉಂಟಾಗಿದೆ. ಹೇಗೆ?
- ತಾಂತ್ರಿಕ ಮತ್ತು ಸಂಪರ್ಕ ಸಾಧನಗಳು ಮತ್ತು ಅಂತರ್ಜಾಲ ಸಂವಹನಗಳಿಂದಾಗಿ ದೊಡ್ಡ ವ್ಯವಹಾರ ಘಟಕಗಳು ಜಾಗತಿಕ ಘಟಕಗಳಾಗಿವೆ.
- ಇವುಗಳ ಚಟುವಟಿಕೆಗಳು ಅವುಗಳ ಸ್ಥಾಪನಾ ಸ್ಥಳಕ್ಕೆ ಮಾತ್ರ ಸೀಮಿತವಾಗಿರದೆ ವಿಶ್ವದಾದ್ಯಂತ ವಿಸ್ತರಿಸಿವೆ.
- ಇದರಿಂದಾಗಿ ಪ್ರಪಂಚದ ದೇಶಗಳ ಮಧ್ಯೆ ನಿಕಟ ಸಂಬಂಧ ಮತ್ತು ಪರಸ್ಪರ ಅನ್ಯೋನ್ಯತೆ ಉಂಟಾಗಿದೆ

4. 'ಜಾಗತೀಕರಣದಿಂದ ವಿಶ್ವದಾದ್ಯಂತ ಆರ್ಥಿಕ ಚಳುವಳಿ ಆಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.
- ಜಾಗತೀಕರಣವು ಆಧುನಿಕ ತಂತ್ರಜ್ಞಾನ ಮತ್ತು ವಿದೇಶಿ ಒಳಹರಿವಿಗೆ ಅವಕಾಶ ಮಾಡಿಕೊಡುತ್ತದೆ.
- ಹಾಗಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಅಗತ್ಯವಾಗಿದೆ.
- ಆರ್ಥಿಕಾಭಿವೃದ್ಧಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಮುಂದುವರೆದ ರಾಷ್ಟ್ರಗಳಿಗೂ ಅತ್ಯಗತ್ಯವಾಗಿದೆ.
- ಆದ್ದರಿಂದ ಜಾಗತೀಕರಣದಿಂದ ವಿಶ್ವದಾದ್ಯಂತ ಆರ್ಥಿಕ ಚಳುವಳಿಯಾಗಿದೆ.

5. 'ಜಾಗತೀಕರಣ ದೇಶಗಳ ನಡುವೆ ಸಾಮಾಜಿಕ ಮತ್ತು ರಾಜಕೀಯ ಸಾಮರಸ್ಯವನ್ನು ಹೆಚ್ಚಿಸುತ್ತದೆ.' ಈ ಹೇಳಿಕೆಯನ್ನು ಸಮರ್ಥಿಸಿ
- ಜಾಗತೀಕರಣದಿಂದ ವಿಶ್ವ ಕುಟುಂಬದ ಪರಿಕಲ್ಪನೆ ಉಂಟಾಗಿದೆ.
- ಜಾಗತೀಕರಣವು ರಾಷ್ಟ್ರಗಳ ಮಧ್ಯೆ ಆರ್ಥಿಕ ಅವಲಂಬನೆಯನ್ನು ಉಂಟು ಮಾಡಿದೆ.
- ಪರಿಣಾಮವಾಗಿ ರಾಷ್ಟ್ರಗಳ ನಡುವೆ ಸಾಮಾಜಿಕ ಮತ್ತು ರಾಜಕೀಯ ಸಾಮರಸ್ಯ ಉಂಟಾಗಲು ಸಾಧ್ಯವಾಗಿದೆ.

6. ಜಾಗತೀಕರಣವು ದೋಷಗಳನ್ನು ಪಟ್ಟಿ ಮಾಡಿರಿ.
- ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಅವನತಿ
- ಶ್ರೀಮಂತರು&ಬಡವರ ನಡುವಿನ ಅಂತರ ಹೆಚ್ಚಳ
- ಪರಿಸರದ ಅವನತಿ
- ಕಾರ್ಮಿಕರ ಅಭದ್ರತೆ
- ಮಾರಣಾಂತಿಕ ಖಾಯಿಲೆಗಳ ಹರಡುವಿಕೆ
- ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆ ಕೊರತೆ

7. ಜಾಗತೀಕರಣ ಸಾಂಪ್ರದಾಯಿಕ ಆಹಾರ ಸೇವನೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ. ವಿವರಿಸಿ
- ಜಾಗತೀಕರಣದಿಂದ ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತವೆ. ಉದಾ:- ಏಈಅ ಒಭಿಜಂಟಚಿಟಜ
- ಇದರಿಂದ ಪ್ರಯೋಜಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗಿ ಜನರ ಆರೋಗ್ಯ ಅವನತಿಯ ಕಡೆಗೆ ಸಾಗುತ್ತದೆ.
- ಅಲ್ಲದೆ ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.

8. 'ಜಾಗತೀಕರಣದಿಂದ ಅಭಿವೃದ್ಧಿ ಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವನ್ನೇ ನಾಶಮಾಡಬಹುದು.' ಈ ಹೇಳಿಕೆಯನ್ನು ವಿಮರ್ಶಿಸಿ
- ಜಾಗತೀಕರಣದ ಪೈಪೋಟಿಯ ಪರಿಣಾಮವಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳ ಹೊಸ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಾಗುವುದಿಲ್ಲ.
- ಅಲ್ಲದೆ ಈ ರಾಷ್ಟ್ರಗಳಿಗೆ ಮುಂದುವರೆದ ರಾಷ್ಟ್ರಗಳಿಂದ ಅಧಿಕ ಪ್ರಮಾಣದಲ್ಲಿ ಸರಕುಗಳು ಬರುತ್ತವೆ.
- ಇದರ ಪರಿಣಾಮವಾಗಿ ಸ್ಥಳೀಯ ವಸ್ತುಗಳ ಬೇಡಿಕೆ ಕಡಿಮೆಯಾಗಿ ಕ್ರಮೇಣ ಅಭಿವೃದ್ಧಿ ಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವೇ ನಾಶವಾಗುತ್ತದೆ.

9. ಜಾಗತೀಕರಣವು ಪರಸರದ ಅವನತಿಗೆ ಕಾರಣವಾಗಿದೆ ಹೇಗೆ?
- ನಗರೀಕರಣ
- ಕೈಗಾರಿಕಾ ತ್ಯಾಜ್ಯಗಳ ಶೇಖರಣೆ
- ಕಸದ ತೊಟ್ಟಿಗಳಾಗಿ ಶೇಖರಣೆ
- ಕೈಗಾರಿಕೀಕರಣದಿಂದ ವಾಯು ಮತ್ತು ಶಬ್ಧ ಮಾಲಿನ್ಯ
- ಪರಿಸರದ ಅವನತಿ

10. ವಿಶ್ವ ವ್ಯಾಪಾರ ಸಂಘಟನೆಯ ಯಾವುದಾದರೂ ನಾಲ್ಕು ಕಾರ್ಯ/ಗುರಿಗಳನ್ನು ತಿಳಿಸಿರಿ.
- ಸದಸ್ಯ ರಾಷ್ಟ್ರಗಳ ಜನರ ಜೀವನ ಮಟ್ಟ ಹೆಚ್ಚಿಸುವುದು.
- ವ್ಯಾಪಾರ ಸಂಬಂಧಿ ವ್ಯಾಜ್ಯಗಳನ್ನು ಬಗೆಹರಿಸುವುದು.
- ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು.
- ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.
- ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆ ಕಡಿಮೆ ಮಾಡುವುದು.

# 4. ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**ಬಹುಆಯ್ಕೆ ಪ್ರಶ್ನೆಗಳು:**

**1. ಗ್ರಾಹಕನಿಗಿರುವ ಮತ್ತೊಂದು ಹೆಸರು**

ಎ) ಪೂರೈಕೆದಾರ **ಬಿ) ಬಳಕೆದಾರ**

ಸಿ) ಉತ್ಪಾದಕ ಡಿ) ವಿತರಕ

**2. ಹಣ ಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ**

**ಎ) ಪೂರೈಕೆದಾರ** ಬಿ) ಬಳಕೆದಾರ

ಸಿ) ಉತ್ಪಾದಕ ಡಿ) ಗ್ರಾಹಕ

**3. ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲಿಗೆ -----ದೇಶದಲ್ಲಿ ಪ್ರಾರಂಭವಾಯಿತು.**

**ಎ) ಅಮೇರಿಕಾ** ಬಿ) ರಷ್ಯಾ

ಸಿ) ಭಾರತ ಡಿ) ಚೀನಾ

**4. ಮಾರುಕಟ್ಟೆಯ ರಾಜ ಎಂದು ಯಾರನ್ನು ಕರೆಯಲಾಗಿದೆ.**

ಎ) ಪೂರೈಕೆದಾರ ಬಿ) ಮಧ್ಯವರ್ತಿ

ಸಿ) ಉತ್ಪಾದಕ **ಡಿ) ಗ್ರಾಹಕ**

**5. ಪ್ರತಿವರ್ಷ ವಿಶ್ವ ಗ್ರಾಹಕರ ದಿನವನ್ನು ----- ರಂದು ಆಚರಿಸುತ್ತೇವೆ.**

ಎ) ಜನವರಿ 15 ಬಿ) ಫೆಬ್ರವರಿ 15

**ಸಿ) ಮಾರ್ಚ್ 15** ಡಿ) ಎಪ್ರಿಲ್ 15

**6. ಗ್ರಾಹಕ ಸಂರಕ್ಷಣಾ ಕಾಯಿದೆಯು ------ ರಾಜ್ಯವನ್ನು ಹೊರತು ಪಡಿಸಿ ಭಾರತದ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ.**

ಎ) ಕರ್ನಾಟಕ ಬಿ) ಆಂಧ್ರಪ್ರದೇಶ

**ಸಿ) ಜಮ್ಮು ಮತ್ತು ಕಾಶ್ಮೀರ** ಡಿ) ದೆಹಲಿ

**7. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ----- ಆಯೋಗಕ್ಕೆ ಸಲ್ಲಿಸಬೇಕು.**

ಎ) ತಾಲ್ಲೂಕು ವೇದಿಕೆ **ಬಿ) ಜಿಲ್ಲಾ ವೇದಿಕೆ**

ಸಿ) ರಾಜ್ಯ ಆಯೋಗ ಡಿ) ರಾಷ್ಟ್ರೀಯ ಆಯೋಗ

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:**

1. ಗ್ರಾಹಕ ಎಂದರೆ ಯಾರು?

- ಗ್ರಾಹಕರೆಂದರೆ ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಅಥವಾ ವೇತನ ಪ್ರತಿಫಲ ಕೊಟ್ಟು ಕೆಲಸ ಮಾಡಿಸಿಕೊಳ್ಳುವವರಾಗಿದ್ದಾರೆ ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವರಾಗಿದ್ದಾರೆ.

2. ಪೂರೈಕೆದಾರ ಎಂದರೆ ಯಾರು?
- ಹಣಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ ಪೂರೈಕೆದಾರ.

3. ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?
- ವ್ಯಾಪಾರಿಗಳು ಅಥವ ಪೂರೈಕೆದಾರರ ಶೋಷಣೆಯಿಂದ ಗ್ರಾಹಕರನ್ನು ಸಂರಕ್ಷಿಸುವುದು.

4. ಟೆಲಿಶಾಪಿಂಗ್ ಎಂದರೇನು?
- ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳಬಹುದಾಗಿದೆ. ಇದನ್ನು ಟೆಲಿಶಾಪಿಂಗ್ ಎನ್ನುತ್ತಾರೆ.

5. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?
- ಗ್ರಾಹಕನು ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳನ್ನು ಪಡೆಯುವುದು ಪ್ರತಿಯೊಬ್ಬ ಗ್ರಾಹಕನ ಹಕ್ಕಾಗಿದೆ.

6. ಗ್ರಾಹಕ ರಕ್ಷಣೆ ಎಂದರೇನು?
- ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ.

7. ಗ್ರಾಹಕರ ರಕ್ಷಣೆ ಅಗತ್ಯವಾಗಿದೆ. ಏಕೆ?
- ಗ್ರಾಹಕರನ್ನು ಶೋಷಣೆಯಿಂದ ಮುಕ್ತವಾಗಿಸಲು ಗ್ರಾಹಕರ ರಕ್ಷಣೆ ಅಗತ್ಯವಾಗಿದೆ.

8. ಗ್ರಾಹಕರ ಹಕ್ಕುಗಳ ಅರ್ಥ ತಿಳಿಸಿ.
- ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಕೊಡಲಾಗಿರುವ ಅನೇಕ ಹಕ್ಕುಗಳನ್ನು ಮತ್ತು ಭರವಸೆಗಳನ್ನು ಗ್ರಾಹಕರ ಹಕ್ಕುಗಳು ಎನ್ನುತ್ತೇವೆ.

**<u>ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:</u>**

1. ರಾಷ್ಟ್ರೀಯ ಗ್ರಾಹಕರ ಆಯೋಗದ ಕುರಿತು ಟಿಪ್ಪಣಿ ಬರೆಯಿರಿ.
- ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಛ ನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧಯಕ್ಷತೆಯಿಂದ ಕೂಡಿರುತ್ತದೆ.
- ಇಲ್ಲಿ ಇತರೆ ನಾಲ್ಕು ಸದಸ್ಯರಿದ್ದು, ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ.
- ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ.

2. ಬಳಕೆದಾರರ ಶೋಷಣೆಗೆ ಕಾರಣಗಳಾವುವು?
- ಮಾರಾಟ ವಿಧಾನದಲ್ಲಿನ ಬದಲಾವಣೆ.
- ಗ್ರಾಹಕ ಮತ್ತು ಪೂರೈಕೆದಾರರ ನಡುವೆ ನೇರ ವ್ಯವಹಾರ ಇಲ್ಲದಿರುವುದು.
- ಮಧ್ಯವರ್ತಿಗಳ ಹಾವಳಿ.
- ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸುವುದು.

3. ಪ್ರತಿ ವರ್ಷವು ಮಾರ್ಚ್ 15 ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ. ಏಕೆ?
- 1962ರ ಮಾರ್ಚ್ 15ರಂದು ಅಂದಿನ ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು.
- ಪರಿಣಾಮವಾಗಿ ಪ್ರತಿವರ್ಷವೂ ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ.

4. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿರಿ.
- ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ
- ಅಪಾಯಕಾರಿ ವಸ್ತುಗಳ ತಯಾರಿಕೆ & ಮಾರಾಟವನ್ನು ತಪ್ಪಿಸುವುದು
- ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು
- ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು
- ಬಳಕೆದಾರರು ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.

5. ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರಿಗೆ ನೀಡಿರುವ ಹಕ್ಕುಗಳಾವುವು? / ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಹಿತಾಸಕ್ತಿಯನ್ನು ಹೇಗೆ ಕಾಪಾಡುತ್ತದೆ?
- ಮಾಹಿತಿ ಪಡೆಯುವ ಹಕ್ಕು
- ವಸ್ತುಗಳ ಆಯ್ಕೆಯ ಹಕ್ಕು
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
- ಗ್ರಾಹಕ ಶಿಕ್ಷಣದ ಹಕ್ಕು
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು.

6. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.
- ಜಿಲ್ಲಾ ವೇದಿಕೆ
- ರಾಜ್ಯ ಆಯೋಗ
- ರಾಷ್ಟ್ರೀಯ ಆಯೋಗ..

7. ಜಿಲ್ಲಾ ಗ್ರಾಹಕರ ವೇದಿಕೆಯ ಕುರಿತು ತಿಳಿಸಿ.
- ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವೇದಿಕೆ ಇರುತ್ತದೆ.
- ರಾಜ್ಯ ಸರ್ಕಾರದಿಂದ ನಾಮಾಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ.
- ಇದರಲ್ಲಿ ಇಬ್ಬರು ಸದಸ್ಯರಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರುತ್ತಾರೆ.
- ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ.

8. ರಾಜ್ಯ ಗ್ರಾಹಕರ ಆಯೋಗದ ಕುರಿತು ಟಿಪ್ಪಣಿ ಬರೆಯಿರಿ.
- ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾದೀಶರಾಗಲೀ / ಹಾಲಿ ನ್ಯಾಯದೀಶರಾಗಲಿ ಅಧ್ಯಕ್ಷರಾಗಿರುತ್ತಾರೆ.
- ಇದರಲ್ಲಿ ಇಬ್ಬರು ಸದಸ್ಯರಿದ್ದು, ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ.
- ಈ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿಯವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

# ನಕ್ಷಾ ಪ್ರಶ್ನೆಗಳು.


ಭಾರತ
ಪ್ರಾಕೃತಿಕ
ಉತ್ತರದ ಮೈದಾನಗಳು
ಪರ್ಯಾಯ ಪ್ರಸ್ಥಭೂಮಿ
ಬಂಗಾಳ
ಕೊಲ್ಲಿ
ಅರಬ್ಬೀ
ಸಮುದ್ರ
ಉತ್ತರದ ಪರ್ವತಗಳು
ಉತ್ತರದ ಮೈದಾನಗಳು
ಪರ್ಯಾಯ ಪ್ರಸ್ಥಭೂಮಿ
ಪೂರ್ವ ಮತ್ತು ಪಶ್ಚಿಮ ಘಟ್ಟಗಳು
ಕರಾವಳಿ ಮೈದಾನಗಳು


ಭಾರತದ
ನದಿ ವ್ಯವಸ್ಥೆ
ನರ್ಮದಾ
ತಾಪಿ
ಮಹಾನದಿ
ಗೋದಾವರಿ
ಕೃಷ್ಣಾ
ಪೆನ್ನಾರ್
ಕಾವೇರಿ
ಲಕ್ಷದ್ವೀಪ
ಅಂಡಮಾನ್
ನಿಕೋಬರ್
ಶ್ರೀಲಂಕ


ಭಾರತದ
ವಿವಿಧೋದ್ದೇಶ ನದಿ
ಕಣಿವೆ ಯೋಜನೆಗಳು
ಭಾಕ್ರಾನಂಗಲ್
ತೆಹರಿ
ಗಂಡಕ್
ಕೋಸಿ
ಚಂಬಲ್
ರಿಹಾಂಡ್
ದಾಮೋದರ ಕಣಿವೆ
ನರ್ಮದಾ
ಹಿರಾಕುಡ್
ನಾಗಾರ್ಜುನ ಸಾಗರ
ತುಂಗಭದ್ರಾ
ಅರಬ್ಬೀ
ಸಮುದ್ರ
ಬಂಗಾಳ ಕೊಲ್ಲಿ




ಭಾರತ
ಅಂತಾರಾಷ್ಟ್ರೀಯ ವಿಮಾನ
ನಿಲ್ದಾಣಗಳು
ಶ್ರೀನಗರ
ಅಮೃತಸರ
ದೆಹಲಿ
ಜೈಪುರ
ಲಖನೌ
ಗಯಾ
ಗುವಹಾತಿ
ಅಹ್ಮದಾಬಾದ್
ಭೋಪಾಲ್
ಇಂದೋರ್
ನಾಗಪುರ
ಮುಂಬಯಿ
ಪುಣೆ
ಭುವನೇಶ್ವರ್
ಮರ್ಮಗೋವ
ಬೆಂಗಳೂರು
ಚೆನ್ನೈ
ಕೊಯಮತ್ತೂರು
ಕೊಚಿ
ತಿರುವನಂತಪುರ
ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ